<u>ಪ್ರಸ್ತಾವದ ಅಂಗೀಕಾರ</u>

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೆ, 2007 ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"2007 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೆಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>

2) <u>ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ 2007</u>

ಪರ್ಯಾಯಲೋಚನಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರು, 2007 ರ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಭೂ ಕಂದಾಯ ಸಚಿವರು ಏನು ವಿಧೇಯಕವನ್ನು ಮಂಡಿಸಿದರು ಅದರ ಪ್ರತಿರೂಪವೇನೂ ಇದಲ್ಲ. ಆದರೆ ಕೆಲವು ವಿಷಯಗಳ ಬಗ್ಗೆ ಅಲ್ಲಿ ಚರ್ಚೆಯ ಸಂದರ್ಭದಲ್ಲಿ ಈಗ ಕೇವಲ ಕಂದಾಯ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಭೂಮಿಯ ವಿಚಾರಗಳೇನು ಇವೆ ಅದರ ಆಚೆ ಬೇರೆ ಬೇರೆ ಭೂಮಿಗಳೂ ಕೂಡ ಇರುತ್ತವೆ. ಅದರಲ್ಲಿ ಸರ್ಕಾರದ ಗಮನಕ್ಕೆ ಬಂದಂತೆ ನಕಲಿ ಗೃಹ ನಿರ್ಮಾಣ ಸಂಘಗಳನ್ನು ಕಟ್ಟಿಕೊಂಡು ಅದರ ಮೂಲಕವಾಗಿ ಅನೇಕ ಅಮಾಯಕರಾದಂಥ ಸದಸ್ಯರಿಗೆ ಮೋಸ ಮಾಡಿರತಕ್ಕಂಥಾದ್ದು, ಧಾರ್ಮಿಕ ದತ್ತಿ ಸಂಸ್ಥೆಗಳಿಗೆ ಸೇರಿರತಕ್ಕಂಥ ದೇವಸ್ಥಾನದ ಮತ್ತು ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಭೂಮಿಯನ್ನು ಕಬಳಿಸಿಕೊಂಡಿರತಕ್ಕಂಥದ್ದು. ಕೊಳಚೆ

ಪ್ರದೇಶಗಳಿಗೆ ಸಂಬಂಧಪಟ್ಟಂಥ ಬೋರ್ಡ್‌ಗೆ ಸಂಬಂಧಪಟ್ಟಂಥ ಭೂಮಿಗಳನ್ನು ವಶಪಡಿಸಿಕೊಂಡಿರುವುದು. ಸ್ಮಶಾನಗಳನ್ನು ವಶಪಡಿಸಿಕೊಂಡಿರುವುದು. ಇಂಥ ಅನೇಕ ವಿಚಾರಗಳು ಬಂದಾಗ ಒಂದು ಬೃಹತ್ ಆಗಿರತಕ್ಕಂಥ ಎಲ್ಲ ವಿಚಾರಗಳೀಗೆ ಸಂಬಂಧಪಟ್ಟಿರತಕ್ಕಂಥಾದ್ದರ ಬಗ್ಗೆ ಒಂದು ಕಾನೂನನ್ನು ಮಾಡಬೇಕೆಂದು ಸರ್ಕಾರ ಈ ಬಗ್ಗೆ ನಿರ್ಧಾರ ತೆಗೆದುಕೊಂಡು ಲೆಕ್ಕಕ್ಕೇ ಸಿಗದಂಥ ರೀತಿಯಲ್ಲಿ ಇಡೀ ಸಮಾಜದ ಸ್ವಸ್ಥಿರತೆಯನ್ನು ಸಂಪೂರ್ಣವಾಗಿ ಹಾಳೂಗೆಡಹುತ್ತಿದ್ದಾರೆ.

ಕಾನೂನು ಬಾಹಿರವಾದಂಥ ಚಟುವಟಿಕೆಗಳು, ಅದರ ಜೊತೆಗೆ ಅನೈತಿಕ ಚಟುವಟಿಕೆಗಳು, ಅದರ ಜೊತೆಗೆ ರಾಜಕಾರಣ ಮತ್ತು ಪಕ್ಷಗಳ ಮೇಲೆ ತಾವು ಈ ರೀತಿ ದುಡಿದಿರತಕ್ಕಂಥ ಹಣವನ್ನು ಹಾಕುವುದರ ಮೂಲಕವಾಗಿ ಇಲ್ಲದ ಪ್ರಭಾವವನ್ನು ತಮ್ಮಷ್ಟಕ್ಕೆ ತಾವೇ ಸೃಷ್ಟಿಮಾಡಿಕೊಂಡು ಅದರ ಮೂಲಕವಾಗಿ ರಾಜಕೀಯ ಪಕ್ಷಗಳಿಗೆ, ಜನ ಪ್ರತಿನಿಧಿಗಳಿಗೆ ಮತ್ತು ಸಮಾಜದಲ್ಲಿರತಕ್ಕಂಥ ಎಲ್ಲ ಸಂಘ ಸಂಸ್ಥೆಗಳಿಗೆ ಅವರು ಅಪಾಯಕಾರಿಯಾದಂಥ ವ್ಯಕ್ತಿಗಳಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಯಾವ ಕಾಲದಲ್ಲಿಯೂ ಸಹ ಊಹಿಸಲಿಕ್ಕೆ ಸಾಧ್ಯವಿಲ್ಲದಂಥ ರೀತಿಯ ಬೆಲೆ ಈ ಭೂಮಿಗೆ ಬಂದಿರುವುದರಿಂದ ಈ ತರಹದ ಚಟುವಟಿಕೆಗಳು ಜಾಸ್ತಿಯಾಗಿರುವುದರಿಂದ ಇದನ್ನು ನಾವು ಕಾನೂನುಬಾಹಿರ ಎಂದು ಘೋಷಿಸುವುದಷ್ಟೇ ಅಲ್ಲ ಇದನ್ನು ನಿಷೇಧಿಸಬೇಕು ಎನ್ನುವಂಥ ರೀತಿಯಲ್ಲಿ ಈ ಒಂದು ಕಾನೂನನ್ನು ನಾವು ತಂದಿದ್ದೇವೆ.

(5 : 00 ಘಂಟೆ)

ಈ ಕಾನೂನನ್ನು ನಾವು ಹೊಸದಾಗಿ ತಂದಿದ್ದೇವೆ ಎನ್ನುವುದಲ್ಲ. ಇದರ ವಿಚಾರದಲ್ಲಿ ನಮಗಿಂತಲೂ ಆಂಧ್ರಪ್ರದೇಶದ ಸರ್ಕಾರದವರು ಬಹಳ ಮುಂಚೂಣಿಯಲ್ಲಿದ್ದಾರೆ. ಅವರು 25 ವರ್ಷದ ಮೊದಲೆ ಇಂತಹ ಒಂದು ಕಾನೂನನ್ನು ತರುವುದರ ಮೂಲಕವಾಗಿ, ಭೂಕಬಳಿಕೆ ವಿಷಯವಾಗಿ ಕಳೆದ 25 ವರ್ಷದಿಂದ ಅವರು ಕೈಗೊಂಡಿರುವಂತಹ ಕಾನೂನಿಗೆ ಅನುಗುಣವಾದಂತಹ ಚಟುವಟಿಕೆಗಳು ಅಸಿಂಧು ಎಂದು ಯಾವುದೇ ನ್ಯಾಯಾಲಯ ಇಲ್ಲಿಯವರೆಗೂ ತೀರ್ಮಾನವನ್ನು ಕೊಟ್ಟಿಲ್ಲ.

ಅದರ ಜೊತೆಗೆ ಪ್ರತಿವರ್ಷ ಒಂದು ಸಾವಿರ ಕೋಟಿ ರೂಪಾಯಿಗಳು ಅವರಿಗೆ ಲಭ್ಯವಾಗುವಂತಹ ರೀತಿಯಲ್ಲಿ ಖಾಸಗೀ ಮಾಲೀಕತ್ವದಲ್ಲಿ ಇರುವಂತಹ ಭೂಮಿಯನ್ನು ಕೂಡ ಅದರಲ್ಲಿ ಸೇರಿಸಿಕೊಂಡಿರುವುದನ್ನು ನಾವು ಕಂಡಿದ್ದೇವೆ. ಈಗ ಆಂಧ್ರಪ್ರದೇಶದಲ್ಲಿ 86ರ ಸಾಲಿನಲ್ಲಿ ಇರುವಂಥಾದ್ದು ಏನಿದೆ, ಅದು ಇವತ್ತಿಗೂ

ಕೂಡ ಬಹಳ ಸುಸ್ಥಿತಿಯಲ್ಲಿದೆ. ಅದು ಕಾಲದ ಒತ್ತಡವನ್ನೂ ತಡೆದುಕೊಂಡಿದೆ. ಅದೇ ರೀತಿಯಾಗಿ ಕಾನೂನಿನ ವ್ಯವಸ್ಥೆ ಬಗ್ಗೆ ನ್ಯಾಯಾಲಯಗಳೂ ಕೂಡ ಅದರ ಸಿಂಧುತ್ವವನ್ನು ಯಾರೂ ಪ್ರಶ್ನೆ ಮಾಡಿಲ್ಲ. ಸಿಂಧುತ್ವದ ಪ್ರಶ್ನೆ ಇಲ್ಲದಿರುವುದರಿಂದ it has stood the secrutiny of the Judiciary also. ಈ ಸಂದರ್ಭದಲ್ಲಿ ನಾನು ಮಾಡಲೇಬೇಕಾಗಿರುವ ಕೆಲಸವೆಂದರೆ, ಅಂಥಾದ್ದೆ ಕಾನೂನಿನಲ್ಲಿ ನಾವು ಉದಾರವಾದ ನಿರ್ಣಯಗಳನ್ನು ತೆಗೆದುಕೊಂಡು ಅಲ್ಲಿ ಖಾಸಗಿ ಆಸ್ತಿಗಳ ಬಗ್ಗೆಯೂ ಅಲ್ಲಿ ಸೇರಿಸಿರುವುದನ್ನು ಕೂಡ ನಾವು ತೆಗೆದುಕೊಂಡಿದ್ದೇವೆ.

ಅದೇ ರೀತಿಯಾಗಿ ಕೆಲವು ಆತಂಕಗಳನ್ನು, ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಕಟ ಮಾಡಿದಂತಹ ಭೂ ಕಬಳಿಕೆ ಕಾನೂನಿಗೆ ಸಂಬಂಧಪಟ್ಟಂತೆ ಅನೇಕರು ಸಲಹೆಗಳನ್ನು ಆ ಸಂದರ್ಭದಲ್ಲಿ ಕೊಟ್ಟರು. ಇದರಲ್ಲಿ officers culpability is not included in this particular legislation. ಯಾವುದೇ ಅಧಿಕಾರಿಗಳಿಗೆ ಸಂಬಂಧಪಟ್ಟಿರತಕ್ಕಂಥಾದ್ದಿಲ್ಲ. ಆಮೇಲೆ ಅದಕ್ಕಿಂತಲೂ ಹೆಚ್ಚು ಮುಂದೆ ಹೋಗಿರುವಂಥಾದ್ದು ತಮಗೆ ಗೊತ್ತಿದೆ. 2,000ಕ್ಕಿಂತಲೂ ಹೆಚ್ಚು ತಡೆಯಾಜ್ಞೆಗಳನ್ನು ಬೆಂಗಳೂರು ನಗರ ಒಂದರಲ್ಲೇ ಹೈಕೋರ್ಟ್‌ನಿಂದ ತಂದಿರುವಂಥಾದ್ದಿದೆ. ಅದೇ ರೀತಿಯಾಗಿ ಸುಮಾರು 800ಕ್ಕಿಂತಲೂ ಹೆಚ್ಚು ತಡೆಯಾಜ್ಞೆ, injunction suit ನಮ್ಮ subordinate Court ನಿಂದ ತೆಗೆದುಕೊಂಡಿರುವಂಥಾದ್ದು ಕೂಡ ಇದೆ.

ಇಂತಹ ಅನೇಕ ವಿಚಾರಗಳಿಗೆ ಸಂಬಂಧಪಟ್ಟಂತೆ ನಗರಾಭಿವೃದ್ಧಿ ಇಲಾಖೆಗೆ, ಪುರಸಭೆಗೆ, ನಗರಸಭೆಗೆ, ಮಹಾನಗರಸಭೆಗೆ, ಪಂಚಾಯಿತಿಗಳ ಭೂಮಿಗಳು, ಮುಜರಾಯಿ ಮತ್ತು ವಕ್ಫ್ ಸಂಸ್ಥೆಗೆ ಸೇರಿದಂತಹ ಭೂಮಿಗಳು, ಸರ್ಕಾರಿ ನಿಗಮ, ಮಂಡಲಿ, ಸಹಕಾರಿ ಸಂಸ್ಥೆಗಳಿಗೆ ಸೇರಿದಂತಹ ಭೂಮಿಗಳು, ಇವೆಲ್ಲವೂ ಕೂಡ ಈ ಕಾನೂನಿನ ವ್ಯಾಪ್ತಿಗೆ ಒಳಪಡುತ್ತವೆ. ಈ ರೀತಿ ಒಳಪಟ್ಟಿರುವಂತಹ ಭೂಮಿಗೆ ಕುರಿತಾಗಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವುದರ ಮೂಲಕವಾಗಿ ಯಾವುದೇ ಕಾನೂನು ಹಾಗೂ ನಿರ್ಬಂಧಗಳು ಏನಿದ್ದರೂ ಕೂಡ ಅಲ್ಲಿರುವಂತಹ ಎಲ್ಲಾ ಕಾನೂನುಗಳು ಕೂಡ ಈ ಕಾನೂನಿನ ವ್ಯಾಪ್ತಿಯಲ್ಲಿ ಬರುವಂತಹ ವಿಶೇಷವಾಗಿ ಸ್ಥಾಪಿಸಲ್ಪಡುವಂತಹ ನ್ಯಾಯಾಲಯದ ವ್ಯಾಪ್ತಿಗೆ ಬಂದು ಅದರ ಮೂಲಕವಾಗಿ ಎಲ್ಲಾ ವ್ಯಾಜ್ಯಗಳು ಇತ್ಯರ್ಥವಾಗಬೇಕು. ಆದುದರಿಂದ ತಡೆಯಾಜ್ಞೆ ಕೊಡುವಂಥಾದ್ದು ಅನೇಕ ರೀತಿಯಲ್ಲಿ ಕಡಿಮೆಯಾಗುತ್ತದೆ. ವಿಲೇವಾರಿ ಬಹಳ ಬೇಗಬೇಗನೆ ಆಗುವುದಕ್ಕೆ

ಸಾಧ್ಯತೆಯಾಗುತ್ತದೆ. ಈ ಒಂದು ದೃಷ್ಟಿಯಿಂದ ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆಯನ್ನು ಕೂಡ ಮಾಡಬೇಕೆಂದು 20 ರಲ್ಲಿ ನಾವು ಕಾಣಿಸಿದ್ದೇವೆ.

"ವಿಶೇಷ ನ್ಯಾಯಾಲಯದ ರಚನೆಯ ನಿಕಟ ಪೂರ್ವದಲ್ಲಿ, ಯಾವುದೇ ನ್ಯಾಯಾಲಯದ ಅಥವಾ ಇತರೆ ಪ್ರಾಧಿಕಾರದ ಮುಂದೆ ಅಂತಹ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಇರಬಹುದಾಗಿದ್ದ ಯಾವುದೇ ಮೊಕದ್ದಮೆಯು ಇತ್ಯರ್ಥದಲ್ಲಿದ್ದರೆ, ಆ ದಾವೆಯ ಅಥವಾ ವ್ಯವಹರಣೆಯ ವ್ಯಾಜ್ಯಕಾರಣವು ವಿಶೇಷ ನ್ಯಾಯಾಲಯದ ರಚನೆ ತರುವಾಯ ಉದ್ಭವಿಸಿದ್ದರೆ ಹೇಗೋ ಹಾಗೆ ಆ ದಾವೆ ಅಥವಾ ವ್ಯವಹರಣೆಯನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು."

Not withstanding anything ಎನ್ನುವಂಥಾದ್ದು ಎಂದರೆ ಹೇಗಿದೆಯೋ ಹಾಗೆ ಈ ಒಂದು ನ್ಯಾಯಾಲಯಕ್ಕೆ ಬರುವಂಥಾದ್ದು ಇದೆ. ಅದರ ಜೊತೆಗೆ ಕಬಳಿಸಲಾದ ಭೂಮಿಯ ಪರಭಾರೆ ನಿಷೇಧವನ್ನು ಕೂಡ ಈ ಒಂದು ಬಿಲ್‌ನಲ್ಲಿ ಮಾಡಿಸಿದ್ದೇವೆ.

"ಕಬಳಿಕೆ ಮಾಡಲಾದ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ, ಗುತ್ತಿಗೆ, ದಾನ, ವಿನಿಮಯ, ಒಪ್ಪಂದ, ಅಧ್ಯರ್ಪಣ, ಭೋಗ್ಯದ ಅಡಮಾನ ಅಥವಾ ಅನ್ಯಥಾ ರೂಪದಲ್ಲಿ ಪರಬಾರೆ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರವೂ ಅಥವಾ ಅಂತಹ ಭೂಮಿಯ ಸಂಬಂಧದಲ್ಲಿ, ಮಾಡಿಕೊಳ್ಳಲಾದ ಆಸ್ತಿಯ ವಿಭಜನೆ ಅಥವಾ ರಚಿಸಲಾದ ಒಂದು ನ್ಯಾಸವು, ಅಂಶಗಳನ್ನು ಈ ಒಂದು ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿರಲಿ ಅಥವಾ ತರುವಾಯ ಮಾಡಿರಲಿ ವಿಶೇಷ ನ್ಯಾಯಾಲಯ ಆದೇಶಿಸುವಷ್ಟು ಮಟ್ಟಿಗೆ ಹೊರತು ಉಳಿದಂತಹ ಅಕೃತ ಮತ್ತು ಶೂನ್ಯವಾಗಿರತಕ್ಕದ್ದು"

ಎಂದರೆ ಅದನ್ನು ಇಲ್ಲಿಯೂ ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನವುದನ್ನು ನಾವು ಈ ಸಂದರ್ಭದಲ್ಲಿ ಹೇಳಿದ್ದೇವೆ. ಭೂಕಬಳಿಕೆ ಕಾನೂನು ಬಾಹಿರವಾಗಿರುದರಲ್ಲಿ ಆ provision ಕೂಡ ಮಾಡಿಕೊಂಡಿದ್ದೇವೆ. ಮೊನ್ನೆ ಈ ವಿಚಾರದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಂಡಿಸಿದಂತಹ ಸಂದರ್ಭದಲ್ಲಿ ನಾವು ಯಾವ್ಯಾವುದಕ್ಕೆ ವಿನಾಯತಿಯನ್ನು ಕೊಟ್ಟಿದ್ದೇವೆಂದು ಅದರಲ್ಲಿ ವಿವರಿಸಿದಂತೆ ಈ ಕಾನೂನಿನಲ್ಲಿ ಕೂಡ ನಾವು ಸ್ಪಷ್ಟಪಡಿಸಿದ್ದೇವೆ. ಇದರ ಜೊತೆಗೆ ಭೂಕಬಳಿಕೆದಾರ ಎಂದರೆ ಏನು

ಎನ್ನುವುದ ಬಗ್ಗೆ ವ್ಯಾಖ್ಯಾನ ಮಾಡುತ್ತಾ, ಅದಕ್ಕೆ ಸ್ಪಷ್ಟವಾಗಿರತಕ್ಕಂಥ ಆ ವಾಕ್ಯದ ನಿಷ್ಪೃಷ್ಟತೆ ಮತ್ತು ಆ ವಾಕ್ಯದ ಅರ್ಥ ವಿಸ್ತರಣೆಗೆ ಸಂಬಂಧಪಟ್ಟಂತೆ ಮೂರರಲ್ಲಿ ತಾವು ಗಮನಿಸಬಹುದು. ಈ ಪರಿಭಾಷೆಗಳು ಎನ್ನತಕ್ಕಂಥಾದ್ದರಲ್ಲಿ ಮಾಡುವಾಗ ಭೂ ಕಬಳಿಕೆ ಎಂದರೆ,

"ಭೂ ಕಬಳಿಕೆಯನ್ನು ಮಾಡುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಒಂದು ಗುಂಪು ಮತ್ತು ಇದರಲ್ಲಿ ಭೂಮಿಗಳನ್ನು ಕಾನೂನು ಬಾಹಿರ ಸ್ವಾಧೀನ ತೆಗೆದುಕೊಳ್ಳುವುದಕ್ಕಾಗಿ ಅಥೌಆ ಅದರ ಮೇಲೆ ಅಕ್ರಮ ಕಟ್ಟಡಗಳನ್ನು ಕಟ್ಟುವುದಕಾಗಿ ಯಾವುದೇ ವ್ಯಕ್ತಿಗೆ ಆರ್ಥಿಕ ನೆರವು ನೀಡುವ ಯಾವೊಬ್ಬ ವ್ಯಕ್ತಿ ಅಥವಾ ಅಂತಹ ಭೂಮಿಗಳ ಯಾವುದೇ ಅಧಿಭೋಗದಾರರಿಂದ ಅಪರಾಧಿತ ಭಯೋತ್ಪಾದನೆಯ ಮೂಲಕ ಬಾಡಿಗೆ, ಪರಿಹಾರ ಮತ್ತಿತರ ಶುಲ್ಕವನ್ನು ವಸೂಲು ಮಾಡಲು ಪ್ರಯತ್ನಿಸುವ ಅಥವಾ ಮೇಲೆ ಹೇಳಿದ ಯಾವುದಾದರೂ ಒಂದು ಕೃತ್ಯ ಮಾಡುವುದನ್ನು ದುಷ್ಪ್ರೇರಿಸುವ ಯಾವುದೇ ವ್ಯಕ್ತಿ ಒಳಗಾಗುತ್ತಾನೆ ಮತ್ತು ಅವನು ಹಿತಾಸಕ್ತಿಯ ಉತ್ತರಾಧಿಕಾರಿಯೂ ಒಳಗಾಗುತ್ತಾನೆ"

<u>ಇನ್ನು ಭೂ ಕಬಳಿಕೆ, ಅದರ ಬಗ್ಗೆ ಕೂಡ ನಾವು ವ್ಯಾಖ್ಯಾನವನ್ನು ಮಾಡಿದ್ದೇವೆ.</u>

"ಯಾವುದೇ ಕಾನೂನುಬದ್ಧ ಹಕ್ಕುದಾರಿಕೆಯಿಲ್ಲದೆ ಮತ್ತು ಭೂಮಿಯನ್ನು ಕಾನೂನುಬಾಹಿರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಯಾವುದೇ ಭೂಮಿಯನ್ನು ಕಬಳಿಸುವ ಅಥವಾ ಕಾನೂನುಬಾಹಿರ ಗೇಣಿ ಅಥವಾ ಗುತ್ತಿಗೆ ಮತ್ತು license ಒಪ್ಪಂದಗಳನ್ನು ಮಾಡಿಕೊಳ್ಳುವ ಅಥವಾ ಅವುಗಳನ್ನು ಸೃಷ್ಟಿ ಮಾಡುವ ಮಾರಾಟ ಅಥವಾ ಬಾಡಿಗೆ ಕೊಡಲು ಭೂಮಿಯ ಮೇಲೆ ಅಕ್ರಮ ನಿರ್ಮಿತಿಗಳನ್ನು ಕಟ್ಟುವ ಅಥವಾ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಮತ್ತು ಅಧೀಭೋಗಿಸುವುದಕ್ಕಾಗಿ ಬಾಡಿಗೆ ಮೇಲೆ ಅಂತಹ ಗುತ್ತಿಗೆ ಮೇಲೆ ಮತ್ತು license ಆಧಾರದ ಮೇಲೆ ಅಂತಹ ಭೂಮಿಗಳನ್ನು ಯಾವುದೇ ವ್ಯಕ್ತಿ ಕೊಡುವ ಪ್ರತಿಯೊಂದು ಚಟುವಟಿಕೆ ಮತ್ತು ಭೂಮಿಯನ್ನು ಕಬಳಿಸುವುದು ಎಂಬುದನ್ನು ಇದಕ್ಕೆ ಅನುಸಾರವಾಗಿ ಅರ್ಥೈಸತಕ್ಕದ್ದು".

ಎಂದು ಹೇಳಿದ್ದೇವೆ. ಇದರಲ್ಲಿ ಮೂರು ವರ್ಷದವರೆಗೆ ಶಿಕ್ಷೆಯನ್ನು ಕೊಡಬೇಕೆಂದು ಮಾಡಿದ್ದೇವೆ. ಇದು ಆಂಧ್ರಪ್ರದೇಶ ಕಾನೂನಿನಲ್ಲಿ ಕೂಡ ಇದೆ. ಭೂ ಕಬಳಿಕೆಯ ಪ್ರಕರಣಗಳನ್ನು ತ್ವರಿತವಾಗಿ ನಿರ್ಣಯಿಸುವುದಕ್ಕಾಗಿ ಈ ವಿಶೇಷ ನ್ಯಾಯಾಲಯ ಇರತಕ್ಕಂಥಾದ್ದು. ಇದರಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದಂತಹ ಒಂದು ಸಂಗತಿಯೆಂದರೆ, ನಮ್ಮ ಎಲ್ಲಾ ಕಾನೂನುಗಳ ವ್ಯಾಪ್ತಿಯಲ್ಲಿ ನಾವು ಆಪಾದನೆ ಮಾಡಿರತಕ್ಕಂಥ, ನಾವು ಫಿರ್ಯಾದು ಕೊಟ್ಟಿರತಕ್ಕಂಥ ಅಥವಾ ಅರ್ಜಿದಾರನಾಗಿರುವಂಥಾದ್ದು, ಈತ ಭೂ ಕಬಳಿಕೆ ಮಾಡಿದ್ದಾನೆ ಎನ್ನುವ ಎಲ್ಲಾ ಸಾಬೀತು ದೃಢೀಕರಣ ಮಾಡಿಕೊಡುವಂತಹ ಜವಾಬ್ದಾರಿ, ಆಪಾದನೆ ಮಾಡಿದಂತಹವನು ಅಥವಾ ಅರ್ಜಿ ಕೊಟ್ಟವನ ಮೇಲೆ ಇರುತ್ತದೆ.

ಈ ವಿಚಾರದಲ್ಲಿ ನಾನು ಭೂಕಬಳಿಕೆದಾರ ಅಲ್ಲ ಎನ್ನುವುದನ್ನು ತೋರಿಸುವಂತಹ, ಸಾಬೀತುಪಡಿಸುವಂತಹ, ನೈಜ ದಾಖಲೆಗಳನ್ನು ಹಾಜರು ಮಾಡುವಂತಹ onus of burden ಎಂದು ನಾವೇನು ಕರೆಯುತ್ತೇವೆ, ಅದು ಭೂಕಬಳಿಕೆದಾರನ ಮೇಲೆ ಇದೆ. "ನಾವು ಕೊಟ್ಟಂತಹ ಫಿರ್ಯಾದಿಯೇ ಸರಿ, ಆ ಫಿರ್ಯಾದಿ ಅದಲ್ಲ, ನಾನು ನಿರಪರಾಧಿ, ನಾನು ಮಾಡಿಲ್ಲ, ಇದು ಭೂಕಬಳಿಕೆ ಅಲ್ಲ, ಇದು ನನ್ನ ಸ್ವತ್ತು, ಇದಕ್ಕೆ ನನ್ನ ಹತ್ತಿರ ದಾಖಲೆಗಳಿವೆ" ಎಂದು ಹೇಳುವಂತಹ ಅಧಿಕಾರ ಆತನಿಗೆ ಇರುವಂಥಾದ್ದು ಇದೆ. Burden of proof is on the accused. ಅದರ ಜೊತೆಗೆ ಇದು ತ್ವರಿತವಾಗಿ ಆಗಬೇಕೆನ್ನುವ ಕಾರಣಕ್ಕಾಗಿ ಈ ಮಸೂದೆಯನ್ನು ತಂದಿದ್ದೇವೆ. ಇದನ್ನು ನಾವು ಬೇರೆ ಸಂದರ್ಭದಲ್ಲಿ ಕೂಡ Revenue Act ನಲ್ಲಿ ಕೂಡ provide ಮಾಡಿಕೊಟ್ಟಿದ್ದೇವೆ.

ಹಾಗೇ ಇದೊಂದು summary trail. ಆದುದರಿಂದ ಇದನ್ನು ತ್ವರಿತಗತಿಯಿಂದ ಈ ಕಾರ್ಯಕ್ರಮಗಳನ್ನು ಬೇಗನೆ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದಕ್ಕೆ summary trail. ಮಾಡುವ ರೀತಿಯಲ್ಲಿ ಈ ಕಾನೂನನ್ನು ಮಾಡಿದ್ದೇವೆ. ಇದಕ್ಕೆ Criminal & Civil ವ್ಯಾಪ್ತಿಯನ್ನು ಕೂಡ ವಿಶೇಷ ನ್ಯಾಯಾಲಯಕ್ಕೆ ಕೊಟ್ಟಿರುವಂಥಾದ್ದಿದೆ. Civil & Criminal ಗಾಗಿ ಪ್ರತ್ಯೇಕವಾಗಿ ಇರತಕ್ಕಂಥಾದ್ದೆಲ್ಲಾ ಅದನ್ನು ಅವರೇ ಮಡಬಹುದು. ನಮ್ಮ JMFC ಮುನ್ಸೀಫ್ ಕೋರ್ಟ್‌ಗಳಲ್ಲಿ ಮಾಡಿದಂತೆ ಇದರಲ್ಲಿ ಬರುವಂತಹ ಎರಡೂ ಪ್ರಕರಣಗಳನ್ನು ಅವರು ವಿಚಾರಿಸ ಬಹುದಾಗುತ್ತದೆ, ಮತ್ತು ಅದರಲ್ಲಿ ದಂಡ ವಿಧಿಸುವ ಮತ್ತು ಶಿಕ್ಷೆಗೆ ಒಳಪಡಿಸುವ, ಅದರ ಮೂಲ ಯಾವುದು ಸೂಕ್ತವೆಂದು ಕಾನೂನಿಗೆ

ಅನುಗುಣವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಆ ವಿಶೇಷ ನ್ಯಾಯಾಲಯಕ್ಕೆ ಅಧಿಕಾರವಿರುತ್ತದೆ.

ಆರು ತಿಂಗಳೊಳಗಾಗಿ ಒಂದು Fast Track Court ನ ರೀತಿಯಲ್ಲಿ ಯಾವುದೇ ವಿವಾದವನ್ನು ಇತ್ಯರ್ಥಪಡಿಸಲೇಬೇಕು ಎನ್ನುವುದನ್ನು ಈ ಕಾಯಿದೆಯಲ್ಲಿ ನಾವು ಅಳವಡಿಸಿಕೊಂಡಿದ್ದೇವೆ. ಬೇರೆ ಕಡೆ ಇತ್ಯರ್ಥವಾಗದೇ ಇರುವಂತಹ, ವಿವಿಧ ನ್ಯಾಯಾಲಯಗಳಲ್ಲಿ ಇರುವಂತಹ ಪ್ರಕರಣಗಳು ತತ್‌ಕ್ಷದಲ್ಲಿ ಈ ಕಾನೂನು ಜಾರಿಗೊಳಿಸಿದ ತಕ್ಷಣ ಅವೆಲ್ಲವೂ ಕೂಡ ವರ್ಗಾವಣೆಯಾಗುತ್ತವೆ. ಇದನ್ನು ನಾವು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳುಹಿಸಬೇಕಾಗಿದೆ. ಇದರಲ್ಲಿ ಇರುವಂತಹ ಅನೇಕ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿ ಕೊಡಬೇಕಾಗಿರುವುದರಿಂದ ಇದನ್ನು ಅವರಿಗೆ ಸಂಪೂರ್ಣವಾಗಿ ಕಳುಹಿಸಿಕೊಡುತ್ತೇವೆ. ನಾನು ಆಗಲೇ ಹೇಳಿದಂತೆ ಸುಮಾರು 800 case ಗಳು ತಡೆಯಾಜ್ಞೆ ಮೂಲಕವಾಗಿ ನಮ್ಮ ಶ್ರೇಷ್ಠ ನ್ಯಾಯಾಲಯದಲ್ಲಿ ಇವೆ. 2.026 case ಗಳು ನಮ್ಮ ಕೆಳಹಂತ ದಲ್ಲಿರುವಂತಹ ನ್ಯಾಯಾಲಯಗಳಲ್ಲಿವೆ.

ಇಡೀ ರಾಜ್ಯಮಟ್ಟದಲ್ಲಿ ಎಷ್ಟು ಇರುತ್ತವೆನ್ನುವಂಥಾದ್ದು ಇರುವುದರಿಂದ, ವಿಶೇಷ ನ್ಯಾಯಾಲಯವನ್ನು ಮಾಡಿಕೊಳ್ಳುವಂಥಾದ್ದರ ಅಗತ್ಯವನ್ನು ಕಂಡು ಒಂದು ಕ್ರಾಂತಿಕಾರಕವಾದಂಥ ತೀವ್ರ ಸ್ವರೂಪದ ಒಂದು ಬದಲಾವಣೆಗಳನ್ನು ಬರೀ ನಮ್ಮ ಅನುಭವದ ಮೂಲಕವಾಗಿ ತಂದಾಗ ನೀವು onus of proof ಅನ್ನು ಅವರಿಗೆ ಹಾಕಿದರೆ, ನಿಮ್ಮ Evidence Act ನಲ್ಲಿ ಆಗಲೀ, Cr.p.c ಯೊಳಗಿರುವಂಥ ತೊಂದರೆಗಳು ಬರಬಹುದಲ್ಲಾ ಎಂಬ ಮಾತು ಇದೆ. ಆದರೆ ಆಂಧ್ರಪ್ರದೇಶದ ಕಾನೂನಿನಲ್ಲಿ ಇದಕ್ಕೆ ಪರಿಹಾರವನ್ನು ಕಂಡುಹಿಡಿದಿದ್ದಾರೆ. It has already stood the test of time as well as the scrunity of the judiciary. ಅದುದರಿಂದ ನಾವು ಇದರಲ್ಲಿ ಯಾವುದೇ ಅನುಮಾನವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ರಾಷ್ಟ್ರಪತಿಯವರು ಖಂಡಿತವಾಗಿಯೂ ಅಂಕಿತವನ್ನು ಕೊಡುತ್ತಾರೆ.

ಹಿಂದೆ ಭೂ ಕಬಳಿಕೆಗೆ ಸಂಬಂಧಪಟ್ಟ ಭೂ ಕಂದಾಯ ಇಲಾಖೆಗೆ ಸಂಬಂಧಪಟ್ಟ ಭೂಮಿ ವಿಚಾರದಲ್ಲಿ, ತಮ್ಮ ಶಂಕೆಗಳನ್ನು, ಅನುಮಾನಗಳನ್ನು ವ್ಯಕ್ತ ಮಾಡಿದ್ದರೂ ಕೂಡ ಆ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ, ಇಡೀ ಸದನ ಅದಕ್ಕೆ ಒಪ್ಪಿಗೆಯನ್ನು ಕೊಟ್ಟು, ಮಾಡಿದಂತೆ ಈ ಬಗ್ಗೆ ವ್ಯಾಪಕವಾದ ಚರ್ಚೆಯಗಿದ್ದು

ನೀವೇ ಈ ವಿಚಾರದಲ್ಲಿ ಪ್ರಸ್ತಾಪಿಸಲ್ಪಟ್ಟಿರುವಂಥ ಈ ಕಾನೂನಿಗೆ ಸದನ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ತಮ್ಮ ಮೂಲಕವಾಗಿ ವಿನಯದಿಂದ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಆರ್ಥಿಕ ಜ್ಞಾಪನ ಪತ್ರವನ್ನು ಸಹ ಇದರ ಜೊತೆಯಲ್ಲಿ ಸೇರಿಸಿದ್ದೇವೆ. ಇದರಲ್ಲಿ ಸುಮಾರು ಒಂದು ಕೋಟಿ ಅರವತ್ತೋಂಭತ್ತು ಲಕ್ಷದ ಏಳು ಸಾವರಿದ ನಾನೂರ ಐವತ್ತೇರಡು ರೂಪಾಯಿಗಳ ವೆಚ್ಚವಾಗುತ್ತದೆ, ಏಕೆಮದರೆ ಶಾಸನಾತ್ಮಕ ಕ್ರಮದಿಂದ ರಾಜ್ಯದ ಬೊಕ್ಕಸಕ್ಕೆ ಅಷ್ಟು ಮಟ್ಟಿಗೆ ಹೊರೆ ಬೀಳುತ್ತದೆ. ವಿಶೇಷ ನ್ಯಾಯಾಲಯಗಳನ್ನು ರಚನೆ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾಗಿರುವಂತಹ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಹೊಸ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ.

ಆದುದರಿಂದ ದಯವಿಟ್ಟು ವಿಧಾನಸಭೆ ವಿಧೇಯಕ ಸಂಖ್ಯೆ 27, ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007 ಅನ್ನು ಸನ್ಮಾನ್ಯ ಸದಸ್ಯರೆಲ್ಲಾ ಬೆಂಬಲಿಸಿ ಒಂದು ಹೊಸ ಹೆಜ್ಜೆಯನ್ನು ಇಡುವುದಕ್ಕೆ ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಗೃಹಸಚಿವರು ಕರ್ನಾಟಕ ಭೂ ಕಬಳಿಕೆ ವಿಧೇಯಕವನ್ನು ಮಂಡಿಸಿದ್ದಾರೆ. ಅವರು ಇದರಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ Special Court ಅನ್ನು ಇದಕ್ಕೋಸ್ಕರ ಮಾಡುವಂಥಾದ್ದು, within six months ನಲ್ಲಿ case ಅನ್ನು dispose ಮಾಡುವಂಥಾದ್ದು, ಮತ್ತೆ ಅನೇಕ ಗುಡಿ-ಗುಂಡಾರಗಳ, ದೇವಾಲಯಗಳ ಜಮೀನುಗಳನ್ನು, ಮತ್ತು ಬೇರೆ ಬೇರೆ ಸರ್ಕಾರಿ ಭೂಮಿಗಳನ್ನು ಕಬಳಿಸುವಂಥವರ ಮೇಲೆ ಕ್ರಮವನ್ನು ಜರುಗಿಸುವಂಥಾದ್ದಕ್ಕೆ ಈ ಕಾನೂನು ತಂದಿದ್ದೇವೆಂದು ಹೇಳಿದ್ದೀರಿ. ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ, ಯಾವ ಕೆಲಸವನ್ನು ಮಾಡಲು ಇವತ್ತು ಗೃಹ ಇಲಾಖೆಯವರು ಈ ಸಂಬಂಧದಲ್ಲಿ ಕಾನೂನನ್ನು ತಂದಿದ್ದಾರೋ, ಇದನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರೇ, ಮಾಡಬಹುದಾಗಿತ್ತು. ಅವರೇ ಮಾಡುವಂಥಾದ್ದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :- ನಾನು ಕಾನೂನು ಮಂತ್ರಿಯಾಗಿ ತಂದಿದ್ದೇನೆ, ಗೃಹ ಮಂತ್ರಿಯಾಗಿ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- Sorry, ಏಕೆಂದರೆ ನಮಗೆ ಕೊಟ್ಟಿರುವ ಪ್ರತಿಯಲ್ಲಿ ಬರದಿರುವುದು ಹಾಗೆ, Home Minister ಎಂದು ಉದೆ. ತಾವು Law and Home Minister, ಅದಕ್ಕೆ ತಾವು Power of Attoeney ತೆಗೆದುಕೊಂಡಿದ್ದೀರಿ ನಾವು ಇಲ್ಲವೆಂದು ಹೇಳಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ at least, Revenue Department ಅನ್ನು strengthen ಮಾಡುವುದಕ್ಕೂ ಆಗುತ್ತಿತ್ತು, ಮತ್ತೆ ಅದನ್ನು implement ಮಾಡುವಂಥ ಅಧಿಕಾರಿಗಳಿಗೂ ಶಕ್ತಿ ಬರುತ್ತಿತ್ತು. ಅಂದರೆ ಯಾವ ಭೂಮಿ ಸರ್ಕಾರದ್ದು ಇದೆ, ಯಾವ ಭೂಮಿ endowment ದು ಯಾವ ಭೂಮಿ ಭೂ ಸುಧಾರಣೆ ಕಾನೂನಿನಲ್ಲಿ ಉಳಿತಾಯವಾಗಿರುವಂಥಾದ್ದು ಇದೆ. ಇವೆಲ್ಲವೂ ಕೂಡ ಅದರಲ್ಲಿ ಬರುತ್ತಿತ್ತು, ಮತ್ತು ಸಹಜವಾಗಿ ಸುಲಭವಾಗಿ supervision ಮಾಡುವುದಕ್ಕೂ ಕೂಡ ಅವಕಾಶವಿರುತ್ತಿತ್ತು.

ಎರಡನೆಯದಾಗಿ ನೀವೇ ಇದಕ್ಕೆ ಮತ್ತೊಂದು ತಿದ್ದುಪಡಿಯನ್ನು ತಂದಿದ್ದೀರಿ. ಅದು ಕೂರ್ಗ್‌ನಲ್ಲಿರುವಂತಹ ಜಮೀನುಗಳಿಗೆ ಈ ಕಾನೂನಿನಿಂದ exemption ಕೊಡುವಂಥಾದ್ದರ ಬಗ್ಗೆ ಬರುತ್ತಿದೆ. Similarly, ಈ provision ಅನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಈಗ ತಾನೇ ನಾವು ಪಾಸ್ ಮಾಡಿದಂಥ ಬಿಲ್‌ನಲ್ಲೂ ಕೂಡ ಇತ್ತು. ಅದಕ್ಕಾಗಿ ಇದು overlapping & dispute ಆಗಬಹುದು ಅಂದರೆ ನಾಳೆ, ಕಂದಾಯ ಇಲಾಖೆಯವರು ನಮಗೆ ಬರುತ್ತದೆಂದು, ಕೊಡುವಂಥ ಅಧಿಕಾರವನ್ನು ನೋಡಿಕೊಂಡು ಪೊಲೀಸ್ ಇಲಾಖೆಯವರು ನಮಗೆ ಬರುತ್ತದೆಂದು ಹೇಳುವಂಥಾದ್ದು, ಇಂಥಾದ್ದು ಆದಾಗ ಈ ಗೊಂದಲದಲ್ಲಿ, ಭೂ ಕಬಳಿಕೆ ಮಾಡುವಂಥವರು ಬಿಡಿಸಿಕೊಂಡು ಹೋಗಬಾರದು. ಅದಕ್ಕಾಗಿ firm ಆಗಿ ಇದನ್ನು ಯಾವುದಾದರೂ ಒಂದು ಇಲಾಖೆಗೆ ಕೊಟ್ಟುಬಿಡಿ. ಅವರೇ ಅದನ್ನು supervision ಮಾಡಲಿ, ಅವರೇ case file ಮಾಡಲಿ, ಅವರೇ ಮುಂದೆ ಇದಕ್ಕೆ appeal file ಮಾಡುವಂಥಾದ್ದು ಆಗಲಿ, ಬೇರೆ ಏನಾದರೂ ಮಾಡುವಂಥಾದ್ದು ಮಾಡುತ್ತಾರೆ.

ಈಗ Special Court ಸಾಕಷ್ಟು ಆಗಿವೆ. ನಾವು ಕೇಸ್ ಕೊಡುತ್ತೇವೆ, ಆರು ತಿಂಗಳಲ್ಲಿ dispose ಮಾಡಿಯೆಂದು ಹೇಳುತ್ತೇವೆ. ಆದರೆ ಅನೇಕ Specail Court ಗಳು ತಿಂಗಳಲ್ಲಿ dispose ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈ ಕಾನೂನನ್ನು ಮಾಡಿದ ಮೇಲೆ, ಪುನಃ ಒಂದು Notification ಅನ್ನು issue ಮಾಡಿದ

ಮೇಲೆ ಮತ್ತು special court ಗೆ judge appoint ಆದಮೇಲೆ ಇವೆಲ್ಲವೂ ಕೂಡ ನಡೆಯುವಂಥಾದ್ದು. ಅಂದರೆ ವರ್ಷಗಟ್ಟಲೆ ಹಿಡಿಯುತ್ತದೆ, ಅದಕ್ಕಾಗಿ ಇರುವಂತಹ judge ಗಳಿಗೆ notify ಮಾಡಿ, ಅಥವಾ ಇದೇ ಒಂದು Session Judge Court ಎಂದು ತಿಳಿದುಕೊಳ್ಳಿ. ಗುಲ್ಬರ್ಗಾ ಸೆಷನ್ ಜಡ್ಜ್, ಅಥವಾ ಯಾವುದೇ ಜಿಲ್ಲೆ ಇರಬಹುದು. ಅಲ್ಲಿ ಒಂದು Additional Session Judge ಇರಬಹುದು, ಅಥವಾ ಯಾರೇ ಇರಬಹುದು. ಅವರಿಗೆ ನೀವು notify ಮಾಡಿ, ಇವರು ಈ ಕೇಸನ್ನೇ ಮಾಡಬೇಕೆನ್ನುವಂಥಾದ್ದನ್ನು ಮಾಡಿದರೆ, quick dispose ಆಗುತ್ತವೆ, ಇಲ್ಲವೆಂದರೆ ಏನಾಗುತ್ತದೆಂದರೆ, ಯಥಾಪ್ರಕಾರ ಮತ್ತೆ adjournment ತೆಗೆದುಕೊಳ್ಳುವುದು, ಮತ್ತೆ ಅದಕ್ಕೆ appeal file ಮಾಡಿಕೊಂಡು ಈ ರೀತಿಯಾಗಿ ಹೋಗಿ delay ಮಾಡತಕ್ಕಂಥಾದ್ದು ಸಾಕಷ್ಟು ಆಗುತ್ತದೆ.

ಅದಕ್ಕಾಗಿ ನನಗೆ ಇದರಲ್ಲಿ ಒಂದು clarification ಬೇಕು. ಇದು. Revenue Department ಗೆ ನಿಮಗೆ overlapping ಆಗುತ್ತದೋ ಇಲ್ಲವೋ? Overlapping ಆದರೆ, ಇದನ್ನು ಸರಿಪಡಿಸುವಂಥಾದನ್ನು ಹೇಗೆ ಮಾಡುತ್ತೀರಿ? ಇಲ್ಲವೆಂದರೆ punishment ಕೊಡುವಂಥಾದ್ದಕ್ಕೆ, ಜಿಲ್ಲಾಧಿಕಾರಿಗಳಿಗಾಗಲಿ, ತಹಶೀಲ್ದಾರಿಗೆ ಆಗಲಿ, Assistant Commissioner ರಿಗಾಗಲಿ, ಈ ಕಾನೂನಿನಲ್ಲಿ ಏನು ಅಧಿಕಾರವನ್ನು ಕೊಡುತ್ತೀರಿ? ಅವರಿಗೆ Land Revenue Act ನಲ್ಲಿ ಅಧಿಕಾರ ಏನು ಇದೆ? ಅದೆಲ್ಲವು ಒಳಗೊಂಡು, ಮತ್ತು ಇದನ್ನು ಸೇರಿಸಿ ಅವರಿಗೆ ಕೊಡುವಂಥಾದ್ದೋ ಅಥವಾ separate ಮಾಡುವಂಥಾದ್ದೋ, ಎನ್ನುವಂಥಾ ವಿಚಾರಗಳನ್ನು ತಾವು ಹೇಳಿದರೆ ನಮಗೂ ಕೂಡ ಗೊತ್ತಾಗುತ್ತದೆ. ಇದು ನಿಜವಾಗಿಯೂ implement ಆಗುತ್ತದೆನ್ನುಂಥಾದ್ದು, ಇಲ್ಲವೆಂದರೆ ಇದು ಒಂದು harassment ಕಾನೂನು ಆಗಬಾರದು, ಅಥವಾ ಏನೋ ತಮಗೆ target ಮಾಡಿ, ಕೆಲವು ಜನರಿಗೆ ಮಾಡುವಂಥಾದ್ದು ಆಗಬಾರದು. ಅಥವಾ ಬಡವರು ಎಲ್ಲೋ ಸಣ್ಣ ಪುಟ್ಟ ಗುಡಿಸಲುಗಳನ್ನು ಹಾಕಿಕೊಂಡಿರುವವರಿಗೂ ತೊಂದರೆಯಾಗಬಾರದು. ಅದಕ್ಕೆ ಯಾವಾಗಲೂ ಕೂಡ democracy ಯಲ್ಲಿ persuasion is the best way. Persuasion ಗೆ ಮಣಿಯದೇ ಇದ್ದಾಗ ನಾವು ಕಾನೂನನ್ನು ಜಾರಿಗೆ ತರುವಂಥಾದ್ದನ್ನು ಮಾಡುತ್ತೇವೆ. ಅದಕ್ಕಾಗಿ strict ಆಗಿ ಆಗಾಗ ಕಾನೂನು ಉಪಯೋಗ ಮಾಡಿ ಅವರಿಗೆ ಸಲ್ಲಿಸುವಂಥಾದ್ದು ಮಾಡುತ್ತೇವೆ. ಅದಕ್ಕೆ ದಯವಿಟ್ಟು ಈ ದಿಕ್ಕಿನಲ್ಲಿ ಇದು overlapping ಗೋ, ಇಲ್ಲವೋ, ಎನ್ನುವಂಥಾದ್ದು ತಾವು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು, ಭೂ ಕಬಳಿಕೆಯನ್ನು ಸ್ವಲ್ಪ ಸ್ಪಷ್ಟವಾಗಿ explain ಮಾಡಬೇಕಾಗಿತ್ತೆಂದು ನನ್ನ ಒತ್ತಾಯ. ಭೂ ಕಬಳಿಕೆ ಅಂದರೆ ಏನೇನು ಆಗುತ್ತದೆ? encroachment, ಭೂ ಕಬಳಿಕೆಯಾಗುತ್ತದಾ? Unauthorized occupation ಭೂ ಕಬಳಿಕೆಯಾಗುತ್ತದಾ? ಒಂದು ancestral property ಇದ್ದು ವಾರಸುದಾರರು ಇಲ್ಲದೇ ಬಂದು ಕುಳಿತುಕೊಳ್ಳುವುದು, ಭೂ ಕಬಳಿಕೆಯಾಗುತ್ತದಾ? ಇನ್ನು ಯಾರಿಗೋ ಬಿಟ್ಟು ಹೋಗಿರುವ ಜಮೀನು, ರೆಕಾರ್ಡ್‌ನಲ್ಲಿ ಬರದಿದ್ದರೆ ಭೂ ಕಬಳಿಕೆಯಾಗುತ್ತದಾ? ಎಲ್ಲವನ್ನೂ ಈಗ ನೀವು ಹೇಳಬೇಕಲ್ಲಾ? You are bringing in a new bill. ಭೂ ಕಬಳಿಕೆ ವ್ಯಾಪ್ತಿಯಲ್ಲಿ ಏನು ಬರುತ್ತದೆ? What is the definition for ಭೂ ಕಬಳಿಕೆ ಎಂಬುದನ್ನು ನೀವು ಎಲ್ಲಾದರೂ ಒಂದು ಕಡೆ ಹೇಳಬೇಕಾಗಿತ್ತು. ಇಲ್ಲಿಯವರೆಗೆ ನೀವು ಭೂ ಕಬಳಿಕೆ ಎಂದರೆ ಏನು ಎಂಬುದನ್ನು ಹೇಳಿಲ್ಲ. ಭೂ ಕಬಳಿಕೆ ಕಾನೂನು ಬಾಹಿರವೆಂದು ಹೇಳಿ ಬಿಟ್ಟಿರಿ. ಭೂ ಕಬಳಿಕೆ ಎಂದರೆ ಯಾವುವು?

ಶ್ರೀ ಎಂ.ಪಿ. ಪ್ರಕಾಶ್ :- ಭೂ ಕಬಳಿಕೆ ಎಂದರೆ, ಯಾವುದೇ ಕಾನೂನುಬದ್ಧ ಹಕ್ಕುದಾರಿಕೆಯಿಲ್ಲದೇ ಮತ್ತು ಭೂಮಿಯನ್ನು.....

ಶ್ರೀ ಜೆ.ಸಿ. ಮಾಧುಸ್ವಾಮಿ :- encroachment ಭೂ ಕಬಳಿಕೆ ಆಗುತ್ತದಾ? ಎಂದು ಕೇಳಿದೆನಲ್ಲಾ, encroachment, without knowledge, ಆಗಿದ್ದರೆ? .... ಏಕೆಂದರೆ ನಾವು ಗ್ರಾಮೀಣ ಪ್ರದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡುತ್ತಿರುತ್ತೇವೆ. ನೀವು ಪಟ್ಟಣ ಪ್ರದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡುತ್ತಿರುತ್ತೀರಿ. ಈಗ adverse possession ಗೆ ಏನು ಹೇಳುತ್ತೀರಿ? ನಾನು High Court ಗೆ adverse possession ಅನ್ನು prove ಮಾಡಿಕೊಂಡು, ಆ ಜಮೀನನ್ನು ಸಿಂಧು ಮಾಡಿಕೊಳ್ಳುವುದಕ್ಕೆ ನನಗೆ ಹಕ್ಕು ಇದೆ. ಈ ಶಾಸನವನ್ನು ತಂದ ಮೇಲೆ What is the fate of adverse possession after 14 years and adverse possession after 30 years? ಅದಕ್ಕೆ ನಿಮ್ಮ ಹೈ ಕೋರ್ಟ್ ಏನು ಹೇಳುತ್ತದೆಂಬುದು ನನಗೆ ಬೇಕಾಗುತ್ತದೆ, ಮತ್ತೆ ನೀವು ಭೂ ಕಬಳಿಕೆಯಲ್ಲಿ ನಾನು ಕ್ರಮ ಸಂಖ್ಯೆ : 3, 4 ಅನ್ನು ಓದಿದ್ದೇನೆ. ನಾನು ಅದನ್ನು ಓದಿ ನಿಮಗೆ ಹೇಳುತ್ತಿದ್ದೇನೆ.

ಬೆಂಗಳೂರು ದೃಷ್ಟಿಯಲ್ಲೇ ಭೂ ಕಬಳಿಕೆ ಎಂದರೆ ನಮ್ಮ ತಕರಾರು ಇಲ್ಲ. ಗ್ರಾಮೀಣ ಪ್ರದೇಶವನ್ನು ಇದರಲ್ಲಿ ತರುತ್ತಿರುವುದರಿಂದ ಯಾರೋ ಗೊತ್ತಿಲ್ಲದೇ ಭೂಮಿ ಗೆಯ್ದಿರುತ್ತಾನೆ. ಯಾರೋ ಗೊತ್ತಿಲ್ಲದೇ ಒತ್ತುವರಿ ಮಾಡಿರುತ್ತಾನೆ, ಯಾರೊ ಗೊತ್ತಿಲ್ಲದೇ ಇನ್ನೊಬ್ಬರ ಜಾಗದಲ್ಲಿ ಅನುಭವಿಸಿಕೊಂಡಿರುತ್ತಾನೆ. ದೇವಸ್ಥಾನಗಳಾಗಿವೆ, ರಸ್ತೆಗಳು, ಕೂಡ ಗೊತ್ತಿಲ್ಲದೇ encroach ಆಗಿರುತ್ತದೆ. ಇದನ್ನೆಲ್ಲಾ ತಾವು ಕಾನೂನಿನಲ್ಲಿ ತರುವುದಕ್ಕೆ ಹೊರಟಿದ್ದೀರಿ, ನಾನು ಒಂದು ವಿಷಯವನ್ನು ಕೇಳುವಂಥಾದ್ದು, ಭೂ ಕಬಳಿಕೆಯಲ್ಲಿ ನಿಮ್ಮ adverse possession ಪರಿಸ್ಥಿತಿ ಏನು? ಮಲೆನಾಡು ಕಡೆಗಳಲ್ಲಿ granted land ಇದೆ. ಅದನ್ನು better cultivation ನಲ್ಲಿ ಮತ್ತೊಂದರಲ್ಲಿ ಕೊಡಲಿಕ್ಕೆ provision ಇತ್ತು. ಬಗರ್ ಹುಕುಂ ಜಾರಿಗೆ ಬಂದ ದಿವಸದಿಂದ better cultivation ನಲ್ಲಿ ಕೊಡತಕ್ಕಂಥಾದ್ದನ್ನು ತಾವು ನಿಲ್ಲಿಸಿಬಿಟ್ಟಿದ್ದೀರಿ. ಜಮೀನಿರುವವರು ಪಕ್ಕದ 2 ಕುಂಟೆ, 10 ಕುಂಟೆ, 20 ಕುಂಟೆ, 30 ಕುಂಟೆಯನ್ನು ಹಸನು ಮಾಡಿಕೊಂಡಿರುವುದು ಮಂಜೂರಾಗಲಿಕ್ಕಿತ್ತು. ಅದನ್ನೂ ಕೂಡ ಈಗ stop ಮಾಡಿದ್ದೀರಿ. ಇದೆಲ್ಲವನ್ನೂ ಈ ವಿಧೇಯಕದ ವ್ಯಾಪ್ತಿಗೆ ತರುತ್ತಿದ್ದೀರಿ.

ಸನ್ಮಾನ್ಯ ಪ್ರಕಾಶ್‌ರವರು ಹಳ್ಳಿಯ ಜನಗಳಿಗೆ ಸ್ವಲ್ಪ ರಿಯಾಯಿತಿಯನ್ನು ತೋರಿಸಬೇಕಾಗುತ್ತದೆ. ಏಕೆಂದರೆ ಅವರಿಗೆ ಇದೆಲ್ಲ ಗೊತ್ತಿಲ್ಲ. ನೂರಾರು ವರ್ಷದಿಂದ ಅಲ್ಲಿ ಉಳಿಮೆ ಮಾಡಿಕೊಂಡು ಬಂದಿರುತ್ತಾರೆ, ಅನುಭವಿಸಿಕೊಂಡು ಬಂದಿರುತ್ತಾರೆ. ಸರ್ವೇಯರ್‌ಗಳು ಇವತ್ತು ಒಂದು ಕಡೆ ಅಳೆದು ಕೊಡುತ್ತಾರೆ, ನಾಳೆ ಇನ್ನೊಂದು ಕಡೆ ಅಳೆದು ಕೊಡುತ್ತಾರೆ, ನಾಡಿದ್ದು ಮತ್ತೊಂದು ಕಡೆ ಅಳೆದು ಕೊಡುತ್ತಾರೆ. ಮೂರು ಜನ ಸರ್ವೆಯರ್‌ಗಳನ್ನು ಕರೆಸಿ ಜಮೀನನ್ನು ಅಳತೆ ಮಾಡಿಸಿದರೆ ಅವರು ಮೂರು ಕಡೆ ತೋರಿಸಿ ಹೋಗುತ್ತಾರೆ. ಒಂದು ಕಡೆ ರೋಡು ನಿಮಗಿಲ್ಲ ಎನ್ನುತ್ತಾರೆ, ಇನ್ನೊಂದು ಕಡೆ ರೋಡ್ ಬಿಟ್ಟಿಲ್ಲ ಎನ್ನುತ್ತಾರೆ, ಇನ್ನೊಂದು ಕಡೆ ಖರಾಬ್ ಇದೆ ಎನ್ನುತ್ತಾರೆ, ಮತ್ತೊಂದು ಕಡೆ ಖರಾಬ್ ಇಲ್ಲ ಎನ್ನುತ್ತಾರೆ. ಇವತ್ತು classification ಖರಾಬ್ ಕೂಡ ಭೂ ಕಬಳಿಕೆಯಲ್ಲಿ ಬಂದುಬಿಡುತ್ತದೆ. ಇವತ್ತು ನಾವೇನಾದರೂ ಪೂಟ್ ಖರಾಬ್‌ನಲ್ಲಿ ಗಿಡ ನೆಟ್ಟಿದ್ದರೆ, ಅನುಭವಿಸುತ್ತಿದ್ದರೆ ನನ್ನನ್ನು ನೀವು ಇಲ್ಲಿ ಭೂ ಕಬಳಿಕೆ ಮಾಡಿಕೊಂಡಿದ್ದೀಯಾ ಎಂದು ಜೈಲಿಗೆ ಹಾಕಬಹುದು. ಇವುಗಳೆಲ್ಲದರ ಬಗ್ಗೆ ಏನಾದರೂ ಸ್ವಲ್ಪ relaxation ಅನ್ನು ನಿಜವಾದ agriculturist ತಾವು ಈ ಬಿಲ್‌ನಲ್ಲಿ ಕೊಡಬೇಕು.

ಎರಡನೆಯದಾಗಿ, ವಿಶೇಷ ನ್ಯಾಯಾಲಯಕ್ಕೆ ಇಬ್ಬರು ಇದ್ದರೆ ಕೋರಂ ಆಗುತ್ತದೆ ಎಂದು ಹೇಳಿಬಿಟ್ಟಿದ್ದೀರಿ. ಆ ಸಂಖ್ಯೆಯನ್ನು 3 ಅಥವಾ 5 ಮಾಡಿ. ಇಬ್ಬರು ಆ ಕಡೆ, ಇಬ್ಬರು ಈ ಕಡೆ ಆದರೆ ಏನು ಮಾಡಬೇಕು ಎನ್ನುವುದನ್ನು ಹೇಳಿ. ಇಬ್ಬರು ಜಡ್ಜ್ ಒಂದು ಕಡೆಯಾಗಿ, ಇನ್ನಿಬ್ಬರು ಒಂದು ಕಡೆಯಾದರೆ ಅವರು ಕೊಡುವ ತೀರ್ಪು ಏನಾಗುತ್ತದೆ ಎನ್ನುವುದಾದರೂ ತಾವು ಹೇಳಬೇಕಲ್ಲವೇ? ಬೆಸ ಸಂಖ್ಯೆಯನ್ನಾದರೂ ತಾವು ಮಾಡಬೇಕು. ಬೆಸ ಸಂಖ್ಯೆ ಮಾಡಿ, ಯಾವುದು prevail ಆಗುತ್ತದೆ ಎಂದು ಅಥವಾ " majority prevails" ಎನ್ನುವ ತೀರ್ಪು ಅನ್ನಾದರೂ ತಾವು ಇಲ್ಲಿ ಹೇಳಬೇಕು. ಇಲ್ಲದಿದ್ದರೆ, Tribunal ಅಧ್ಯಕ್ಷರಿಗೆ Ruling ಕೊಡುವ power ಅನ್ನಾದರೂ ಕೊಡಬೇಕು. Whatever the opinion of the members may be, the final say of the President of Chairperson prevails ಎಂದಾದರೂ ಹೇಳಬೇಕಲ್ಲವೇ. Ruling ಅಧಿಕಾರವನ್ನಾದರೂ ನೀವು ಅಧ್ಯಕ್ಷರಿಗೆ ಕೊಡಬೇಕಾಗುತ್ತದೆ. ಮತ್ತೊಂದು ವಿಷಯವೆಂದರೆ, ಅವರಿಗೆ ಬಹಳ ವ್ಯಾಪಕವಾದ ಅಧಿಕಾರವನ್ನು ಕೊಟ್ಟಿದ್ದೀರಿ. ಅವರ ಕೆಳಗೆ ಸಮಿತಿ ಮಾಡಲು ಅಧಿಕಾರವನ್ನು ಕೊಟ್ಟುಬಿಟ್ಟಿದ್ದೀರಿ.

ಇದನ್ನು ಸರ್ಕಾರ ಇಟ್ಟುಕೊಳ್ಳಬೇಕಾಗಿತ್ತು ಎನ್ನುವುದು ನನ್ನ ಭಾವನೆ. ಅವರು ಬೇಕಾದಷ್ಟು ಪೀಠಗಳನ್ನು ಸ್ಥಾಪನೆ ಮಾಡಬಹುದು, ಅವರ adjuication ಅವರೇ appointment ಗಳನ್ನು ಮಾಡಬಹುದು ಎಂದು ತಾವು ಹೇಳಿದ್ದೀರಿ. ಪೀಠದ ಸಂಬಂಧದಲ್ಲಿ ಅವರಿಗೇ ಇಷ್ಟೊಂದು ಅಧಿಕಾರ ಕೊಡುವುದು ನಮಗೇನೂ ಚೆನ್ನಾಗಿ ಕಾಣುವುದಿಲ್ಲ. ಇನ್ನೂ ಹೆಚ್ಚು ಪೀಠಗಳನ್ನು ಮಾಡಬೇಕು ಅಥವಾ ವಿಶೇಷ ನ್ಯಾಯಾಲಯಗಳನ್ನು ಮಾಡಬೇಕು ಎಂದು ಸರ್ಕಾರಕ್ಕೆ ಅನ್ನಿಸಿದಾಗ, Let Government decide. Why that judiciary person? ಅದು fancy ಆಗುತ್ತದೆ. ಅವರು 10 ಕಮಿಟಿಗಳನ್ನು ಮಾಡುತ್ತಾರೆ, 15 ಕಮಿಟಿಗಳನ್ನು ಮಾಡುತ್ತಾರೆ, 20 ಕಮಿಟಿಗಳನ್ನು ಮಾಡುತ್ತಾರೆ ಅಂದರೆ ಅದನ್ನೆಲ್ಲಾ ತಾವು entertain ಮಾಡುತ್ತೀರಾ state ನಲ್ಲಿ. If you are convinced, if the State is convinced constitute committees. ಅದಕ್ಕೆ ನಾವೇನು ಬೇಡವೆನ್ನಲಿಲ್ಲ. Adjudication easy ಆಗಬೇಕೆಂದರೆ ತಾವು ಮಾಡಿದಂಥ ಒಂದು ತೀರ್ಮಾನ prevail ಆಗುವಷ್ಟು ಅಧಿಕಾರವನ್ನಾದರೂ ಸರ್ಕಾರಕ್ಕೆ ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಅಧ್ಯಕ್ಷರಿಗೆ ಕೊಡುತ್ತಿರುವುದನ್ನು ತಾವು ಇನ್ನೊಂದು ಸಲ

ಪರ್ಯಾಲೋಚಿಸಬೇಕು ಎಂದು ಕೇಳುತ್ತೇನೆ. ಮತ್ತು ಅವರಿಗೆ ಯಾವಾಗ ಬೇಕೋ ಆಗ withdraw ಮಾಡುವ ಅಧಿಕಾರವನ್ನು ಕೊಟ್ಟಿದ್ದೀರಿ. I don't think this is fine. ಯಾವಾಗ ಬೇಕೋ ಆಗ ಒಂದು ಬೆಂಚ್‌ನಿಂದ ಇನ್ನೊಂದು ಬೆಂಚ್‌ಗೆ transfer ಮಾಡುವ ಅಧಿಕಾರ ಕೊಡುತ್ತೇವೆ ಎಂದು ಹೇಳುತ್ತೀರಿ. 8(ಸಿ), (ಡಿ), (ಇ) ಯನ್ನು ತಾವು ನೋಡಿ. ಇದು ಸ್ವಲ್ಪ ಜಾಸ್ತಿಯಾಯಿತೇನೋ ಎನ್ನುವುದು ನನ್ನ ಭಾವನೆ.

> "(ಸಿ) ಅಧ್ಯಕ್ಷರು ತಾವಾಗಿಯೇ ಆಗಲಿ ಅಥವಾ ತಮಗೆ ಮಾಡಿದ ಉಲ್ಲೇಖದ ಮೇಲಾಗಲಿ ಇಬ್ಬರು ಸದಸ್ಯರನ್ನು ಒಳಗೊಂಡ ಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ಹಿಂತೆಗೆದುಕೊಂಡು ಅದನ್ನು ವಿಲೆ ಮಾಡುವುದಕ್ಕೆ ಅಥವಾ ಯಾವುದೇ ಪ್ರಕರಣವನ್ನು ಒಂದು ಪೀಠದಿಂದ ಇನ್ನೊಂದು ಪೀಠಕ್ಕೆ ವರ್ಗಾಯಿಸುವುದಕ್ಕೆ ಸಕ್ಷಮರಾಗಿರತಕ್ಕದ್ದು"

ಎಂದು ಹೇಳಿದ್ದೀರಿ. ಹೀಗಾದರೆ, How the justice will be served ? ಒಂದು ಕೆಳಗೆ 30%, 40%, 50% hearing ಮುಗಿಸಿಬಿಟ್ಟು, ಅಧ್ಯಕ್ಷರಿಗೆ ಏನೋ ಬೇಜಾರಾಯಿತು ಎಂದುಬಿಟ್ಟು ಅದನ್ನು ಇನ್ನೊಂದು ಬೆಂಚ್‌ಗೆ transfer ಮಾಡುತ್ತೇನೆ ಎಂದರೆ suo motu power, without reason, ಅವರಿಷ್ಟ ಎನ್ನುವ ಹಾಗೆ ಮಾಡುವುದಾದರೆ, ನಾವೇನು ವಾಪಸ್ಸು ತೊಘಲಕ್ ಕಾಲಕ್ಕೆ ಹೋಗುತ್ತಿದ್ದೇವೆಯೇ? ಯಾರೋ ಒಬ್ಬರು ಮೊಹಮ್ಮದ್ ಬಿನ್ ತೊಘಲಕ್‌ನನ್ನು ಅಲ್ಲಿಗೆ ಅಧ್ಯಕ್ಷರನ್ನು ಮಾಡಿಬಿಟ್ಟರೆ ನಮ್ಮ ಗತಿಯೇನು? ನನಗೆ ಈ ಪೀಠ ಇಷ್ಟವಾಗಲಿಲ್ಲ, ಅದನ್ನು ತೆಗೆದು ಮತ್ತೊಂದು ಪೀಠದ ಕೆಳಗೆ ಕೊಡುತ್ತೇನೆ ಎನ್ನುವ ಅಧಿಕಾರವನ್ನು ಏಕೆ ಕೊಡುತ್ತಿದ್ದೀರಿ? At least, ಅದನ್ನು ಏಕೆ change ಮಾಡುತ್ತಿದ್ದೇನೆ ಎನ್ನುವುದನ್ನಾದರೂ ಅವರು ಹೇಳಬೇಕಲ್ಲವೇ? He must make a statement. ಏಕೆ ಆ ಪೀಠದಿಂದ ತೆಗೆದು ಈ ಪೀಠಕ್ಕೆ ವರ್ಗಾಯಿಸುತ್ತಿದ್ದೇನೆ? ಅದು ನಿಷ್ಕ್ರೀಯವಾಗಿತ್ತೇ? ಕೆಲಸ ಮಾಡುತ್ತಿರಲಿಲ್ಲವೇ? ಅಲ್ಲಿರುವ ಮೆಂಬರ್ಸ್ ಬಗ್ಗೆ ನನಗೆ confidence ಇರಲಿಲ್ಲವೇ? ಹೀಗೆ ಏನಾದರೂ ಒಂದು reasoning ಕೊಟ್ಟು transfer ಮಾಡುವಷ್ಟು ಅಧಿಕಾರವನ್ನು ತಾವು ಅವರಿಗೆ ಕೊಟ್ಟರೆ ಸಾಕಾಗಿತ್ತು. ಈಗ ತಾವು 100% discretion ಅನ್ನು ಅವರಿಗೆ ಕೊಟ್ಟಿರುವುದು ವೈಯಕ್ತಿಕವಾಗಿ ನನಗೆ ಅಷ್ಟೇನೂ ಚೆನ್ನಾಗಿ ಕಾಣುತ್ತಿಲ್ಲ. ಮತ್ತೆ 8(ಇ) ನಲ್ಲಿ ಅದನ್ನೇ ಹೇಳುತ್ತೀರಿ.

"(ಇ) ಇಬ್ಬರು ಸದಸ್ಯರನ್ನೊಳಗೊಂಡ ಪೀಠವು ಈ ಪ್ರಕರಣದ ಅಡಿಯಲ್ಲಿ ಯ ಮೊಕದ್ದಮೆಯ ವಿಚಾರಣೆಯನ್ನು ನಡೆಸಿದ್ದರೆ ಮತ್ತು ಅದರ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಇದ್ದಲ್ಲಿ ಅವರು ಅಭಿಪ್ರಾಯಗಳೊಡನೆ ಮೊಕದ್ದಮೆಯನ್ನು ಇನ್ನೊಬ್ಬ ನ್ಯಾಯಿಕ ಸದಸ್ಯರ ಅಥವಾ ಅಧ್ಯಕ್ಷರ ಮುಂದೆ ಮಂಡಿಸತಕ್ಕದ್ದು....

ಎಂದು ಹೇಳಿದ್ದೀರಿ. ಭಿನ್ನಾಭಿಪ್ರಾಯವಾಗುತ್ತಿದ್ದ ಹಾಗೆ ಕೇಸ್ ಅನ್ನು ಏಕೆ transfer ಮಾಡುತ್ತೀರಿ ಎಂದು ನಾನು ನಿಮ್ಮನ್ನು ಕೇಳುತ್ತೇನೆ. When you are creating bodies with multi persons, ಅಲ್ಲಿ ಕೋರಂಗೆ ಅಥವಾ majority ಗೆ ನೀವು ಅವಕಾಶ ಕೊಡಬೇಕು. ಅದನ್ನು ಬಿಟ್ಟು dispute ಬಂದ ತಕ್ಷಣ case transfer ಮಾಡಿ ಎಂದು ಹೇಳುತ್ತೀರಲ್ಲ.

"(ಇ) ....ಇನ್ನೊಬ್ಬ ನ್ಯಾಯಿಕ ಸದಸ್ಯರ ಅಥವಾ ಅಧ್ಯಕ್ಷರ ಮುಂದೆ ಮಂಡಿಸತಕ್ಕದ್ದು ಮತ್ತು ಆ ಸದಸ್ಯರು ಅಥವಾ ಸಂದರ್ಭಾನುಸಾರ ಅಧ್ಯಕ್ಷರು, ತಾವು ಸೂಕ್ತವೆಂದು ಭಾವಿಸುವಂಥ ಸುನಾವಣೆ ನಡೆಸಿದ ತರುವಾಯ ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದು ಮತ್ತು ತೀರ್ಮಾನ ಅಥವಾ ಆದೇಶವು ಆ ಅಭಿಪ್ರಾಯಕ್ಕೆ ಅನುಸಾರವಾಗಿರತಕ್ಕದ್ದು"

ಎಂದು ಹೇಳಿದ್ದೀರಿ. ನೀವು retired judge ಗಳನ್ನಿಟ್ಟುಕೊಂಡು external enquiry ಮಾಡಿರುವ ಯಾವುದಾದರೂ ಒಂದು report ಅನ್ನು ತರಿಸಿ ಈ ಸಭೆಯ ಮುಂದಿಡಿ. ಯಾವ officer mistake ಮಾಡಿರುತ್ತಾನೆ, fraud ಮಾಡಿರುತ್ತಾನೆ, audit objection ಆಗಿರುತ್ತದೆ, ಅವನು retire ಆಗಿ ನಾಲ್ಕು ವರ್ಷ ಮುಗಿಯುವವರೆಗೆ enquiry commission ಗಳು ತಮ್ಮ enquiry ಯನ್ನು complete ಮಾಡಿ report ಅನ್ನು ಕೊಡುವುದಿಲ್ಲ. ನೀವು ಅಲ್ಲಿ ಕೂರಿಸುವ ಎಲ್ಲಾ ಜಡ್ಜ್‌ಗಳೂ ಬಹಳ ಸಮರ್ಥರಾಗಿರುತ್ತಾರೆ ಅಥವಾ ಜಸ್ಟೀಸ್‌ನ್ನೇ ಕೊಡುತ್ತಾರೆ ಎಂದು ಭಾವಿಸುವ ಸ್ಥಿತಿಯಲ್ಲಿ ನಾವು ಇವತ್ತು ಬದುಕಿಲ್ಲ, ಈ ದೇಶವೂ ಬದುಕಿಲ್ಲ. ಈ ಸಮಯದಲ್ಲಿ ಅಪ್ರಸ್ತುತವಾದರೂ ನಾನು ಒಂದು ವಿಷಯವನ್ನು ಕೇಳುತ್ತೇನೆ.

ಇನ್ನು ಮುಂದೆ ಇಲ್ಲಿ ಯಾರನ್ನಾದರೂ ಅಂಥ ಜಡ್ಜ್‌ಗಳನ್ನು appoint ಮಾಡುವುದಾದರೆ, let it be Enquiry Commission of Tribunals, ಅವರಿಗೆ ಸಂಬಳ forego ಮಾಡಿ ಎಂದು ಹೇಳಿ ಅಥವಾ honorarium ಕೊಡುವುದನ್ನು ತಪ್ಪಿಸಿ, ಆಗ ಯಾರು ಬರುತ್ತಾರೆ ಎಂದು ನೋಡೋಣ. This is an addi-

tional revenue. ಅಷ್ಟಕ್ಕೋಸ್ಕರ ಅವರು ಬರುವುದು. ಆರು ತಿಂಗಳು ಮಾಡುವ ಕೆಲಸವನ್ನು ಒಂದು ವರ್ಷ, ಎರಡು ವರ್ಷ ಮಾಡುವುದು, ಆಮೇಲೆ complete ಮಾಡಲಿಲ್ಲ ಎಂದು ಇನ್ಯಾರಿಗೋ transfer ಮಾಡಿದರೆ, ನೀವು ಮಾಡುತ್ತಿರುವಂಥ case ಅಥವಾ special court ನ provision ಏನಾಗುತ್ತದೆ ಎಂದು ನನಗೆ ಗೊತ್ತು. High Court Chief Justice ಈ ಕಡೆ ಯಾರನ್ನು ಕಳುಹಿಸುತ್ತಾರೆ? Will he send an appropriate man? ಅವರ unwanted element ಅನ್ನು ಈ ಕಡೆಗೆ dump ಮಾಡುತ್ತಾರೆ. ಈ Special Court ಗಳ ಪರಿಸ್ಥಿತಿಗಳೇನಾಗಿದೆ ಎನ್ನುವುದು ನಾವು ನೋಡಿದ್ದೇವೆ. Atrocities deal ಮಾಡುತ್ತಿರುವಂಥ Court ಗಳನ್ನು ನಾವು ಇವತ್ತು ನೋಡುತ್ತಿದ್ದೇವೆ. ಅದರಿಂದ ಇವತ್ತು ಏನು ಬದಲಾವಣೆಗಳಾಗಿವೆ?

ಅರುಣ್ ಜೇಟ್ಲಿಯವರ ಕಾಲದಲ್ಲಿ fast track court ಆಗಿ criminal prosecution ಸ್ವಲ್ಪ speed up ಆಗಿರುವುದನ್ನು ಬಿಟ್ಟರೆ, ಈ ದೇಶದಲ್ಲಿ civil prosecutions, civil litigation ಗಳು ಇವತ್ತಿನವರೆಗೂ ನ್ಯಾಯಾಧಿಕರಣ ವಾಗಲಿಲ್ಲ. Again, you have given scope for appeal. Appeal ಎಲ್ಲಿಗೆ ಎಂದರೆ Appellate Tribunal ಮುಂದೆ ಹೋಗಬಹುದು, ಹೈಕೋರ್ಟ್ ಮುಂದೆ ಹೋಗಬಹುದು. Then what is the need of these fellows? ತಾವು ಇನ್ನೊಂದು ಸಲ ಪರಿಶೀಲನೆ ಮಾಡಬೇಕು. ಇವರಿಗೆ ನೀವು ಅಧಿಕಾರ ಕೊಡುವುದರಲ್ಲಿ ನಮ್ಮ ತಕರಾರಿಲ್ಲ. Litigation ಗಳನ್ನು ಸರಳವಾಗಿ ಅಥವಾ speed ಆಗಿ dispose ಮಾಡಿಸುವುದರಲ್ಲಿ ತಕರಾರಿಲ್ಲ. ಆದರೆ, ತಾವು ಗ್ರಾಮೀಣ ಪ್ರದೇಶವನ್ನು ಸ್ವಲ್ಪ ತಲೆಯಲ್ಲಿಟ್ಟುಕೊಳ್ಳಬೇಕು. ಮಾತುಮಾತಿಗೂ ಭೂ ಕಬಳಿಕೆ, ಭೂ ಕಬಳಿಕೆ ಎಂದು ಹೇಳಿ ಹಳ್ಳಿಗಳಲ್ಲಿರುವವರ ಮೇಲೆಲ್ಲಾ ಕೇಸುಗಳನ್ನು ಹಾಕುವಂಥ ಸ್ಥಿತಿಯನ್ನು ದಯಮಾಡಿ ನಿರ್ಮಾಣ ಮಾಡಬಾರದು.

ನಾವು ಭೂ ಕಬಳಿಕೆಗೆ ಸಂಬಂಧಪಟ್ಟ ಜಂಟಿ ಸದನ ಸಮಿತಿಯಲ್ಲಿ ಇದ್ದಾಗ, ಇಂಥ ಯಾವ ಉದ್ದೇಶವನ್ನೂ ನಾವು ತಲೆಯಲ್ಲಿಟ್ಟುಕೊಂಡಿರಲಿಲ್ಲ. ರಾಮಸ್ವಾಮಿಯವರ ಜೊತೆಯಲ್ಲಿ ನಾವೂ ಇದ್ದೇವೆ. ಇಲ್ಲಿ ಯಾರೋ ಏನೋ ಮಾಡುತ್ತಾರೆ ಎಂದು ಹೇಳಿ ಇನ್ನೊಬ್ಬರಿಗೆ ಬರೆ ಹಾಕುವ ಸ್ಥಿತಿ ಇಂಥ 2–3 ಬಿಲ್‌ಗಳಿಂದ ನಿರ್ಮಾಣವಾಗುತ್ತಿದೆ. ಈ ಬಿಲ್‌ಗಳ ವ್ಯಾಪ್ತಿ ಏನಿದೆ ಎಂದರೆ, it is applicable to the whole state of Karnataka. ಹಳ್ಳಿಗಳಲ್ಲಿ ಒತ್ತುವರಿ

ಮಾಡಿರುವುದು ಅವನಿಗೆ ಗೊತ್ತಿರುವುದಿಲ್ಲ. Encroachment ಆಗಿರುವುದೇ ಗೊತ್ತಿರುವುದಿಲ್ಲ. ಅದಕ್ಕೇ there is provision for adverse possession in Law. High Court ಮುಂದೆ ನಾನು adverse possession ಅನ್ನು prove ಮಾಡಿಕೊಂಡು, ಅದನ್ನು ನಾನು ನನ್ನದೆಂದು ಮಾಡಿಕೊಳ್ಳಲು ಏಕೆ provision ಇತ್ತು ಎಂದರೆ, ನನಗೆ ಗೊತ್ತಿಲ್ಲದೇ ನಾನು 14 ವರ್ಷದಿಂದಲೋ, 30 ವರ್ಷದಿಂದಲೋ ಅದರ possession ನಲ್ಲಿ ಇದ್ದೆ ಎನ್ನುವ ಕಾರಣಕ್ಕಾಗಿ ಇತ್ತು.

ಶ್ರೀ ಎಂ.ಪಿ. ಪ್ರಕಾಶ್ :- ಖಾಸಗಿ ವ್ಯಕ್ತಿಯಾದರೆ 12 ವರ್ಷ, ಸರ್ಕಾರಕ್ಕಾದರೆ 30 ವರ್ಷ ಎಂದು ಇತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :- 12 ವರ್ಷ ಮತ್ತು 30 ವರ್ಷ ಎನ್ನುವ ಈ provision ಏನಿದೆ, ಅದನ್ನು ಈಗ ನೀವು ಏನು ಮಾಡುತ್ತೀರಿ ಎನ್ನುವುದು ನನಗೆ ಗೊತ್ತಾಗಬೇಕು. 12 ವರ್ಷ ನಾನು ಇಲ್ಲಿ ಇದ್ದೆ, ನಾನು ತೋಟ ಮಾಡಿದೆ, ಮತ್ತೊಂದು ಮಾಡಿದ್ದರೆ, ನೀವು ಭೂ ಕಬಳಿಕೆ ಕಾನೂನಿನಡಿ ನನ್ನನ್ನು ಜೈಲಿಗೆ ಹಾಕಿ, High Court ನಲ್ಲಿ adverse possession ನಲ್ಲಿ ನನ್ನಂತೆ case ಆದರೆ, which law will prevail? ಯಾವ law final ಆಗಿ prevail ಆಗುತ್ತದೆ. And I know, after 12 years I am empowered, I will be entitled for the titles of that land, possession ಎಂದಾಗ ನೀವು ಹೇಗೆ ನನ್ನನ್ನು ಭೂ ಕಬಳಿಕೆದಾರ ಎಂದು ಕರೆಯುತ್ತೀರಿ? ಇದನ್ನೆಲ್ಲಾ ತಾವು ಇನ್ನೊಂದು ಸಲ ವಿಮರ್ಶೆ ಮಾಡಬೇಕು.

ಬೆಂಗಳೂರು ಮತ್ತು ಇತರ ಪಟ್ಟಣಗಳಲ್ಲಿ ಭೂ ಕಬಳಿಕೆಯಾಗುವುದನ್ನು ತಡೆಯಲು ಮಾಡುತ್ತಿರುವ ತಮ್ಮ ಈ ಒಂದು ಪ್ರಯತ್ನವನ್ನು ನಾವು ಶ್ಲಾಘಿಸುತ್ತೇವೆ. ಅದರಲ್ಲೇನೂ ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ. ಇದು ಆಗಲೇಬೇಕಾಗಿರುವುದು. ಅದರ ಬಗ್ಗೆ ನಮಗೆ ಹೆಮ್ಮೆ ಇದೆ. ಆ ಬಗ್ಗೆ ಈ ಕಡೆಯಿಂದ ನಾವೇ demand ಮಾಡಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ House Committee ಆಗಿ ಅಲ್ಲಿ ಆಗಿರುವ ಕೆಲಸವಿದು.

ಭೂ ಕಬಳಿಕೆಯನ್ನು ನೀವು ತಡೆಯಬೇಕು. ಅದನ್ನು ತಡೆಯುವುದರ ಜೊತೆಗೆ ಅಮಾಯಕರಿಗೆ ರಕ್ಷಣೆ ಕೊಡಬೇಕು. ಯಾರನ್ನೋ ತೆಗೆದುಕೊಂಡು ಹೋಗಿ ಯಾವುದಕ್ಕೋ ಬಲಿ ಹಾಕಲು ಶಾಸನಗಳು ಆಯುಧಗಳಾಗಬಾರದು. ಇದನ್ನು

ಮತ್ತೊಂದು ಸಲ ತಾವು ಪರಿಶೀಲನೆ ಮಾಡಿ. ಗ್ರಾಮೀಣ ಪ್ರದೇಶದಲ್ಲಿರುವ, ನಿಜವಾಗಿ ಕೃಷಿ ಮಾಡುತ್ತಿರುವವರು ಅಲ್ಪಸ್ವಲ್ಪ ಒತ್ತುವರಿ ಮಾಡಿದ್ದಾರೆ ಅದನ್ನು ಈಗಿರುವ civil dispute ನಲ್ಲಿ ತೀರ್ಮಾನ ಮಾಡಬೇಕು. Sub Divisional Magistrate ಗಳನ್ನಿಟ್ಟಿದ್ದೀರಿ, ತಹಶೀಲ್ದಾರರಿಗೆ ಅಧಿಕಾರ ಕೊಟ್ಟಿದ್ದೀರಿ, powers are vested with them. ಅಲ್ಲೇ trial ಆಗಲಿ. ಇದೆಲ್ಲವನ್ನು ತಂದುಬಿಟ್ಟು ನಾವೆಲ್ಲ criminals, offenders ಎಂದು ಹೇಳಿ ಯಾರೋ ಜಡ್ಜ್ ಮುಂದೆ ಕೈಕಟ್ಟಿಕೊಂಡು ನಿಂತುಕೊಳ್ಳುವ ಸ್ಥಿತಿಯನ್ನು ತಾವು ದಯಮಾಡಿ ನಿರ್ಮಾಣ ಮಾಡಬಾರದು ಎಂದು ಹೇಳಿ, ಮತ್ತೊಂದು ಸಲ ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ನಿಮ್ಮ ಉದ್ದೇಶ ಒಳ್ಳೆಯದಿದ್ದರೂ far reaching effects are dangerous ಎಂದು ನನ್ನ ಅಭಿಪ್ರಾಯವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(5 : 30 ನಿಮಿಷ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಮಾನ್ಯ ಅಧ್ಯಕ್ಷರೆ, ಈ ಬಿಲ್‌ಅನ್ನು ಇವತ್ತೇನು ತರುತ್ತಿದ್ದಾರೆ, ಜಂಟಿ ಸದನ ಸಮಿತಿ ಸಭೆಯಲ್ಲಿ ಚರ್ಚೆ ಮಾಡಿದ ಸಂದರ್ಭದಲ್ಲಿ ಇದನ್ನು ತರಬೇಕೆಂದು ಸೂಚನೆ ಕೊಟ್ಟವರೇ ನಾವು. ಈ ಕಾಯ್ದೆಯನ್ನು ತರಬೇಕಾದರೆ, ಆಂಧ್ರಪ್ರದೇಶದ ರಾಜಧಾನಿಗೆ ಹೋಗಿ ಅಲ್ಲಿನ ವಿಶೇಷ ನ್ಯಾಯಾಲಯ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ ಎನ್ನತಕ್ಕಂಥದ್ದನ್ನು ಅಭ್ಯಾಸ ಮಾಡಿ ಬನ್ನಿ ಎಂದು ಸದನ ಸಮಿತಿಯಲ್ಲಿ ತೀರ್ಮಾನವಾದ್ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಹೈದರಾಬಾದ್‌ಗೆ ಹೋಗಿ ಅವರು ಪಾಸ್ ಮಾಡಿದಂಥ ಬಿಲ್ ಅನ್ನು ತಂದು ಸಮಿತಿ ಮುಂದೆ ಇಟ್ಟರು. ಆ ಬಿಲ್ ಬಗ್ಗೆ ಸಮಿತಿಯಲ್ಲಿ ನಾವು ಚರ್ಚಿಸುವಾಗ ಕೆಲವು ಲೋಪದೋಷಗಳು ಕಂಡುಬಂದವು. ಆ ಲೋಪದೋಷಗಳನ್ನು ಸರಿಪಡಿಸಿ ಒಂದು ಹೊಸ ಬಿಲ್ ಅನು ತೆಗೆದುಕೊಂಡು ಬನ್ನಿ ಎಂದು ನಾವು ಹೇಳಿದ್ದೆವು. ಈ ಬಿಲ್ ಅನ್ನು ತಂದು ವಿಶೇಷ ನ್ಯಾಯಾಲಯ ರಚಿಸಬೇಕೆಂದು ಹೇಳುವುದಕ್ಕೆ ಎರಡು ಉದ್ದೇಶಗಳಿದ್ದವು.

ಒಂದನೆಯದಾಗಿ, ಈಗಿರುವ ಕಾನೂನಿನ ಪ್ರಕಾರ ಅಕ್ರಮವಾಗಿ ಭೂಕಬಳಿಕೆ ಮಾಡಿದವರನ್ನು ಶಿಕ್ಷೆ ಮಾಡತಕ್ಕಂಥ ಪರಿಸ್ಥಿತಿ ಮತ್ತು ವಿಧಾನ, ಅವಕಾಶಗಳು ಕಡಿಮೆಯಿರುವುದರಿಂದ ಅವನು ಯಾವುದೋ ಒಂದು ಹೆಸರಿನಲ್ಲಿ ತಪ್ಪಿಸಿಕೊಂಡು

ಹೋಗಿಬಿಡುತ್ತಾರೆ, ಅವರು ತಪ್ಪಿಸಿಕೊಂಡು ಹೋಗಬಾರದು. ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ನ್ಯಾಯಾಲಯ ವ್ಯವಸ್ಥೆಯಲ್ಲಿ ತಪ್ಪಿಸಿಕೊಂಡು ಹೋಗುತ್ತಾರೆ. ಅದಕ್ಕೋಸ್ಕರ ವಿಶೇಷ ನ್ಯಾಯಾಲಯವನ್ನು ರಚಿಸಿ ಎಂದು ಸೂಚನೆ ಕೊಟ್ಟಿದ್ದೇ ನಾವು.

ಇನ್ನೊಂದು ಉದ್ದೇಶವೇನೆಂದರೆ, ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗುತ್ತದೆಂದು ನಮ್ಮ ಅಭಿಪ್ರಾಯವಿತ್ತು. ಇದರಲ್ಲಿ ನೀವು ವಿಪರೀತ ಸ್ಕೋಪ್ ಅನ್ನು widen ಮಾಡಿದ್ದೀರಿ. ಆ ವಿವರಗಳ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಮತ್ತೆ ನಾನು ಆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದರಿಂದೇನಾಗುತ್ತದೆಂದರೆ, ದುರುಪಯೋಗಕ್ಕೆ ನಾವೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಈ ಅಧಿಕಾರವನ್ನು ದುರುಪಯೋಗ ಮಾಡಲಿಕ್ಕೆ ನಾವೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ ಅದಾಗಬಾರದು. ನಾಳೆ ದಿವಸ ಹಳ್ಳಿ ಪ್ರದೇಶಗಳಲ್ಲಿರುವ ಜನರು ನಮಗೆ ಶಾಪ ಹಾಕಬಾರದು. Adverse possession ಬಗ್ಗೆ explain ಮಾಡಿದ್ದಾರೆ. ಆ ಕಾನೂನಿಗೆ ಈ ಕಾನೂನು contradictory ಆಗುವುದಿಲ್ಲವೇ? Contradictory ಆಗುತ್ತದೆ. Adverse possession ನಲ್ಲಿರುವ ಕಾನೂನು prevail ಆಗಬೇಕೇ ಅಥವಾ ಇದು prevail ಆಗಬೇಕೇ, ಆ ಬಗ್ಗೆ ಸ್ವಪಷ್ಟನೆ ಬೇಕಲ್ಲವೇ? ಅದರ ಮೇಲೆ ಇದು prevail ಆಗಲಿಕ್ಕೆ ಆಗುವುದಿಲ್ಲ. ಏಕೆಂದರೆ, ಇದು Special Court. Any Special Court Act according to the Constitution cannot prevail on the original Act. Central Act ಮೇಲೆ prevail ಮಾಡಲಿಕ್ಕೆ ಬರುವುದಿಲ್ಲ. Because that is a Central Act. Central Act ಮೇಲೆ ವಿಶೇಷ ನ್ಯಾಯಾಲಯದ Act prevail ಆಗಲಿಕ್ಕಾಗದ ಸಂದರ್ಭದಲ್ಲಿ ಅದು self contradictory ಆಗುತ್ತದೆ. ಅದನ್ನು ತೀರ್ಮಾನ ಮಾಡುವ ಸಂದರ್ಭದಲ್ಲಿ ಯಾವ ರೀತಿಯಾಗಿ ತೀರ್ಮಾನ ಮಾಡುವ ಅಧಿಕಾರ ಅವರಿಗೆ ಬರುತ್ತದೆ? ಇದೆಲ್ಲವನ್ನು ನೋಡಬೇಕಾಗುತ್ತದೆ.

ಇದು ನಗರ ಪ್ರದೇಶಗಳಿಗೆ ಸೀಮಿತವಾಗಬೇಕು. ಬೇಕಾದರೆ Corporation, Municipality, ಮಹಾನಗರ ಪಾಲಿಕೆ ಮಾಡಿ. ನಮ್ಮ ಉದ್ದೇ, ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಮುಖ್ಯವಾಗಿದ್ದಂಥಾದ್ದು ಎಂದಾಗಿತ್ತು. ಈ scope ನಲ್ಲಿ ಇಡೀ ರಾಜ್ಯಕ್ಕೆ ಎಂದು ಇರುವ ಪದವನ್ನು ತೆಗೆಯಿರಿ. ರಾಜ್ಯಕ್ಕೆ

ಎಂದು ಇರುವ ಪದವನ್ನು ತೆಗೆಯಬೇಕು. ಇಲ್ಲವೆಂದರೆ ಇದು ರಾಷ್ಟ್ರಕ್ಕೆ ಮಾತ್ರ ಸೀಮಿತವೇಂದು ಸ್ಪಷ್ಟಪಡಿಸಬೇಕು. ಭೂಕಬಳಿಕೆ ಎಂದರೇನು? It must be explained. Otherwise ಏನಾಗುತ್ತದೆಂದರೆ, 4 ಜನರು ಕುಡುಕರು ಸೇರಿಕೊಂಡು ಒಂದು ಆನೆ ಹಿಡಿದುಕೊಂಡು ಒಬ್ಬ ಇದು ಕಾಲು, ಇನ್ನೊಬ್ಬ ಇದು ಬಾಲ ಎಂದು ಹೇಳುತ್ತಾ ಹೋದಂತೆ, ಅದು ಭಾರೀ ಅಪಾಯದ ಸ್ಥಿತಿಗೆ ಬರುತ್ತದೆ. ಮೊದಲನೆಯದಾಗಿ, What is grabbing ಎನ್ನುವುದನ್ನು public ಗೆ explain ಮಾಡಬೇಕು. ಇದು ಇಡೀ ರಾಜ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಆಗಬಾರದು.

ಇಲ್ಲಿ Appellate Authority ಅನ್ನು ನೀವೇನೂ creat ಮಾಡಿಲ್ಲ. ಈಗ scope wide ಆಗುತ್ತದೆ. ಈಗ Article 226 ಪ್ರಕಾರ High Court, ಗೆ KAT ಗೆ, Divisional Commissioner ಗೆ ಹೋಗಬೇಕೇ? ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲಿ ಬಿಲ್ ತಂದು Divisional Commissioner Post creat ಮಾಡಿದರು. ಈಗ Divisional Commissioner ಹೋಗಿ Regional Commissioner ಎಂದು ಆಗಿದೆ. ಮುಂದೆ ಹೋಗಬೇಕೆ? Revenue Commissioner ಮುಂದೆ ಹೋಗುವುದೇ? ಇವೆಲ್ಲ clarify ಆಗಬೇಕಲ್ಲವೇ? ಇಲ್ಲವೆಂದರೆ, ಮತ್ತೆ ಎಲ್ಲಿಗೆ ಹೋಗಬೇಕು? ವಿಶೇಷ ನ್ಯಾಯಾಲಯ ಒಂದು ತೀರ್ಪು ಕೊಟ್ಟರೆ ನಮ್ಮ Constitution provision ಪ್ರಕಾರ ಒಂದು Appellate Authosity ಇರಲೇಬೇಕು. Which is that Appellate Authoruty? ಎಂಬ ಬಗ್ಗೆ ಕ್ಲ್ಯಾರಿಫೈ ಮಾಡಬೇಕು

8(ಎ) ಯಿಂದ ಇದೆಲ್ಲ ಏನು ತಂದಿದ್ದೀರಿ ಬಹುಶಃ ಏಕೆ ಈ ರೀತಿ ಇದನ್ನು draft ಮಾಡಿದ್ದಾರೋ ಗೊತ್ತಿಲ್ಲ. ಮಾನ್ಯ ಪ್ರಕಾಶ್‌ರವರೆ, ಇದರಲ್ಲಿ ಎಷ್ಟು ಗೊಂದಲವಾಗುತ್ತದೆಂಬುದನ್ನು ಆಲೋಚನೆ ಮಾಡಿ. ಬೇರೆ ಬೇರೆ ಪೀಠಗಳನ್ನು ರಚನೆ ಮಾಡುವ ಸಂದರ್ಭದಲ್ಲಿ ಅವನಿಗೆ ಪರಮಾಧಿಕಾರ ಕೊಟ್ಟರೆ ಹೇಗೆ? ನಿಮ್ಮ ಕೈಯಲ್ಲಿರುವ ಬಡಿಗೆಯನ್ನು ಅವನ ಕೈಯಲ್ಲಿ ಕೊಟ್ಟು ನೀವು ಹೊಡೆಸಿಕೊಳ್ಳುತ್ತೀರಾ? It is your creation. You must have an authority on that. ಒಬ್ಬ ವ್ಯಕ್ತಿಗೆ ಇಷ್ಟೊಂದು ಅಧಿಕಾರ ಕೊಟ್ಟರೆ ಅಪಾಯ. ಈ ದೇಶದಲ್ಲಿ ಈ ಅಧಿಕಾರ ಹೆಚ್ಚು ಕೇಂದ್ರಿಕೃತವಾದರೆ ಕಷ್ಟವಾಗಬಹುದು. power ಎಲ್ಲಾದರೂ ಭಾರೀ centralize ಆದರೆ ಭಾರೀ ಅಪಾಯ ಎಂದು ಬೆಳಿಗ್ಗೆ ನೀವು ಖಾಸಗಿಯಾಗಿ

ಮಾತನಾಡಿದಾಗ ಹೇಳಿದ್ದಿರಲ್ಲಾ. Actually that is right. Heavy concentration of power leads to dictatorship. ನಿಮಗೆ ಇದೆಲ್ಲ ಗೊತ್ತಿದೆ.

ಇದನ್ನು draft ಮಾಡುವಾಗ ಏಕೋ ತಾವು ನೋಡಿಲ್ಲವೆಂದು ತೋರುತ್ತದೆ. ಇವೆಲ್ಲವನ್ನು ನಾವು ನಿಮಗೆ ಹೇಳಿಕೊಡಬೇಕಾಗಿಲ್ಲ. You are more experienced than us. But how it has been drafted, I cannot understand. How the Law Department has agreed to such an absolute authority for a single person to constitute a Bench and dissolving, withdrawing asking,... ಒಂದು ಸಲ ಒಂದು litigation ಒಂದು ಪೀಠದ ಮುಂದೆ argue ಆಗುತ್ತಿರುತ್ತದೆ. ಇದ್ದಕ್ಕಿದ್ದ ಹಾಗೆ ಅದನ್ನು ಅಲ್ಲಿಂದ ತೆಗೆದು ಇನ್ನೊಂದು Bench ಗೆ ಕೊಟ್ಟುಬಿಟ್ಟರೆ ಇದರಲ್ಲಿ ಏನಾದರೂ ಅರ್ಥವಿದೆಯೆ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಒಂದು ಕಡೆ IAS ನವರಿಗೆ Post create ಮಾಡಿ ಇನ್ನೊಂದು ಕಡೆ ಈಗ Judge ಗಳಿಗೆ Post creation ಮಾಡಿಕೊಂಡು ಹೊರಟುಬಿಟ್ಟರು. So you can create many posts for Judges. For District Judges and High Court Judges cadres you will have 100 posts in 2 to 3 years.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಇದರಿಂದ ಯಾವುದೇ case ಇತ್ಯರ್ಥ ಮಾಡಲಿಕ್ಕೆ ಆಗುವುದಿಲ್ಲ. ಏಕೆಂದರೆ, if once that particular Judge of the Specail Court becomes prejudiced, ಈ ಪೀಠ ಬೇಡ ಎಂದರೆ ಹೇಗೆ? 75% ವಿಚಾರಣೆ ಮುಗಿದಿರುತ್ತದೆ. ತಕ್ಷಣ ಅಲ್ಲಿಂದ ತೆಗೆದು ಇನ್ನೊಂದು ಪೀಠಕ್ಕೆ ಹೋದಾಗ ಆ litigation ಅನ್ನು ಅವರು ಮೊದಲಿನಿಂದ ಪ್ರಾರಂಭ ಮಾಡಬೇಕಾಗುತ್ತದೆ. ಮತ್ತೆ ಅಲ್ಲಿಂದ ತೆಗೆದು ಇನ್ನೊಂದು Bench ಗೆ ಹಾಕಿದಾಗ ಮತ್ತೆ ಮೊದಲಿನಿಂದ ಪ್ರಾರಂಭವಾಗುತ್ತದೆ. It goes on dragging the whole issue without setting. ಆಂಧ್ರಪ್ರದೇಶದವರು ತಂದಿರುವ ಬಿಲ್‌ನಲ್ಲಿದ್ದಂಥ ಸಮಸ್ಯೆಯೇ ಇದು. ಅವರಿಗೆ ಶಿಕ್ಷೆ ಕೊಡಲಿಕ್ಕೆ ಅಧಿಕಾರವಿರಲಿಲ್ಲ. ನೀವು ಶಿಕ್ಷೆ ಕೊಡಲಿಕ್ಕೆ ಅಧಿಕಾರ ಕೊಟ್ಟು ಎಷ್ಟು ವರ್ಷಗಳು ಬೇಕಾದರೂ ನೀವು ಇದನ್ನು drag on ಮಾಡಿಕೊಂಡು ಹೋಗಬಹುದೆಂದು ಹೇಳಿದರೆ, ಕಡೆಗೆ ಅವನಿಗೆ ಶಿಕ್ಷೆಯೂ

ಆಗುವುದಿಲ್ಲ, ಅದು ತೀರ್ಮಾನವೂ ಆಗುವುದಿಲ್ಲ. ಆ ರೀತಿಯ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನೀವು ಇದನ್ನು ತಪ್ಪಿಸಲೇಬೇಕು.

ನೀವೇನು 8(ಸಿ) creation of Benches ಏನಿದೆ, ಅದರ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಬೇಕು. ಹಾಗೆಯೇ, abrupt ಆಗಿ ಮಧ್ಯದಲ್ಲಿ ವಿಚಾರಣೆ ನಡೆಯುವ ಸಂದರ್ಭದಲ್ಲಿ withdraw ಮಾಡಿ ಇನ್ನೊಂದು Bench ಗೆ transfer ಮಾಡುವ ಅಧಿಕಾರವೇನಿದೆ ಇದು ಅಪಾಯ. ಖಂಡಿತವಾಗಿ ಯಾವುದೂ ತೀರ್ಮಾನವಾಗುವುದಿಲ್ಲ. ಒಂದು Bench ನಿಂದ ಇನ್ನೊಂದು Bench ಗೆ transfer ಆಗುತ್ತಾ ಹೋದರೆ ಎಲ್ಲಿ ತೀರ್ಮಾನವಾಗುತ್ತದೆ? Finally where we will be landing? ಇದರಲ್ಲಿ red tapism, ಏನೇನೋ ಸಮಸ್ಯೆಗಳೆಲ್ಲ ಉದ್ಭವವಾಗುತ್ತದೆ. ಇದನ್ನು ದಯವಿಟ್ಟು ಪುನರ್ ಪರಿಶೀಲನೆ ಮಾಡಬೇಕು. 8(ಸಿ) ಯಿಂದ (ಇ) ವರೆಗೆ ಏನು ತಂದಿದ್ದೀರಿ ಇದನ್ನು ಪುನರ್‌ಪರಿಶೀಲನೆ ಮಾಡಬೇಕು. ರಾಜ್ಯವ್ಯಾಪ್ತಿ ಎನ್ನುವುದನ್ನು ತಪ್ಪಿಸಿ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎ. ಜೀವಿಜಯ (ಸೋಮವಾರಪೇಟೆ) :- ಮಾನ್ಯ ಅಧ್ಯಕ್ಷರೇ, ಈ ವಿಧೇಯಕದಲ್ಲಿ,

<u>**ಖಂಡ-3**</u>

ಸದರಿ ವಿಧೇಯಕದಲ್ಲಿ, 3 ನೇ ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು ಎಂದರೆ :-

> "ಪರಂತು, ಕೊಡುಗು ಜಿಲ್ಲೆಯ ಜುಮ್ಮಾ, ಬಾಣೆ, ಕಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ, ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳಿಗೆ ಅಥವಾ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 94ಎ, 94ಬಿ ಮತ್ತು 94ಸಿ, ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಅಥವಾ ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಭೂಮಿಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ"

ಎಂದು ಹೇಳುವುದನ್ನು ಸೇರಿಸಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಇದರಲ್ಲಿ ಒಂದು ಗೊಂದಲವಾಗುತ್ತದೆ. 94ಎ, 94ಬಿ, 94ಸಿ, 1996 ನೇ ಇಸವಿಯಲ್ಲಿ ಅಂದಿನ ಸಚಿವ ಸಂಪುಟದವರು ಕೊಡಗಿನ ಜುಮ್ಮಾ, ಬಾಣೆ ಜಾಗಗಳ ಬಗ್ಗೆ ಇತ್ಯರ್ಥ ಮಾಡಬೇಕು–ಆ ರೀತಿ ತಿದ್ದುಪಡಿ ಮಾಡಿ, ಇದನ್ನು ತಂದಿದ್ದರು. ಆದರೆ, ಆಗೇನಾಗಿದೆ ಎಂದರೆ, 94ಸಿ ಅಥವಾ 77ಸಿ ನಮ್ಮ ಜುಮ್ಮಾ, ಬಾಣೆ ಜಾಗಗಳ ಚಾರಿತ್ರಿಕ ಹಿನ್ನೆಲೆಯನ್ನು ನಾನು ಈ ದಿವಸ ಹೇಳಲು ಹೋಗುವುದಿಲ್ಲ ಅಥವಾ Supreme Court, High Court Judgment ಬಗ್ಗೆ ಕೂಡ ಪ್ರಸ್ತಾಪ ಮಾಡುವುದಿಲ್ಲ. ಈ ಪ್ರಕರಣಗಳಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಎಂದು ನೀವು ಹೇಳುತ್ತಿದ್ದೀರಿ. ಆದರೆ, ನಾವೇನು ಮಾಡಿದ್ದೇವೆಂದರೆ, ಜುಮ್ಮಾ ಅಥವಾ ಜಮ್ಮಿ ಭೂಮಿ ಅಥವಾ ಬಾಣೆ ಜಾಗ ಅಥವಾ ಉಂಬಳಿ ಜಾಗ -- ಒಟ್ಟು 34 ನಿಬಂಧನೆಗಳು, ಕೊಡಗು ಜಿಲ್ಲೆಯಲ್ಲಿವೆ. ಕೊಡಗು ಜಿಲ್ಲೆಯಲ್ಲಿರುವ ನಿಬಂಧನೆಗಳಲ್ಲಿ certain Inam Abolition Act ಗೆ ಜುಮ್ಮಾ, ಬಾಣೆ ಇವ್ಯಾವುದಕ್ಕೂ ಬರುವುದಿಲ್ಲ. ಅದಕ್ಕೆ ನಾವು declaration ಕೂಡ ಕೊಟ್ಟಿಲ್ಲ. ನಾವು Tribunal ಮುಂದೆ ಹೋಗುವ ಪ್ರಶ್ನೆ ಇಲ್ಲ.

ಏಕೆಂದರೆ, ಇದನ್ನು ಸಕ್ರಮ ಗೊಳಿಸಬೇಕಾದರೆ 5 ಎಕರೆ ಮಿತಿಯೊಳಗೆ ಸಕ್ರಮಗೊಳಿಸಬೇಕಾಗುತ್ತದೆ. ಇದನ್ನು ಸಕ್ರಮಗೊಳಿಸುವುದಕ್ಕೆ ಬರುವುದಿಲ್ಲ. ಏಕೆಂದರೆ, 2 ಲಕ್ಷದ 70 ಸಾವಿರ ಎಕರೆ ಕಾಫಿ ತೋಟವನ್ನು ಈ ಜಮೀನಿನಲ್ಲಿ ಮಾಡಿದ್ದೇವೆ. ಈ ಕಾನೂನಿನಡಿಯಲ್ಲಿ ನಮಗೆ ಮಾಡಲಿಕ್ಕೆ ಬರುವುದಿಲ್ಲ. ಎಲ್ಲರಿಗೂ ಇರುವ ಭಯವೇನೆಂದರೆ ಈ ಸಮಿತಿಯ ಮುಂದೆ ನಾವ್ಯಾರು ಕೂಡ regularize ಮಾಡಲಿಕ್ಕೆ ಅರ್ಜಿ ಹಾಕಲಿಲ್ಲ. ಕಂದಾಯ ಇಲಾಖೆಯವರು ಅದನ್ನು ಯಾವ ರೀತಿ ಪರಿಹಾರ ಮಾಡುತ್ತಾರೆ ಎಂಬ ಬಗ್ಗೆ clarification ಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ತಾವು ಖಂಡ-3 ರಲ್ಲಿ ತಂದಿರುವ ತಿದ್ದುಪಡಿಯಲ್ಲಿ ಹೇಳಿರುವಂತೆ ಜುಮ್ಮಾ, ಬಾಣೆ, ಕಾಣೆ ಜೊತೆಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕುಮ್ಕಿ ಅನ್ನು ಸಹ

ಸೇರಸಬೇಕಾಗುತ್ತದೆ. ಅದನ್ನು ಅವರು encroachment ಎಂದು ಹೇಳಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಅದನ್ನು ಸಹ ಸೇರಿಸಬೇಕಾಗುತ್ತದೆ. 94ಎ, 94ಬಿ, 94ಸಿ –ಇದರ ಬಗ್ಗೆ ಬೆಳಿಗ್ಗೆ ನಾವು ಹೇಳಿದ್ದೆವು. ಕೇವಲ ಅಕ್ರಮ–ಸಕ್ರಮ ಸಮಿತಿಯ ಮುಂದಿರುವುದು ಮಾತ್ರವಲ್ಲ, ನಂತರ A.C. ಮುಂದೆ ಏನು Appeal file ಮಾಡುತ್ತೇವೆ, ಯಾವುದೇ ಪ್ರಾಧಿಕಾರ ಅಥವಾ ಕೋರ್ಟ್ ಮುಂದೆ pending ಇರುವುದನ್ನು ಇದರಿಂದ ಹೊರತುಪಡಿಸಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ತಾವು ಆಂಧ್ರಪ್ರದೇಶ Land Grabbing Act ಅನ್ನು copy ಮಾಡಿದ್ದೀರಿ. ಅದನ್ನು ಚೆನ್ನಾಗಿ ಮಾಡಿದ್ದಾರೆ. ನಾನು ಮೊನ್ನೆಯೇ ಮಾತನಾಡುವಾಗ ಹೇಳಿದ್ದೆ. ಅಲ್ಲಿ clause by clause explanation ಕೊಟ್ಟಿದ್ದಾರೆ. ಇದನ್ನು ತರುವಾಗ clause by clause explanation ಕೊಟ್ಟರೆ ಒಳ್ಳೆಯದಾಗುತ್ತದೆ. ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. “The land grabbers being highly sophisticated, economic offenders. rich and resourceful will naturally adopt all means and techniques to escape the liability” ಎಂದು ಹೇಳುತ್ತಾರೆ. ಅಂದರೆ ಎಲ್ಲವನ್ನೂ ತಪ್ಪಿಸಿಕೊಂಡು ಹೋಗುವುದರಿಂದ ಅವರಿಗೆ ಗೊತ್ತಿದೆ. Cobwed ನಲ್ಲಿ ದೊಡ್ಡ ದೊಡ್ಡ ಹುಳುಗಳು ಹೋದಾಗ ತಪ್ಪಿಸಿಕೊಂಡು ಹೋಗುತ್ತವೆ. ಹರಿದು ಬೀಳುತ್ತದೆ. ಸಣ್ಣದು ಹೋದಾಗ ಮಾತ್ರ ಸಿಕ್ಕಿ ಸಾಯುವುದು. ಇದರಲ್ಲಿ ಈಗ ಹಳ್ಳಿಯವರು ಸಿಕ್ಕಿ ಸಾಯಬಾರದು. ಪಟ್ಟಣ ಪ್ರದೇಶಗಳ ವ್ಯಾಪ್ತಿಯಲ್ಲಿ ದೊಡ್ಡ ದೊಡ್ಡವರು ಇದ್ದಾರೆ. ಅದನ್ನು ಸ್ವಲ್ಪ ಜಾಗ್ರತೆ ಮಾಡಬೇಕಾಗುತ್ತದೆ.

ಈ ಖಾಸಗಿಯದ್ದು ತಂದದ್ದು ಬಹಳ ಒಳ್ಳೆಯದಾಯಿತು. ಸರ್ಕಾರಿ ಭೂಮಿಯ ಕಬಳಿಕೆ ಜೊತೆಗೆ ಖಾಸಗಿ ಭೂಮಿ ಕಬಳಿಕೆ ಬೆಂಗಳೂರು ನಗರದಲ್ಲಿ ನಡೆಯುತ್ತಿದೆ. ನನಗೆ ಬಿಡಿಎ ಯಿಂದ allot ಆಗಿದ್ದ ನನ್ನ ಪ್ಲಾಟ್‌ನಲ್ಲಿಯೇ ಬೇರೆಯವರು ಮನೆ ಕಟ್ಟಲಿಕ್ಕೆ ಬಂದಿದ್ದರು. ಈ ರೀತಿ ಎರಡು ಸಲ ಆಯಿತು. ಯಾರನ್ನಾದರೂ ತಂದು ಅಲ್ಲಿ ಕೂರಿಸುವುದು ಮಾಡುತ್ತಾರೆ. ನನ್ನ site ಅನ್ನು 35 ಲಕ್ಷ ರೂಪಾಯಿಗಳಿಗೆ ಬೇರೆಯವರಿಗೆ duplicate documents ಮಾಡಿ ಮಾರಿದ್ದರು. ಪ್ರತಿಷ್ಠಿತ ವ್ಯಕ್ತಿಗಳೆ, ಯಾವುದಾದರೂ ಒಂದು ಜಾಗದಲ್ಲಿ ಯಾರಿಗಾದರೂ allot ಆಗಿರುವ site ಅನ್ನು ತೋರಿಸುವುದು, ಮತ್ತೆ ಅವರು ಕೋರ್ಟ್–ಕಛೇರಿ ಅಲೆಯಬೇಕಾಗುತ್ತದೆ. ಅವರಿಗೆ ಪೊಲೀಸ್‌ನವರ ಮತ್ತು ಯಾವ ಅಧಿಕಾರಿಗಳದೂ

protection ಇಲ್ಲ. ಇದರಿಂದ ಸ್ವಲ್ಪ ಅವರಿಗೆ ಸಹಾಯವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇದರಿಂದ ಬಹಳ ಒಳ್ಳೆಯ ಕೆಲಸವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಇದರಲ್ಲಿ Foreign Direct Investment ಇದೆ ಎಂದು ಸುಳ್ಳು ಹೇಳಿ ಭೂಮಿ ಕಬಳಿಸುವವರನ್ನೇನಾದರೂ ಮಾಡಿ ಇದರಲ್ಲಿ ತರುವುದಕ್ಕಾಗುತ್ತದೆಯೇ ಎಂದು ಯೋಚನೆ ಮಾಡಿ. Foreign Direct Investment ಎಂದು ಇವರೇ ಕಂಪನಿಗಳನ್ನು float ಮಾಡಿಕೊಂಡು, ಇವರದೇ investment ಮಾಡಿ, school, ಮಂದಿರಗಳು, ಆಸ್ಪತ್ರೆಗಳು ಎಲ್ಲವನ್ನೂ demolish ಮಾಡಿ complex ಮಾಡಿದ್ದಾರೆ. ಹೇಗಾದರೂ ಮಾಡಿ, ಪ್ರಕಾಶ್‌ರವರೇ, ಅವರನ್ನು ಸೇರಿಸಿ. ಅದು ದೊಡ್ಡ ಕೆಲಸವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ನಿಮ್ಮ ಸರ್ಕಾರದಿಂದ allot ಮಾಡಿಸಿಕೊಂಡು Real Estate business ಮಾಡಿದ್ದಾರಲ್ಲ. ಅವರನ್ನು ಇದರಲ್ಲಿ ಸೇರಿಸಿಕೊಳ್ಳಿ. ಇದರಲ್ಲಿ ಅನೇಕ ಜನ ಇದ್ದಾರೆ. ಆಮೇಲೆ, ಈ Housing Societies ಬಗ್ಗೆ ಹೇಳುವುದಾದರೆ, ಇದರಲ್ಲಿ ಬಹಳಷ್ಟು ಜನ ಸಿಕ್ಕಿಹಾಕಿಕೊಂಡಿದ್ದಾರೆ. ಮೊನ್ನೆ ನಾನು ಇಲ್ಲಿ KPTCL Housing Society ವಿಷಯದ ಬಗ್ಗೆ ಮಾತನಾಡಿದೆ. ಬೇರೆ ಬೇರೆ ತರಹದ ಅನೇಕ ಸೊಸೈಟಿಗಳಿವೆ. ನಾನು ಹೆಸರು ಹೇಳಲಿಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ತನಿಖೆಯನ್ನು ಮಾಡಿಸಿ. ಅದರಲ್ಲಿ ಯಾರು ಹಣವನ್ನು ಹೊಡೆದಿದ್ದಾರೆ, ಜನರಿಗೆ ಮೋಸ ಮಾಡಿದ್ದಾರೆ ಅದರ ಬಗ್ಗೆ ತನಿಖೆ ಮಾಡಬೇಕು. KPTCL ನ ಚಂಪಕಧಾಮಸ್ವಾಮಿಯ ಹೆಸರು ಚೆನ್ನಾಗಿದೆ, TV9 ರವರು ಅದನ್ನು flash ಮಾಡಿದಾಗ TV9 ಆಫೀಸ್‌ಗೆ ಹೋಗಿ ಗಲಾಟೆ ಮಾಡಿದ್ದಾನೆ. ಚಂಪಕಧಾಮ ಸ್ವಾಮಿಯ ವಿಷಯವನ್ನು ಸ್ವಲ್ಪ serious ಆಗಿ ತೆಗೆದುಕೊಳ್ಳಬೇಕು. ಅದರಲ್ಲಿ KPTCL employees ಸಿಕ್ಕಿ ಹಾಕಿಕೊಂಡುಬಿಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಈ ಸ್ವಾಮಿ, ಅಲ್ಲೊಂದು ಸೊಸೈಟಿ ಮಾಡಿಬಿಟ್ಟಿದ್ದಾನೆ, which is not under KPTCL. ಈತ ಒಬ್ಬ employee, ಮಾಡಿಬಿಟ್ಟ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅದು Housing Society ಅಲ್ಲ, Employees Society ಅಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಪರಭಾರೆ ಮಾಡಬೇಕಾದರೆ ಅವರಿಗಿಷ್ಟ ಬಂದವರಿಗೆ ಮಾಡುತ್ತಿದ್ದಾರೆ, ಮೆಂಬರ್‌ಗೆ ಮಾಡುತ್ತಿಲ್ಲ. ಇವರೆಲ್ಲ ಎಂ.ಡಿ.ಯವರಾದ ಭರತಲಾಲ್ ಮೀನಾರವರ ಹತ್ತಿರ ಹೋಗಿ ಅರ್ಜಿ ಕೊಟ್ಟು, ನಮಗೆ ಕೊಡಬೇಕಾದ ಸೈಟು ಇದು, ಬೇರೆಯವರಿಗೆ ಕೊಡುತ್ತಿದ್ದಾರೆಂದು ಹೇಳಿದರು. ನಾವು ಇವನೊಬ್ಬ individual, society ಮಾಡಿಕೊಂಡುಬಿಟ್ಟಿದ್ದಾನೆಂದು ಅವರಿಗೆ ಹೇಳಿದೆವು. ಈತನ ಮೇಲೇನಾದರೂ ತಾವೊಂದು ತನಿಖೆ ಮಾಡಿಸಬೇಕು. ಅದಕ್ಕೆ ಅವರಿಗೆ ಹೇಳಿ ಎಂದೆವು. ಈತ KPTCL employees ನಿಂದ 10, 12, 15 ವರ್ಷಗಳಿಂದ ಹಣ ತೆಗೆದುಕೊಂಡು ಸೊಸೈಟಿ ಮಾಡಿ, ಜಮೀನು ಕೊಂಡು ಹೊರಗಡೆಯವರಿಗೆ, Multi National Company ಗೆ land ಕೊಟ್ಟಿದ್ದಾನೆ. ಆತನ ಮೇಲೆ enquiry ಆಗಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಚಂಪಕಧಾಮ ಸ್ವಾಮಿ ಮಾಡಿರುವ ಅವ್ಯವಹಾರದಲ್ಲಿ ಬೆಳಕಿಗೆ ಬಂದಿರುವ ಹಣ 1200 ಕೋಟಿ ರೂಪಾಯಿ. ನಮ್ಮ ಹತ್ತಿರ ದಾಖಲೆಗಳಿವೆ, ಬೇಕಾದರೆ ಕೊಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅವನು ಇದರ ವ್ಯಾಪ್ತಿಯಿಂದ ಹೊರಗೆ ಹೋಗುತ್ತಾನೆ. ಏಕೆಂದರೆ, ಅದು Housing Co-operative Society ಅಲ್ಲ. ಅದು Employees Society. ಅವನು Housing ಎಂದು ಹಾಕಿಲ್ಲ. ಅದನ್ನು ಜಾಗ್ರತೆ ಮಾಡಬೇಕಾಗಿದೆ. ಆಮೇಲೆ, ತಾವು ಮುಜರಾಯಿ ಬಿಲ್ ತಂದಿದ್ದೀರಿ. ಹಿಂದೆ Land Acquisition ಅನ್ನು KIADB, BDA ನವರು ಮಾಡಿ, de-notify ಮಾಡುವುದನ್ನು ನೋಡಿದ್ದೇವೆ. ದೇವಸ್ಥಾನಗಳನ್ನು de-notify ಮಾಡುವುದಕ್ಕೆ ಶುರು ಮಾಡುವುದು ಇತ್ತೀಚೆಗೆ ಗೊತ್ತಾಗಿದೆ. ಕಂದಾಯ ಸಚಿವರು ತಾವು ತರಿಸಿ ನೋಡಿ. ಅದರ ಬಗ್ಗೆ ನನ್ನ ಹತ್ತಿರ ಕಾಪಿ ಇದೆ. ಬೇಕಾದರೆ, ಅದನ್ನು ತಮಗೆ ಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) :- De-notify ಎಂದರೆ, ಧಾರ್ಮಿಕ ದತ್ತಿ ಇಲಾಖೆಯ ಕಾನೂನಿನ ವ್ಯಾಪ್ತಿಗೆ ಒಳಪಟ್ಟಿರುವಂತೆ ಕೆಲವು ಕಡೆ ಮಾಡಿದ್ದಾರೆ. ಅವರ ಅನುವಂಶಿಕವಾದಂಥ ಟ್ರಸ್ಟ್ ಮೊದಲಾದವು ಇದ್ದಾಗ ಈ ಮುಜರಾಯಿ ಕಾನೂನಿನ ವ್ಯಾಪ್ತಿಯ ಆಚೆ ಇರತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಹಾಗಾದರೆ, ಮುಜರಾಯಿಯವರು ಹೇಗೆ de-notify ಮಾಡಲು ಬರುತ್ತದೆ? ಅವರ ವ್ಯಾಪ್ತಿಯಿಂದ ಹೊರಗಿದ್ದರೆ, ಅವರು ಹೊರಗೇ ಇರುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಅಲ್ಲ, ಅವರು ಇದರಲ್ಲಿ notify ಆಗಿದ್ದಾರೆ. ಮುಜರಾಯಿ ಇಲಾಖೆಯಲ್ಲಿ ಈಗಾಗಲೇ ಅಧಿಸೂಚಿತವಾಗಿರುವ ದೇವಾಲಯಗಳು 30,000. ಅಧಿಸೂಚಿತ ದೇವಾಲಯಗಳು, ನಮ್ಮ ಖಾಸಗಿ ಟ್ರಸ್ಟ್‌ನಿಂದಾಗಿರುವವು, ನಮ್ಮ ತಂದೆ, ಪೂರ್ವಜರು ಕಟ್ಟಿದ್ದು ಇದನ್ನು ಈ ವ್ಯಾಪ್ತಿಯಿಂದ ಹೊರಗಡೆ ಇಡಿ ಇದು ಕೇಳಿಕೊಂಡಿದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಯಾವ್ಯಾವುದನ್ನು ಹೊರಗಿಟ್ಟಿದ್ದಾರೆ ಅದರ ಬಗ್ಗೆ ತನಿಖೆ ಮಾಡಿಸಿ.

ಶ್ರೀ ಎಂ.ಪಿ. ಪ್ರಕಾಶ್ :- ಆ ರೀತಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳ ಆಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಏಕೆಂದರೆ, ಆ ದೇವಸ್ಥಾನದ ಹತ್ತಿರ ಸುಮಾರು valuable property ಗಳಿವೆ, ಅದಕ್ಕೆ ಮಾಡಿಸಿಕೊಂಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ದೇವಸ್ಥಾನ private property or Public property ಯೇ ಎಂದು ಮೊದಲು ತೀರ್ಮಾನವಾಗಲಿ. ಏಕೆಂದರೆ, ದೇವಸ್ಥಾನಗಳ ಹೆಸರಿನಲ್ಲಿ ಈ ರಾಜ್ಯದಲ್ಲಿ ನಡೆಯುತ್ತಿರುವ ದಂಧೆ ಏನಿದೆ ಅದಕ್ಕೆ ಇತಿಮಿತಿಯಿಲ್ಲ. ಏಕೆಂದರೆ, ನಮ್ಮಲ್ಲಿ traditionally ದೇವರೆಂದರೆ ಭಯ. ಇದು ದೇವಸ್ಥಾನದ ಆಸ್ತಿ ಎಂದು ಹೇಳಿಬಿಟ್ಟರೆ ಅದರ ತಂಟೆಗೆ ಹೋಗುವುದಿಲ್ಲ. ಅಧಿಕಾರಿಗಳೂ ಹೋಗುವುದಿಲ್ಲ, ರಾಜಕಾರಣಿಗಳೂ ಹೋಗುವುದಿಲ್ಲ. ದೇವರಿಗೆ ಸಿಟ್ಟು ಬರುತ್ತದೆಂದು ಎಲ್ಲಿಯೂ ಹೋಗುವುದಿಲ್ಲ. ಅದರ ಹೆಸರಿನಲ್ಲಿ ನಡೆಯುವ ದಂಧೆ ಅದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಟ್ರಸ್ಟ್‌ನಲ್ಲಿರುವ ದೇವಸ್ಥಾನಗಳ ಬಗ್ಗೆ ಕೇಳಿದ್ದೇವೆ. ವಂಶಪಾರಂಪರ್ಯ ದೇವಸ್ಥಾನಗಳು ಈಗ ಸೃಷ್ಟಿಯಾಗಿಬಿಟ್ಟಿವೆಯಲ್ಲ. ಹಾಗಿದ್ದಮೇಲೆ, ಅವರು ಅಲ್ಲಿ ದಕ್ಷಿಣೆ ತೆಗೆದುಕೊಳ್ಳಕೂಡದು. ಹಾಗಿದ್ದಮೇಲೆ, ಅವರು ಅಲ್ಲಿ ಯಾವುದೇ ಭಾಗದಿಂದ ಹಣ collect ಮಾಡಕೂಡದು. ಆ ಬಗ್ಗೆ ಒಂದು ಕಾನೂನು

ಜಾರಿಗೆ ತನ್ನಿ. ಅದನ್ನು ನಡೆಸಿಕೊಂಡು ಹೋಗಲಿ, ಸಂತೋಷ. ಭಕ್ತಿಯಿಂದ ಅವರು ಏನೂ ತೆಗೆದುಕೊಳ್ಳಕೂಡದು.

ಶ್ರೀ ಎಂ.ಪಿ. ಪ್ರಕಾಶ್ :– ತಮಗೆ ಗೊತ್ತಿರುವ ಹಾಗೆ, ಈಗಿರುವ ಕಾನೂನನ್ನು ಶ್ರೇಷ್ಠ ನ್ಯಾಯಾಲಯದವರು ಅಸಿಂಧು ಎಂದು ಹೊಡೆದು ಹಾಕಿದ್ದಾರೆ. ಹೊಸ ಕಾನೂನು ರಚನೆ ಮಾಡುವ ಕೆಲಸ ನಡೆದಿದೆ. ಅಂಥ ಸಮಯದಲ್ಲಿ ತಮ್ಮ ಸಲಹೆಯೂ ಮುಖ್ಯವಾಗುತ್ತದೆ. ಅದನ್ನು ಸೇರಿಸಿಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– High Court decision stay ಆಗಿದೆ. Your order is prevailing.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– Supreme Court ನಲ್ಲಿ stay ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಅದಕ್ಕೆ ನಮ್ಮ ಕಾಲದಲ್ಲಿಯೇ ಸುಮಾರು 64, 65 ತಿದ್ದುಪಡಿಗಳನ್ನು ತಂದಿದ್ದೆವು. ಈಗಲೂ ಕೂಡ ಅದಕ್ಕಾಗಿ ರಾಮಾಜೋಯಿಸ್‌ರವರ ಅಧ್ಯಕ್ಷತೆಯಲ್ಲಿ ಪರಿಣಿತರ ಒಂದು ಸಮಿತಿ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಸರ್ಕಾರಿ ದೇವರುಗಳೆಷ್ಟು? ಖಾಸಗಿ ದೇವರುಗಳೆಷ್ಟು? ಹೇಳಿ. ಸರ್ಕಾರಿ ದೇವರುಗಳೆಂದರೆ ನಿಮ್ಮ ಮುಜರಾಯಿ ಇಲಾಖೆಗೆ ಸೇರಿದವುಗಳು. ಸರ್ಕಾರಿ ದೇವರಲ್ಲದ ದೇವರುಗಳೆಷ್ಟಿವೆ?

ಶ್ರೀ ಎಂ.ಪಿ. ಪ್ರಕಾಶ್ :– ಸುಮಾರು 30,600 ಸರ್ಕಾರಿ ದೇವಾಲಯಗಳಿವೆ. ನಿಮ್ಮಂಥವರು, ನಮ್ಮಂಥವರು ಇಟ್ಟುಕೊಂಡಿರುವ ದೇವರುಗಳು ಈ ಲೆಕ್ಕದಲ್ಲಿ ಬಂದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ರಾಮಾಜೋಯಿಸ್‌ರವರ ಬಗ್ಗೆ ನಮಗೆ ಬಹಳ ಗೌರವವಿದೆ.

ಶ್ರೀ ವಾಟಾಳ್ ನಾಗರಾಜ್ :– ನಾನು ಯಾವ ದೇವರನ್ನೂ ಇಟ್ಟುಕೊಂಡಿಲ್ಲ. ನಮಗೆ ಸ್ಪಷ್ಟ ಚಿತ್ರಬೇಕು. ಖಾಸಗಿ ದೇವರುಗಳು ಎಷ್ಟು? ಟ್ರಸ್ಟ್ ದೇವರುಗಳು ಎಷ್ಟು? ಮಠದ ದೇವರುಗಳು ಎಷ್ಟು? ವಂಶಪಾರಂಪರ್ಯವಾಗಿ ನಡೆಯತಕ್ಕಂಥ ದೇವರುಗಳೆಷ್ಟು? ಆಮೇಲೆ ಯಾವ್ಯಾವ ಜಾತಿಯ ದೇವರುಗಳು ಎಷ್ಟು? ಸಸ್ಯಹಾರಿ ದೇವರುಗಳು ಎಷ್ಟು?

ಅಧ್ಯಕ್ಷರು :- ಮಾಹಿತಿ ಕೊಡುತ್ತಾರೆ ಬಿಡಿ. ಒಳ್ಳೆಯ ದೇವರ ವಿಚಾರ ಹಿಡಿದುಕೊಂಡುಬಿಟ್ಟರಲ್ಲಾ?

(ಗೊಂದಲ)

ಶ್ರೀ ವಿ. ಸೋಮಣ್ಣ :- ನೀವೇನು ನಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆ? ಬಿಲ್ ಮೇಲೆ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದರೆ ಹೇಗೆ? ನಾವು ಏನು ಮಾಡಬೇಕು? ಬಿಲ್ ಮೇಲೂ ಮಾತನಾಡುವ ಹಾಗಿಲ್ಲ, ಬೇರೆ ವಿಷಯದ ಮೇಲೂ ಮಾತನಾಡುವ ಹಾಗಿಲ್ಲ, ಇದೇನು? ಬಿಲ್ ಮೇಲೆ ನಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ, ಬೇರೆಯವರಿಗೆ ಅವಕಾಶ ಕೊಡುತ್ತೀರಿ, ನಾವೇನು ಮಾಡಬೇಕು, ನಾವು ಸುಮ್ಮನೆ ಕೇಳಬೇಕೆ?

(ಗೊಂದಲ)

ಅಧ್ಯಕ್ಷರು :- ಆಯಿತು ನೀವು ಮಾತನಾಡಿ.

ಶ್ರೀ ವಿ. ಸೋಮಣ್ಣ :- ದಯಮಾಡಿ ನಾವು ಅಧ್ಯಕ್ಷರನ್ನು ಕೇಳುತ್ತಿದ್ದೇವೆ ನಿಮಗಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾವು ಮಾತನಾಡುತ್ತೇವೆ. ನಮಗೇನು ಅಧಿಕಾರ ಇದೆ ಅದರಂತೆ ನಾವು ಮಾತನಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ ದಯಮಾಡಿ ತಾವು ಒಂದು ಕೆಲಸ ಮಾಡಿ. ಬಿಲ್ ಮೇಲೆ ಇಲ್ಲಿದ್ದವರು ಮಾತನಾಡುವ ಹಾಗಿಲ್ಲ ಬೇರೆಯದರ ಮೇಲೂ ಮಾತನಾಡುವ ಹಾಗೆ ಇಲ್ಲವೆಂದರೆ ಏನು ಸ್ವಾಮಿ ಅರ್ಥ? ತಾವೇ ಹೇಳಿ.

ಅಧ್ಯಕ್ಷರು :- ಆಯಿತು ಬಿಡಿ, ಹೆಗ್ಡೆಯವರೆ ಬೇಗ ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಈಗ ಬೆಳಿಗ್ಗೆ ಒಂದು ಬಿಲ್ ಪಾಸ್ ಮಾಡಿದ್ದೇವಲ್ಲ, ಇದನ್ನು ಪಾಸ್ ಮಾಡಿದರೆ ಅದು redundant ಆಗುತ್ತದೆಂದು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ, all most, ಎರಡೂ ಒಂದೇ ಆಗುತ್ತದೆ.

ಅದು redundant ಆಗುವ ಸಾಧ್ಯತೆಗಳಿವೆ. ಅದನ್ನು ಸ್ವಲ್ಪ ನೀವು ಆಲೋಚಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :– ರೀ ಅಲ್ಲಿ ಕುಳಿತುಕೊಂಡು ಮಾತನಾಡಬೇಡಿ. ನಾಗರಾಜ್‌ರವರೇ ಕುಳಿತುಕೊಂಡು ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಈ ಉಚ್ಛ ನ್ಯಾಯಾಲಯದ ನ್ಯಾಯಾಧೀಶರು ವಿಶೇಷ ನ್ಯಾಯಾಲಯದ ಅಧ್ಯಕ್ಷರು. ಅದಾದ ನಂತರ ತಾವು ಕೇಳಿದ ಹಾಗೆ ಟ್ರಿಬ್ಯುನಲ್‌ಗೆ ಹೋಗುವುದಕ್ಕೆ ಆಗುವುದಿಲ್ಲ. ಉಚ್ಛನ್ಯಾಯಾಲಯದ ನ್ಯಾಯಾಧೀಶರ ಜೊತೆಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಇದು ಜಾಸ್ತಿಯಾಗಲಿಲ್ಲವೆ? ಈ ಪೀಠ ಹೈ–ಕೋರ್ಟ್‌ಗಿಂತ ಮೇಲೆ ಹೋದ ಹಾಗೆ ಆಯಿತು. ಅದನ್ನು ಸ್ವಲ್ಪ ಸರಿಪಡಿಸುವಂಥ ವ್ಯವಸ್ಥೆಯಾಗಬೇಕಾಗುತ್ತದೆ. ಇದರಿಂದ Article 226 ಪ್ರಕಾರ ನೇರವಾಗಿ High Court ಗೆ ಹೋಗಬೇಕಾಗುತ್ತದೆ, ಅದು ಬಿಟ್ಟರೆ ಬೇರೆ ಯಾವುದಕ್ಕೆ ಹೋಗುವುದಕ್ಕೆ ಆಗುವುದಿಲ್ಲ. Appeal provision ಆಗುವುದಿಲ್ಲ. ಇದರ ಮೇಲೆ ಎಲ್ಲಿಗೆ appeal ಹೋಗುತ್ತೀರಿ? Appeal ಆದರೆ ಯಾವುದಕ್ಕೆ ಹಾಕುತ್ತೀರಿ? ಇದು MFA ಹಾಕಬೇಕಾಗುತ್ತದೆ, not under Article 226. Article 226 ಆದರೆ Appeal ಆಗುವುದಿಲ್ಲ. Write ಆಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :– Article 226 ರ ಕೆಳಗೆ ತರುವುದಕ್ಕೆ ಪ್ರಯತ್ನಿಸುತ್ತಾರೆ. Appeal lies only to the High Court and the Supreme Court.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅದು ಆದರೆ better Article 226 ನಲ್ಲಿ ತರುವುದು ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್ :– ಅದು Constitutional provision. ಅದು ನಿಮಗೂ ಕೂಡ ಗೊತ್ತಿದೆ. You have practiced in the High Court also. ಅದನ್ನು ಯಾವ ರೀತಿ ತರುತ್ತಾರೆಂಬುದು ಅವರ ಜಾಣತನದ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಇಷ್ಟು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದು ಅಗತ್ಯವಿದೆ. ಗ್ರಾಮೀಣ ಭಾಗದ ಸಮಸ್ಯೆಗಳ ಬಗ್ಗೆ ನಮಗೆ ತಲೆಬಿಸಿ ಇದೆ. ಇಲ್ಲಿ ಸಮಸ್ಯೆ ಜಾಸ್ತಿ ಉದ್ಭವ ಆಗುತ್ತದೆ. ಎಷ್ಟೋ ವರ್ಷಗಳಿಂದ ಸ್ವಾಧೀನದಲ್ಲಿರುತ್ತದೆ. ಇನ್ನೊಂದು ಕೇಸ್‌ನಲ್ಲಿ ಸರ್ಕಾರವೇ ಕೆಲವರಿಗೆ ಲೀಸ್‌ನಲ್ಲಿ ಕೊಟ್ಟಿರುತ್ತದೆ. ಇಲ್ಲಿ renew ಮಾಡಿರುವುದಿಲ್ಲ, renewal ಗೆ application pending ಇರುತ್ತದೆ. ಆ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ಅವರು ಅಧಿಕಾರವನ್ನು ಉಪಯೋಗಿಸಲಿಕ್ಕೆ ಹೋಗುತ್ತಾರೆ. ಅಧಿಕಾರ ಉಪಯೋಗಿಸಿ ಅವರನ್ನು dispossess ಮಾಡುವಂಥಾದ್ದು ಬರುತ್ತದೆ. ಆ ರೀತಿ ಇದರಲ್ಲಿ ಆಗಬಾರದು ಎನ್ನುವಂಥಾದ್ದು ತಮ್ಮ ಮುಖೇನ ಸರ್ಕಾರಕ್ಕೆ ತಿಳಿಸಲಿಕ್ಕೆ ಇಚ್ಛಿಸುತ್ತಾ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) :- ಮಾನ್ಯ ಅಧ್ಯಕ್ಷರೆ, ಇವತ್ತೇನು ಕಾಯಿದೆ ತಂದಿದ್ದಾರೆ ಇದಕ್ಕೆ 2-3 ಅಂಶಗಳನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ "ಭೂ ಕಬಳಿಕೆ" ಎಂದರೆ, ಯಾವುದೇ ಕಾನೂನುಬದ್ಧ ಹಕ್ಕುದಾರಿಕೆಯಿಲ್ಲದೇ ಮತ್ತು ಭೂಮಿಯನ್ನು ಕಾನೂನುಬಾಹಿರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಯಾವುದೇ ಭೂಮಿಯನ್ನು ಕಬಳಿಸುವ ಅಥವಾ ಕಾನೂನುಬಾಹಿರ ಗೇಣೀ ಅಥವಾ ಗುತ್ತಿಗೆ ಮತ್ತು ಲೈಸೆನ್ಸ್ ಒಪ್ಪಂದಗಳನ್ನು ಮಾಡಿಕೊಳ್ಳುವ ಅಥವಾ ಅವುಗಳನ್ನು ಸೃಷ್ಟಿಮಾಡುವ, ಅಥವಾ ಮಾರಾಟ ಮಾಡುವ ಅಥವಾ ಬಾಡಿಗೆ ಕೊಡಲು ಭೂಮಿಯ ಮೇಲೆ ಅಕ್ರಮ ನಿರ್ಮಿತಿಗಳನ್ನು ಕಟ್ಟುವ ಅಥವಾ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಮತ್ತು ಅಧಿಭೋಗಿಸುವುದಕ್ಕಾಗಿ ಬಾಡಿಗೆ ಮೇಲೆ ಅಥವಾ ಗುತ್ತಿಗೆ ಮೇಲೆ ಮತ್ತು ಲೈಸೆನ್ಸ್ ಆಧಾರದ ಮೇಲೆ ಎಂದು ತಾವೇನು ಹೇಳಿದಿರಿ,

ಇದರಲ್ಲಿ ನಮ್ಮ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹೇಗೆ, ಬೆಂಗಳೂರು ನಗರದಲ್ಲಿ developers ದು ಒಂದು ದೊಡ್ಡ ದಂಧೆ ಇದೆ. ಇದರಲ್ಲಿ ಇವರು ಏನು ಮಾಡುತ್ತಾರೆಂದರೆ, 2 ಎಕರೆ 3 ಎಕರೆ ಜಾಗ ತೆಗೆದುಕೊಳ್ಳುತ್ತಾರೆ, ಜಾಗ ತೆಗೆದುಕೊಂಡು ಬಿಡಿಎಗೆ ಹೋಗುತ್ತಾರೆ, ಹೋಗಿ change of land use ಮಾಡುತ್ತಾರೆ, ಇದಾದ ಮೇಲೆ ಪಕ್ಕದಲ್ಲಿರತಕ್ಕಂಥ ಸರ್ಕಾರಿ ಜಾಗವನ್ನು ಏನು ಮಾಡುತ್ತಾರೆ ಅಂದರೆ ಈ ಎರಡು ಎಕರೆಯಲ್ಲಿ ಬಿಲ್ಡಿಂಗ್‌ಗಳನ್ನು ಕಟ್ಟುತ್ತಾರೆ. ಪಕ್ಕದಲ್ಲಿರತಕ್ಕಂಥ ಸರ್ಕಾರಿ ಜಾಗವನ್ನು ತೋರಿಸಿ FAR ಮಾಡಿಕೊಳ್ಳುತ್ತಾರೆ, FAR

ಮಾಡಿಕೊಂಡು ಬೇಕಾಗಿರತಕ್ಕಂಥ ಸವಲತ್ತುಗಳನ್ನು ಇಂಥ Land developers ಬೆಂಗಳೂರು ನಗರದಲ್ಲಿ ನೂರಾರು ಕಡೆ ಇವತ್ತು ತಾವೇ ಸ್ವತಃ ಕಬಳಿಸಿರತಕ್ಕಂಥ ನಿದರ್ಶನಗಳನ್ನು ಇದರೊಳಗೆ ಸೇರಿಸುವುದಕ್ಕೆ ಸಾಧ್ಯವಿದೆಯೇ? ಕಬಳಿಸಿರತಕ್ಕಂಥ ವ್ಯಕ್ತಿಗಳು ಯಾರು ಇದ್ದಾರೆ ಅಂಥವರನ್ನು ಕೂಡ ಈ ಒಂದು ಕಾನೂನಿನಡಿಯಲ್ಲಿ ಸೇರಿಸುವುದಕ್ಕೆ ಸಾಧ್ಯವಿದೆಯೇ ಮುಜರಾಯಿ ಇಲಾಖೆ ಸರ್ಕಾರಿ ಇಲಾಖೆಯ. ಹಿರಿಯ ಸಚಿವರಾದ ಸನ್ಮಾನ್ಯ ಪ್ರಕಾಶ್‌ರವರು ಹೇಳಿದರು.

ಬೆಂಗಳೂರು ನಗರದಲ್ಲಿ ಪಂಪಮಹಾಕವಿ ರಸ್ತೆಯಲ್ಲಿ ರಾಯ ರಾಯ ಚಾರಿಟಬಲ್ ಟ್ರಸ್ಟ್ ಇದೆ. ಅದು ಮುಜರಾಯಿ ಇಲಾಖೆಯದು. ಯಾರು ಮುಜರಾಯಿ ಇಲಾಖೆಯಲ್ಲಿದ್ದಂತಹ ಜನ ಆ ಭಾಗವನ್ನು 50-60 ವರ್ಷಕ್ಕೆ ಲೀಸ್ ಕೊಟ್ಟು ಒಂದು ವರ್ಷಕ್ಕೆ, ತಿಂಗಳಿಗೆ 50 ಸಾವಿರ, 25 ಸಾವಿರ ರೂಪಾಯಿಗೆ ಬಾಡಿಗೆ ಕೊಟ್ಟು ಅಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಕೇವಲ ಪಗಡೆಯಲ್ಲಿ ತೆಗೆದುಕೊಂಡು ಕಟ್ಟಡ ಕಟ್ಟಿ ಇವತ್ತು ಲಕ್ಷಾಂತರ ರೂಪಾಯಿ ಹಣವನ್ನು ಬಾಡಿಗೆ ರೂಪದಲ್ಲಿ ಪಡೆಯುತ್ತಿದ್ದಾರೆ. ಇದನ್ನು ಏನಾದರೂ ಮಾಡಿ ತಾವು ಈ ಒಂದು ನಿಯಮದಲ್ಲಿ ತರುವುದಕ್ಕೆ ಅವಕಾಶವಿದೆಯೇ? ಇದನ್ನು ತರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ. ಈ ರೀತಿಯ ಒಂದು ದಂಧೆ ಮುಜರಾಯಿ ಇಲಾಖೆಯಲ್ಲಿ ಸಾಕಷ್ಟು ನಡೆಯುತ್ತಿದೆ. ಉಳಿದಿರತಕ್ಕಂಥ ಮುಜರಾಯಿ ಇಲಾಖೆಯ ಜಾಗವನ್ನು ಬೇರೆ ಬೇರೆ ಪಟ್ಟಭದ್ರ ಹಿತಾಸಕ್ತಿಗಳು ಅಕ್ರಮಣ ಮಾಡಿಕೊಂಡಿದ್ದಾರೆ. ಅದನ್ನು ತೆರವುಗೊಳಿಸಿ ಸರ್ಕಾರ ಬೇರೆ ಬೇರೆ ರೂಪಕ್ಕೆ ಅದನ್ನು ಉಪಯೋಗಿಸಿಕೊಳ್ಳಲು ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೆ ಎಂಬ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ.

ಬೆಂಗಳೂರು ನಗರದಲ್ಲಿ ಬಿಎಂಆರ್‌ಡಿಎ, ಬಿಡಿಎ, ಮೂಡಾ, ಬೇರೆ ಬೇರೆ ನಕ್ಷೆಗಳನ್ನು ಮಂಜೂರು ಮಾಡಿಸಿಕೊಳ್ಳುತ್ತಾರೆ. ನಕ್ಷೆಗಳನ್ನು ಮಂಜೂರಾತಿ ಮಾಡಿಸಿಕೊಂಡಂಥ ಸೊಸೈಟಿಯವರು ಏನು ಮಾಡುತ್ತಾರೆ, ಯಾವುದೇ ಒಂದು ಲೇಔಟ್ ಮಾಡಬೇಕಾದರೆ, 40% ರಸ್ತೆ ಮತ್ತೊಂದಕ್ಕೆ civic amenities ಗೆ ಬಿಡಬೇಕಾಗುತ್ತದೆ. ಅದನ್ನು ಮಾಡುವಾಗ ಹಾಗೆ ತೋರಿಸುತ್ತಾರೆ. ಎಲ್ಲಾ ಆದ ಮೇಲೆ ಮತ್ತೇನು ಮಾಡುತ್ತಾರೆ, ಸಂಬಂಧಪಟ್ಟ ದಾಖಲಾತಿಗಳನ್ನು ಸೃಷ್ಟಿಸಿ, ಮೂಡಾಗೆ ಹೋಗಿ, ಮೂಡಾದವರು ಮೂಡಾಗೆ ಅಪ್ಲೈ ಮಾಡಿಕೊಳ್ಳುತ್ತಾರೆ, ಬಿಎಂಆರ್‌ಡಿಎ ರವರು ಬಿಎಂಆರ್‌ಡಿಎ ಗೆ ಅಪ್ಲೈ ಮಾಡಿಕೊಳ್ಳುತ್ತಾರೆ, ಬಿಡಿಎದವರು ಬಿಡಿಎ ಗೆ

ಅಪ್ಲೈ ಮಾಡಿಕೊಳ್ಳುತ್ತಾರೆ. ಈ ಸಿಎ ಲ್ಯಾಂಡ್‌ಗಳನ್ನು ಏನು ಬಿಟ್ಟಿರುತ್ತಾರೆ ಅದನ್ನು ಕೂಡ ಮಾಡಿಫೈ ಮಾಡಿಬಿಟ್ಟು ಅದನ್ನು ಕೂಡ ಕಬಳಿಸತಕ್ಕಂಥ ಉದಾಹರಣೆಗಳು ಇವತ್ತು ಇರುವುದರಿಂದ ಇಂಥವುಗಳನ್ನು ಈ ಒಂದು ವ್ಯಾಪ್ತಿಗೆ ತರುವುದಕ್ಕೆ ಇದರಲ್ಲಿ ಸೇರಿಸಿದ್ದಾರೆಯೇ?

ರುದ್ರಭೂಮಿಗಳು ಬೆಂಗಳೂರು ನಗರದಲ್ಲಿ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ಬೇರೆ ಬೇರೆ ರುದ್ರಭೂಮಿಗಳು ಏನಾಗಿದೆ ಗೊತ್ತಿಲ್ಲ. ಆದರೆ, ಬೆಂಗಳೂರಿನಲ್ಲಿರತಕ್ಕಂಥ ರುದ್ರಭೂಮಿಗಳೆಲ್ಲವೂ ಕೂಡ ಮನೆಗಳಾಗಿವೆ. ಕೆರೆಕಟ್ಟೆಗಳೆಲ್ಲವೂ ಕೂಡ ಮನೆಗಳಾಗಿವೆ. ನಮ್ಮಲ್ಲಿ ಬಾಳಯ್ಯನ ಕೆರೆ ಎಂದು ಒಂದು ಕೆರೆ ಇದೆ. ಅದು 13 ಎಕರೆ 8 ಗುಂಟೆ ಜಾಗದಲ್ಲಿತ್ತು. ಇದಕ್ಕೆ ನಾವೇನು ಬೇಲಿ ಹಾಕಿಸಿ ಕಾಪಾಡಿಕ್ಕೆ ಈಗ ಸುಮಾರು 4–5 ಎಕರೆ ಜಾಗ ಉಳಿದಿದೆ. ಬಾಕಿ ಜಾಗದಲ್ಲಿ ರಾಜರೋಷವಾಗಿ ನಡೆಯುತ್ತಿದೆ. ನಾನು Revenue Commissioner ರನ್ನು ಕರೆದುಕೊಂಡು ಹೋಗಿದ್ದೆ, Deputy Commissioner ಗಳನ್ನು ಕರೆದುಕೊಂಡು ಹೋಗಿದ್ದೆ, ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಹೋಗಿದ್ದೆ. ಅವರೆಲ್ಲರೂ ಕೂಡ ಅದರಲ್ಲಿ ಮನೆ ಕಟ್ಟಿಕೊಂಡರು, ಖಾತೆ ಕಂದಾಯಗಳಾಗಿದೆ. ಅದಕ್ಕೆ ಏನಾದರೂ ಒಂದು ದಾರಿ ಮಾಡಬಹುದೆ?

ನನ್ನ ಕ್ಷೇತ್ರದಲ್ಲಿ ಹಲಗೆವಡೇರಳ್ಳಿ ಎನ್ನುವಲ್ಲಿ 20 ಎಕರೆ ಸರ್ಕಾರಿ ಜಾಗ, ಪ್ರಶ್ನೆ ಕೇಳಿದೆ, 4–5 ಸಾರಿ ಪ್ರಸ್ತಾಪಿಸಿದೆ, ಏನೆಲ್ಲಾ ಮಾಡಿದರೂ ಕೂಡ ಇವತ್ತು ಒಂದು ಇಂಚು ಅವರನ್ನು ಮಾತನಾಡಿಸುವುದಕ್ಕೆ ಆಗಲಿಲ್ಲ. ಈ ರೀತಿಯಲ್ಲಿ ಸರ್ಕಾರಿ ಜಮೀನುಗಳನ್ನು ಬೇನಾಮಿ ದಾಖಲೆಗಳನ್ನು ಸೃಷ್ಟಿ ಮಾಡಿ ತೆಗೆದುಕೊಂಡು, ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಲಪಟಾಯಿಸಿರುವುದನ್ನು ಇದರೊಳಗೆ ಅಳವಡಿಸಿರುವುದಕ್ಕೆ ಸಾಧ್ಯವಿದೆಯೆ? ಇಂಥ ಪ್ರಕರಣಗಳನ್ನು ಗುರುತಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದೆ? ಆದರೆ ಜೊತೆಯಲ್ಲಿ Housing Board ನವರು ಮನೆಗಳನ್ನು ಕಟ್ಟುತ್ತಾರೆ, ಲೇಔಟ್‌ಗಳನ್ನು ಮಾಡುತ್ತಾರೆ, ಲೇಔಟ್‌ಗಳನ್ನು ಮಾಡಿದ ಮೇಲೆ ಸಿಎ ಲ್ಯಾಂಡ್‌ಅನ್ನು ಪ್ರಾಯಶಃ ನನಗೆ ಅನ್ನಿಸುತ್ತದೆ Housing Board ಕೂಡ ಕರ್ನಾಟಕ ಸರ್ಕಾರದ ಒಂದು ಅಧೀನದಲ್ಲಿರತಕ್ಕಂಥ ಸಂಸ್ಥೆ. ಯಾವುದೇ ಸಿಎ ಲ್ಯಾಂಡ್‌ಗಳು ಅಲ್ಲಿ ಉಳಿದಿಲ್ಲ. ಇದನ್ನು ಯಾರು ತೆಗೆದುಕೊಂಡರು? ಏನು ಮಾಡಿದರು? ಯಾವ ರೀತಿಯಾಗಿ ಈ ಅಧಿಕಾರಿಗಳು ಸೃಷ್ಟಿ ಮಾಡಿದರು? ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ

ಸ್ಲಂ ನಲ್ಲಿರತಕ್ಕಂಥ ಮನೆಗಳು ಏನು ಇವೆ, ನಾನು ಸನ್ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ, ಬೆಂಗಳೂರು ನಗರದಲ್ಲಿ 400 ಕೊಳಚೆ ಪ್ರದೇಶಗಳಿವೆ. ಈ ಕೊಳಚೆ ಪ್ರದೇಶದಲ್ಲಿ ಕೆಲವು ಕೊಳಚೆ ಪ್ರದೇಶಗಳು ಸರ್ಕಾರದ ವ್ಯಾಪ್ತಿಯ ಜಾಗದಲ್ಲಿವೆ, ಮತ್ತೆ ಕೆಲವು ಪ್ರದೇಶಗಳು ಬೇರೆ ಬೇರೆ ಖಾಸಗಿ ವ್ಯಕ್ತಿಗಳಲ್ಲಿ ಇದೆ. 30 ರಿಂದ 60 ವರ್ಷಗಳಿಂದ ಇರತಕ್ಕಂಥವು ಇವೆ. ಅದರ owner ಯಾರು ಎಂದು ಯಾರಿಗೂ ಗೊತ್ತಿಲ್ಲ. ಯಾರ್ಯಾರಿಗೂ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ ನಾಲ್ಕು ಕೊಳಚೆ ಪ್ರದೇಶಗಳನ್ನು, ನಾನು ಕೂಡ ಸತತವಾಗಿ 13 ರಿಂದ 14 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇನೆ, ಅವರು ಯಾರೆಂದು ಯಾರಿಗೂ ಗೊತ್ತಿಲ್ಲ. ಆದರೆ, ಅಧಿಕಾರಿಗಳು ಯಾರು ಆ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥ ಬಡವರು ಇದ್ದಾರೆ, ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ, ಅದನ್ನು ಸಕ್ರಮಗೊಳಿಸಿ ಅವರಿಗೆ ಏನು ಸರ್ಕಾರಕ್ಕೆ ಬರಬೇಕಾದಂಥ ಹಣವನ್ನು ತೆಗೆದುಕೊಳ್ಳಿ ಎಂದರೆ, ಅದನ್ನು ಮಾಡುತ್ತಿಲ್ಲ.

ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಮಾಡಿ ಕೊಳ್ಳುವುದೇನೆಂದರೆ, ಕೊಳಚೆ ಪ್ರದೇಶಗಳಲ್ಲಿರತಕ್ಕಂಥವರಿಗೆ ಈ ಕಾನೂನಿನಿಂದ ಅಡೆತಡೆಯಾಗಿ, ಅವರ ಮನೆಗಳನ್ನು ಒಕ್ಕಲೆಬ್ಬಿಸುವ ಕೆಲಸಕ್ಕೆ ಅವಕಾಶ ಇದರಲ್ಲಿ ಇದೆಯೇ? ಈ ರೀತಿ ಇದ್ದರೆ ದಯಮಾಡಿ ಮಾಡಬೇಡಿ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇದರಲ್ಲಿ ಇನ್ನೊಂದು ಗಹನವಾದ ವಿಚಾರ ಇದೆ. ಅದೇನೆಂದರೆ, ವಿಶೇಷವಾಗಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಸೂಕ್ಷ್ಮವಾಗಿ ಹೇಳಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಲೀಸ್ ಆಫ್ ಲ್ಯಾಂಡ್ ಎಂದು ಇದೆ. ಇಲ್ಲಿ ಲೀಸ್ ತೆಗೆದುಕೊಳ್ಳುವುದು ಒಂದು ಉದ್ದೇಶಕ್ಕಾದರೆ, ಆನಂತರ ಅದನ್ನು ಉಪಯೋಗ ಮಾಡತಕ್ಕಂಥಾದ್ದು ಇನ್ನೊಂದು ಉದ್ದೇಶಕ್ಕೆ. ಟೌನ್ ಹಾಲ್ ಮತ್ತು ಮಹಾನಗರ ಪಾಲಿಕೆ ಕಛೇರಿ ನಡುವೆ ಇರತಕ್ಕಂಥ ಜಾಗವನ್ನು ಶಾಲೆಗೋಸ್ಕರ 100 ವರ್ಷಕ್ಕೆ ಲೀಸ್‌ಗೆ ತೆಗೆದುಕೊಂಡು ಈಗ ಏನು ಮಾಡಿದ್ದಾರೆ ಎನ್ನುವುದು ತಮಗೆ ಗೊತ್ತಿದೆ. ಈ ಜಾಗದಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್, ಯೂನಿಟಿ ಬಿಲ್ಡಿಂಗ್ ಈ ರೀತಿಯಾಗಿ ಬೆಂಗಳೂರು ನಗರ ಒಂದರಲ್ಲಿಯೇ ಸುಮಾರು ನೂರಾರು ಇವೆ. ಆದ್ದರಿಂದ, ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಇದಕ್ಕೆ ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಅಥವಾ ಇನ್ಯಾರೋ ಜಡ್ಜ್ ಹಾಕಿ ತೀರ್ಮಾನ ಮಾಡುತ್ತೇನೆಂದರೆ ಇನ್ನು 50 ವರ್ಷಗಳಾದರೂ ಆಗುವುದಿಲ್ಲ. ಅಲ್ಲಿಯವರೆಗೆ ತಾವು ಇರುವುದಿಲ್ಲ

ಮತ್ತೆ ನಾನಂತೂ ಇರುವುದಿಲ್ಲವೆಂದು ನನಗೆ ಗ್ಯಾರಂಟಿ ಇದೆ. ಆದರೆ, ಸತ್ಯ ಏನೆಂದರೆ, ಈ ಕಾನೂನನ್ನು ತಂದ ಮೇಲೆ ಇದನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದಕ್ಕೆ ಮೊದಲ ಆದ್ಯತೆಯನ್ನು ಬೆಂಗಳೂರಿನ ದೊಡ್ಡ ನಗರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಜಾಗಗಳು ಮತ್ತು ಬಿಡಿಎರವರು ಕೊಟ್ಟಿರುವ ಜಾಗಗಳು ಹಾಗೆಯೇ ಬಿಎಂಆರ್‌ಡಿಎ ರವರು ಕೊಟ್ಟಿರುವ ಜಾಗ ಮತ್ತು ಮುಜರಾಯಿಯವರು ಕೊಟ್ಟಿರುವ ಜಾಗಗಳನ್ನು ಮೊದಲು ಗುರುತಿಸಿ. ಈಗಾಗಲೇ ಎಲ್ಲಾ ನಮಾಹಿತಿ ಇದೆ. ಮನಸ್ಸು ಮಾಡಿದರೆ ಇದರ ಲಿಸ್ಟ್ ಅನ್ನು ಒಂದು ಗಂಟೆಯಲ್ಲಿ ತಾವು ತರಿಸಬಹುದು. ಇವತ್ತು ಏನಾಗಿದೆಯೆಂದರೆ, ಪೆಟ್ರೋಲ್ ಬಂಕ್‌ಗೆಂದು ಜಾಗವನ್ನು ಲೀಸ್‌ಗೆ ತೆಗೆದುಕೊಂಡಿರುತ್ತಾರೆ. ಆದರೆ, ಅಲ್ಲಿ ಪೆಟ್ರೋಲ್ ಬಂಕ್ ಇರುವುದಿಲ್ಲ, ಕಮರ್ಷಿಯಲ್ ಕಾಂಪ್ಲೆಕ್ಸ್ ಇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಗ್ರಾಂಟ್ ಕಂಡಿಷನ್‌ಅನ್ನು ವಯಲೇಷನ್ ಮಾಡಿದ್ದಾರೆಂದು ಅವರು ಹೇಳುತ್ತಿದ್ದಾರೆ.

ಶ್ರೀ ವಿ. ಸೋಮಣ್ಣ :- ಮತ್ತೆ ಇಲ್ಲಿ ಏನು ಮಾಡುತ್ತಾರೆಂದರೆ, ಒಬ್ಬ ಲೀಸ್ ತೆಗೆದುಕೊಂಡಿದ್ದರೆ, ಅದನ್ನು ಮತ್ತೆ ಆತ ಇನ್ನೊಬ್ಬನಿಗೆ ಸಬ್-ಲೀಸ್ ಕೊಟ್ಟಿರುತ್ತಾನೆ. ಟ್ರಸ್ಟ್‌ಗೆಂದು ಜಾಗವನ್ನು ಲೀಸ್ ತೆಗೆದುಕೊಂಡಿರುತ್ತಾರೆ. ಆದರೆ, ಆ ಟ್ರಸ್ಟ್‌ನಲ್ಲಿ ಯಾರಿರುತ್ತಾರೆಂದರೆ, ಅವರ ಅಣ್ಣ ತಮ್ಮಂದಿರು, ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಒಂದು ವೇಳೆ ಇವರ್ಯ್ಯಾರು ಇಲ್ಲದಿದ್ದರೆ ಅವರ ಮಕ್ಕಳು, ಮೊಮ್ಮಕ್ಕಳು ಮತ್ತು ಮುಂದೆ ಹುಟ್ಟತಕ್ಕಂಥ ಮಕ್ಕಳ ಹೆಸರನ್ನು ಟ್ರಸ್ಟ್‌ನಲ್ಲಿ ಸೇರಿಕೊಂಡಿರುತ್ತಾರೆ. ತಮ್ಮ ಮೂಲಕ ಸನ್ಮಾನ್ಯ ಪ್ರಕಾಶ್‌ರವರಲ್ಲಿ ವಿನಂತಿ ಮಾಡುವುದೇನೆಂದರೆ, ಮಾನ್ಯ ಪ್ರಕಾಶ್‌ರವರು ನಮ್ಮೆಲ್ಲರಿಗಿಮಥ ಹಿರಿಯರು ಮತ್ತು ಮುತ್ಸದ್ದಿಗಳು, ನಾನು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಈ ಕಾನೂನನ್ನು ತಾವು ಏಕೆ ತರುತ್ತಿದ್ದೀರೆಂದು ನನಗೆ ಗೊತ್ತಿಲ್ಲ. ಆದರೆ, ಇದನ್ನು ಅರಗಿಸಿಕೊಳ್ಳುವಂಥ ಒಬ್ಬ ವ್ಯಕ್ತಿಯನ್ನು ಗುರುತಿಸಿ ಇಲ್ಲಿಗೆ ಹಾಕಿ. ಇಲ್ಲಿಗೆ ಮಾನ್ಯ ಬಳಿಗಾರ್‌ರವರನ್ನು ಹಾಕಿ ಎಂದು ಇಲ್ಲಿ ಎಲ್ಲರೂ ಹೇಳುತ್ತಿದ್ದಾರೆ. ಮಾನ್ಯ ಬಳಿಗಾರ್‌ರವರನ್ನು ಹಾಕಿದರೆ ನಾನೂ ಕೂಡ ಸಂತೋಷಪಡುತ್ತೇನೆ. ಈ ರೀತಿಯಾಗಿ ಮಾಡಿರತಕ್ಕಂಥಾದ್ದನ್ನು ಇಡೀ ರಾಜ್ಯದಲಿ ತಾವು ಸ್ಥಗಿತಗೊಳಿಸಿ. ಮಾನ್ಯ ಮಾಧುಸ್ವಾಮಿ ಮತ್ತು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ, ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಲೀಸ್ ಲ್ಯಾಂಡ್

ಮತ್ತು ಸಬ್ ಲೀಸ್ ಲ್ಯಾಂಡ್ ಹಾಗೂ ಬಿಡಿಎ ಗೆ ಸೇರಿರತಕ್ಕಂಥ ಸಿ.ಎ. ಲ್ಯಾಂಡ್ ಅನ್ನು ಬೇರೆ ಬೇರೆ ಉದ್ದೇಶಕ್ಕಾಗಿ ಮಾಡಿಫೈಡ್ ಮಾಡಿ ಮಾಡಿರತಕ್ಕಂಥಾದ್ದನ್ನು ತಾವು ಕರೆಕ್ಟ್ ಆಗಿ ಕಾರ್ಯರೂಪಕ್ಕೆ ತಂದರೆ ತಾವು ಇತಿಹಾಸದಲ್ಲಿ ಉಳಿದುಕೊಳ್ಳುತ್ತೀರೆಂದು ನನಗನಿಸುತ್ತದೆ. ಯಾರ್ಯಾರು ಎಷ್ಟೆಷ್ಟು ದಂಧೆ ಮಾಡಿದ್ದಾರೆಂಬುದು ತಿಳಿಯುತ್ತದೆ.

ಇವತ್ತು ಏನಾಗಿದಂದರೆ, ನಾನೂ 24 ವರ್ಷಗಳಿಂದ ಬೆಂಗಳೂರು ನಗರದಲ್ಲಿ ರಾಜಕಾರಣಿಯಾಗಿ ಪ್ರತಿನಿಧಿಸುತ್ತಿದ್ದೇನೆ. ಮಾನ್ಯ ರೋಷನ್ ಬೇಗ್‌ರವರು ಮತ್ತು ನಾವೆಲ್ಲರೂ ಕೂಡ ಸುಮಾರು 24-25 ವರ್ಷಗಳಿಂದ ಇಲ್ಲಿ ಪ್ರತಿನಿಧಿಸುತ್ತಿದ್ದೇವೆ. ನಮಗೆಲ್ಲಾ ನೋವಾಗಿರುವುದೇನೆಂದರೆ, ಈ ಕಾನೂನನ್ನು ತಂದಿರತಕ್ಕಂಥದ್ದು ಸಂಯೋಜಿತವಾಗಿದೆ. ಯಾರಿಂದಾದರೂ ಇದಕ್ಕೊಂದು ಮೋಕ್ಷ ಬೇಕಾಗಿದೆ. ಇದಕ್ಕೆ ನೀವು ಮೋಕ್ಷ ಕಾಣಿಸಬೇಕಾದರೆ, ರಾಜ್ಯಕ್ಕೆ ಆಗತಕ್ಕಂಥಾದ್ದನ್ನು ಒಂದು ಕಡೆ ಬದಿಗೊತ್ತಿ, ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿಎಂಆರ್‌ಡಿಎಗಳಿಗೆ ಮಾನ್ಯ ಬಳಿಗಾರ್ ಸಾಹೇಬರನ್ನು ಲೀಗಲ್ ಆಫೀಸರ್ ಆಗಿ ಅಥವಾ ಮುಖ್ಯಸ್ಥರೆಂದು ಅಥವಾ ತನಿಖಾಧಿಕಾರಿ ಆಗಿ ನೇಮಕ ಮಾಡಿ.

ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾವುದೋ ಒಂದು ಸಂಸ್ಥೆಯ ಹೆಸರಿನಲ್ಲಿ ಇವತ್ತಿನ ದಿವಸ ಒಂದು ದೊಡ್ಡ ದಂಧೆ ನಡೆಯುತ್ತಿದೆ. ಈ ದಂಧೆ ಏನೆಂದರೆ, ಹೆಸರು ಮತ್ತು ಸಂಸ್ಥೆ ಒಬ್ಬರದ್ದು ಇದ್ದರೆ, ಅದರ ಮಜಾ ಮಾಡುವವರು ಯಾರೋ ಎನ್ನತಕ್ಕಂಥ ಮಟ್ಟಕ್ಕೆ ಬಂದಿದೆ. ಇವತ್ತಿನ ದಿವಸ ಒಂದೊಂದು ಸಮಾಜ ಒಂದೊಂದು ಜಾಗ ತೆಗೆದುಕೊಂಡಿದೆ. ಯಾವ ಉದ್ದೇಶಕ್ಕಾಗಿ ಆ ಜಾಗವನ್ನು ತೆಗೆದುಕೊಂಡಿದ್ದಾರೆಯೋ ಆ ಉದ್ದೇಶ ಅಲ್ಲಿ ಅಗುತ್ತಿಲ್ಲ. ಅಲ್ಲಿ ಪಗಡಿಗೆ ಕೊಟ್ಟಿದ್ದಾರೆ. ತಿಂಗಳ ಬಾಡಿಗೆ ಹಣವನ್ನು ಚೆಕ್ ಮೂಲಕ ಕೊಡಬಹುದು, ಇದು ಬೇಕಾದರೆ ಹೋಗಲಿ. ಆದರೆ ಸಾವಿರಾರು ಕೋಟಿ ರೂಪಾಯಿಗಳ ಪಗಡಿ ಹಣಕ್ಕೆ ಯಾವ ಚೆಕ್ ಇದೆ? ಇದಕ್ಕೆ ಸಂಬಂಧಪಟ್ಟಂತೆ ಕಾರ್ಪೋರೇಷನ್‌ನಲ್ಲಿ ಏನು ಮಾಹಿತಿ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಬಿಡಿಎ ಮತ್ತು ಕಾರ್ಪೋರೇಷನ್‌ನಲ್ಲಿ ಅವರ ಸೈಟ್‌ಗೆ ರಿಜಿಸ್ಟ್ರೇಷನ್ ಮಾಡಿರತಕ್ಕಂಥ ದಾಖಲೆ ಇರುತ್ತದೆ. ಇದನ್ನು ತಾವು

ತನಿಖೆ ಮಾಡಿಸಿ. ಅಲಾಟ್‌ಮೆಂಟ್ ಆಗದೇ ಇದ್ದದ್ದಕ್ಕೆ ಅವರಿಗೆ ಬೇಕಾದವರಿಗೆ ಲೆಟರ್ ಕಳುಹಿಸಿ, ಅವರಿಂದ ದುಡ್ಡು ಕಟ್ಟಿಸಿಕೊಂಡು ಸೈಟ್ ಅಲಾಟ್ ಮಾಡಿರತಕ್ಕಂಥಾದ್ದು ಸಹ ಇದೆ. ಈ ರೀತಿಯಾಗಿ ಬಿಡಿಎ ಮತ್ತು ಕಾರ್ಪೊರೇಷನ್‌ನಲ್ಲಿ ಬೇಕಾದಷ್ಟಿವೆ.

ಶ್ರೀ ವಿ. ಸೋಮಣ್ಣ :- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಇದಕ್ಕೆ ಏನೂ ಮಾಡಬೇಕಾಗಿಲ್ಲ. ಇವತ್ತಿನ ದಿವಸ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬಿಡಿಎ ಹಾಗು ಬಿಎಂಆರ್‌ಡಿಎ ಸಂಸ್ಥೆಯಲ್ಲಿ ಎಸ್ಟೇಟ್ ಎಂದು ಇಲಾಖೆ ಇದೆ. ಇಲ್ಲಿರತಕ್ಕಂಥ ಒಂದು ಮಾಹಿತಿ ನಾಳೆ ಬೆಳಿಗ್ಗೆ ಬೇಕೆಂದು ತಾವು ಕೇಳಿದರೆ ಆ ರೆಕಾರ್ಡ್ ದೇವರಾಣೆ ಸಿಗುವುದಿಲ್ಲ. ಒಬ್ಬ ಎಫೆಕ್ಟಿವ್ ಕಾರ್ಪೊರೇಟರ್ ಆಗಿ, ಮತ್ತೆ ಛೇರ್ಮನ್ ಹಾಗು ಮಂತ್ರಿಯಾಗಿ ಮತ್ತು ಶಾಸಕನಾಗಿ ಕೆಲಸ ಮಾಡಿರುವ ನಾನು ಹೇಳುವುದೇನೆಂದರೆ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮತ್ತು ಬಿಡಿಎಯಲ್ಲಿರಬಹುದು. ಇವತ್ತಿನ ದಿವಸ ನನ್ನ ಕ್ಷೇತ್ರದಲ್ಲಿ ಉದಯ ಶಾಲೆಗೆ 30 ವರ್ಷಗಳವರೆಗೆ ಜಾಗವನ್ನು ಕೊಟ್ಟಿದ್ದಾರೆ. ಅದರ ಪಕ್ಕದಲ್ಲಿ ಒಂದು ಜಾಗ ಇತ್ತು. ಆ ಜಾಗ ಸುಮ್ಮನೆ ಬಿದ್ದಿತ್ತು. ನಾನು ಮಂತ್ರಿಯಾಗಿದ್ದಾಗ ಆ ಜಾಗದಲ್ಲಿ ಪಾರ್ಕ್ ಮಾಡಿ ಎಂದು ಕಾರ್ಪೊರೇಷನ್ ಮುಖಾಂತರ ಅಲ್ಲಿ ಪಾರ್ಕ್ ಮಾಡಿಸಿದೆ. ಪಾರ್ಕ್ ಮಾಡಿ ಪ್ರಾರಂಭ ಮಾಡಬೇಕೆಂದು ಇರುವಾಗ ಯಾರೋ ಒಬ್ಬ ಬಂದು ಈ ಜಾಗ ನನಗೆ ಲೀಸ್ ಆಗಿದೆ ಎಂದು ಹೇಳಿದ. ಲೀಸ್ ಕೊಟ್ಟಿರತಕ್ಕಂಥ ಈ ಯಾವುದಕ್ಕೂ ಉಪಯೋಗ ಮಾಡಿಲ್ಲ ಎಂದು ನಾನೇನ ಕಾರ್ಪೊರೇಷನ್‌ಗೆ ಹೋಗಿ ಬರೆಸಿದ್ದೇನೆ. ಆದರೆ, ನಾನು ಯಾವತ್ತು ಪಾರ್ಕ್ ಪ್ರಾರಂಭ ಮಾಡುವ ದಿನಾಂಕದಿಂದ 8 ದಿವಸದ ಹಿಂದಿನ ದಿನಾಂಕವನ್ನು ಹಾಕಿ ಆತನಿಂದ ದುಡ್ಡು ಕಟ್ಟಿಸಿಕೊಂಡು ರಿನ್ಯುವಲ್ ಮಾಡಿಕೊಟ್ಟಿದ್ದರು. ಈ ರೀತಿಯಾದ ದುರಂತ ಸಾಕಷ್ಟಿವೆ.

ಆದ್ದರಿಂದ ಈಗ ಒಳ್ಳೆಯ ಕಾನೂನನ್ನು ತಂದಿದ್ದೀರಿ. ಇಡೀ ರಾಜ್ಯದಲ್ಲಿ ಸಣ್ಣಪುಟ್ಟ ಬಡವರನ್ನು ಮತ್ತು ಇತರರನ್ನು ಮಾತನಾಡಿಸುವುದಕ್ಕಿಂತ ಮುಂಚಿತವಾಗಿ ಬೆಂಗಳೂರಿನಲ್ಲಿರುವ ಪ್ರಕರಣಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಇವತ್ತಿನ ದಿವಸದಲ್ಲಿ ಬೆಂಗಳೂರಿನಲ್ಲಿ ಏನೇ ಮಾಡಿದರೂ ನಮಗೆ ಏನೂ ಗೊತ್ತಾಗುತ್ತಿಲ್ಲ. ಆದ್ದರಿಂದ ಇಂಥ ಪ್ರಕರಣಗಳನ್ನು ಪತ್ತೆ ಹಚ್ಚುವುದಕ್ಕೆ ತಾವು ದಯಮಾಡಿ ಒಂದು ತನಿಖಾ ಸಮಿತಯನ್ನು ಮಾಡಿ. ಇದಕ್ಕೆ ನೀವೇನಾದರು ಜಡ್ಜ್‌ಗೆ ಕೊಟ್ಟರೆ ದೇವರಾಣೆ ಇದರ ರಿಸಲ್ಟ್ ಬರುವುದಿಲ್ಲ. ಆದ್ದರಿಂದ ಇಲ್ಲಿಗೆ ದಯಮಾಡಿ ಬಳಿಗಾರ

ಸಾಹೇಬರ್‌ಅನ್ನು ಹಾಕಿ, ನಮ್ಮದ್ಯಾರದಾದರೂ ಇದ್ದರೆ ಈಚೆಗೆ ತೆಗೆದುಕೊಂಡು ಬರಲಿ, ನಮಗೇನೂ ಬೇಸರ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ರೇಸ್ ಕೋರ್ಸ್‌ನಿಂದ ಪ್ರಾರಂಭ ಮಾಡಿ. ರೇಸ್ ಕೋರ್ಸ್‌ನದ್ದು 8 ಎಕರೆ ಜಮೀನು ಹೋಗಿದೆ. ಮತ್ತೆ ಏಟ್ರಿಯಾ ಹೋಟೆಲ್‌ನಿಂದ ಪ್ರಾರಂಭ ಮಾಡಿ. ತವು ದೂರ ಹೋಗುವುದು ಬೇಡ ಮೊದಲು ವಿಧಾನ ಸೌಧಕ್ಕೆ ಹತ್ತಿರ ಇರತಕ್ಕಂಥ ಪ್ರಕರಣಗಳಿಂದ ಆರಂಭ ಮಾಡಿದರೆ ಪುಣ್ಯ ಬರುತ್ತದೆ. ನಿಮ್ಮ ಏಟ್ರಿಯಾ ಹೋಟೆಲ್‌ಗೆ ಮತ್ತು ರೇಸ್‌ಕೋರ್ಸ್‌ನದ್ದು ಎಷ್ಟು ಎಕರೆ ಗ್ರಾಂಟ್ ಮಾಡಲಾಗಿದೆ ಎಂದು ಮತ್ತು ಇನ್ನೂ ಎಷ್ಟು ಉಳಿದುಕೊಂಡಿದೆ ಎಂಬುದರ ಬಗ್ಗೆ ತನಿಖೆಯನ್ನು ಮೊದಲು ಇಲ್ಲಿಂದ ಪ್ರಾರಂಭ ಮಾಡಿ.

ಅಧ್ಯಕ್ಷರು :- ಅಂದರೆ, ಅಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ತಾವು ಹೇಳುತ್ತಿದ್ದೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ :- ಸಾಧ್ಯವಿಲ್ಲ. ಆಕಸ್ಮಾತ್ ಬಳಿಗಾರ್‌ರವರ ಕೈಯಿಂದಾದರೂ ಆಗುತ್ತದೆಯೇ ಎಂಬ ಪ್ರಯೋಗ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು :- ನೀವು ಹೇಳುವುದನ್ನು ನೋಡಿದರೆ ಈ ಬಿಲ್ ಅನ್ನು ತಮಾಷೆಗೆ ತರುತ್ತಿದ್ದೀರಿ, ಯಾರಿಂದ ಕೂಡ ಏನು ಮಾಡುವುದಕ್ಕೆ ಆಗುವುದಿಲ್ಲ ಎಂಬ ರೀತಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ತಮಾಷೆ ಇರಲಿ. ಆದರೆ, ಅವರು ನಮಗಿಂತ ಮೇಲಿದ್ದಾರೆ. ನಾವು ಮೇಲಕ್ಕೆ ನೋಡಿದರೆ ನಮ್ಮ ಟೋಪಿ ಕೆಳಕ್ಕೆ ಬಿದ್ದು ಹೋಗುತ್ತದೆ. ಅಲ್ಲಿಗೆ ಬಳಿಗಾರ್‌ರವರನ್ನು ಹಾಕಿ ಇದರ ಬಗ್ಗೆ ತನಿಖೆ ಮಾಡಿಸಿ.

ಶ್ರೀ ಎಂ.ಪಿ. ಪ್ರಕಾಶ್ :- ಬೇಲೂರು ಘೋಷಣೆಗೆ ಸಂಬಂಧಪಟ್ಟಂತೆ ಮತ್ತು ಎಲ್ಲದಕ್ಕೂ ಈ ಬಳಿಗಾರ್‌ರವರು ಅಡ್ಡ ಬರುತ್ತಾರೆಂದು ತಾವುಗಳು ಇಲ್ಲ ಭಾಷ್ಣ ಮಾಡಿದ್ದೀರಿ. ಆದರೆ, ಈಗ ಸುಮ್ಮನೆ ವಿನಾಕಾರಣವಾಗಿ ಅವರ ಬಗ್ಗೆ ಹೇಳುತ್ತಿದ್ದೀರಿ. ಕಾನೂನು ಪ್ರಕಾರ ಅವರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಕೊನೆಗೆ ಅವರಿಗಾದರೂ ಅಡ್ಡ ಬರಬಹುದೇನೊ?

ಶ್ರೀ ಎಂ.ಪಿ. ಪ್ರಕಾಶ್ :- ಪದೇ ಪದೇ ಅವರ ಬಗ್ಗೆ ಹೇಳುತ್ತಿರುವುದನ್ನು ನೋಡಿದರೆ ತಮ್ಮಲ್ಲಿ ಏನು ಉದ್ದೇಶ ಇದೆ ಎಂಬುದು ಗೊತ್ತಾಗುತ್ತಿಲ್ಲ

ಶ್ರೀ ಸಿದ್ಧರಾಮಯ್ಯ :- ನಮ್ಮ ಕಡೆಯಿಂದ ಅವರಿಗೆ ಯಾವುದೇ ಅಡ್ಡ ಬಂದಿಲ್ಲ. ನಿಮ್ಮವರ ಕಡೆಯಿಂದ ಬಂದಿದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರು ಇರುವಾಗ ನಮ್ಮನ್ನು ಕಳ್ಳರೆಂದು ಹೇಳಿದರು. ಕರೆಂಟ್ ಕದಿಯುತ್ತದ್ದೀರೆಂದು ಟಿ.ವಿ.ಯಲ್ಲಿ ತೋರಿಸಿದರು ಮತ್ತೆ ಕದ್ದಿದ್ದಕ್ಕೆ ಶಿಕ್ಷೆ ಎಂದು ಹೇಳಿದರು. ಆದರೆ, ಅವರು ಹೋದ ಮೇಲೆ ಎಲ್ಲಾ ರೆಗ್ಯುಲರೈಸ್ ಆಯಿತು. ಅವರು ಇರುವಾಗ ಪಂಚಾಯತ್ ರಾಜ್‌ನಲ್ಲಿ ನಮಗ್ಯಾರಿಗೂ ಉಸಿರಾಡುವುದಕ್ಕೆ ಬಿಡಲಿಲ್ಲ. ಮಾನ್ಯ ಧರ್ಮಸಿಂಗ್ ಸಾಹೇಬರು ಹೇಳಿದರೂ ಸಹ ಒಪ್ಪುತ್ತಿರಲಿಲ್ಲ. ಆದ್ದರಿಂದ ಇಲ್ಲಿಯಾದರೂ ಅವರ ಕಡೆಯಿಂದ ಒಳ್ಳೆಯ ಕೆಲಸವನ್ನಾದರೂ ಮಾಡಿಸಿ.

ಶ್ರೀ ಎಂ.ಪಿ. ಪ್ರಕಾಶ್ :- ನೀವು ಮಾನ್ಯ ಧರ್ಮಸಿಂಗ್ ಸಾಹೇಬರನ್ನು ಕೇಳುವುದು ಬೇಡ. ಮಾನ್ಯ ಬಿ.ಆರ್. ಪಾಟೀಲ್‌ರವರನ್ನು ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಧರ್ಮಸಿಂಗ್ ಸಾಹೇಬರು ಹೇಳಿದ್ದಾರೆ. ಆದ್ದರಿಂದ ಆಶ್ರಯ ಕಮಿಟಿ ಮಾಡಿ ಎಂದು ಬಳಿಗಾರ್‌ರವರಿಗೆ ಕೇಳಿದ್ದಕ್ಕೆ, ಇಲ್ಲ ಸಾರ್ ಇದು ಲಕ್ಷ್ಮಣ್ ರೇಖೆ ಎಂದು ಹೇಳಿದರು. ಆದ್ದರಿಂದ ಇಲ್ಲಿಗೆ ಅವರನ್ನು ಉಪಯೋಗ ಮಾಡಿಕೊಳ್ಳಿ. ಅಂಥ ಸಮರ್ಥರನ್ನು ನೀವು ಬಿಟ್ಟರೆ ಹೇಗೆ?

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, ಈ ಮಸೂದೆಯಲ್ಲಿರತಕ್ಕಂಥ ಅನೇಕ ವಿಚಾರಗಳನ್ನು ಮಾಡಬೇಕೆಂಬ ಕಲ್ಪನೆ ಏನಿದೆ, ಇದು ಕಲ್ಪನೆ ಆಗುವುದಕ್ಕಿಂತ ಮುಂಚಿತವಾಗಿ ಇದನ್ನು ಕಾರ್ಯರೂಪಕ್ಕೆ ತರತಕ್ಕಂಥ ಕೆಲಸ ಮಾಡುವಾಗ ವಿಶೇಷವಾಗಿ ಬೆಂಗಳೂರಿನಂಥ ದೊಡ್ಡ ನಗರದಲ್ಲಿ ಬಡವರು ವಾಸ ಮಾಡತಕ್ಕಂಥ 400 ಕ್ಕಿಂತ ಹೆಚ್ಚು ಕೊಳಚೆ ಪ್ರದೇಶಗಳಲ್ಲಿನ ಜನರಿಗೆ ಇದರಿಂದ ಯಾವುದೇ ಕಾರಣಕ್ಕೂ ತೊಂದರೆ ಆಗಬಾರದು. ಈ ಬಿಲ್ ಅನ್ನು ಕಾರ್ಯರೂಪಕ್ಕೆ ತರುವುದಕ್ಕಿಂತ ಮುಂಚಿತವಾಗಿ ಸನ್ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಇದಕ್ಕೆ ನ್ಯಾಯಾಲಯ ಎಂದು ಹೇಳುವುದಕ್ಕಿಂತ ಹಾಚ್ಚಾಗಿ ಮಾನ್ಯ ಖರ್ಗೆ ಸಾಹೇಬರು ಹೇಳಿದ ಹಾಗೆ

ಕೆಲವುಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ ಕೆಲಸ ಮತ್ತು ಬೆಂಗಳೂರು ನಗರದಲ್ಲಿ ಇದನ್ನು ಒಂದು ಸಲ ಮಾಡಿದರೆ ಬೇರೆ ಕಡೆ ಎಲ್ಲವೂ ಕೂಡ ಸರಿ ಹೋಗುವಂಥ ಸೂಚನೆಗಳಿವೆ. ಈ ಬಿಲ್ ಅನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಹೆಚ್. ಶಿವಂಶಕರರೆಡ್ಡಿ :- ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು :- ಈಗಾಗಲೇ ಎಲ್ಲರೂ ಇದರ ಬಗ್ಗೆ ಹೇಳಿದ್ದಾರೆ. ತಾವು ಹೇಳುವುದು ಏನಿದೆ? ಇನ್ನೂ ಸಾಕಷ್ಟು ಬಿಲ್ ಇವೆ. ಈಗಾಗಲೇ 6 ಗಂಟೆ 10 ನಿಮಿಷಗಳಾಗಿದೆ. ಇನ್ನೂ ಮೂರ್‍ನಾಲ್ಕು ಬಿಲ್‌ಗಳು ತೀರಾ ಅಗತ್ಯವಾಗಿದೆ.

ಶ್ರೀ ಎನ್.ಹೆಚ್. ಶಿವಶಂಕರ್ :- ಮಾತನಾಡುವುದಕ್ಕೆ ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು :- ಅವರಿಗೆ ನಾನು ಅವಕಾಶ ಕೊಟ್ಟಿದ್ದೇನೆ. ಒಂದು ನಿಮಿಷದಲ್ಲಿ ಅವರು ಮುಗಿಸುತ್ತಾರೆ. ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ :- ನಾನು ಈಗಲಾದರೂ ಮಾತನಾಡಬಾರದೇ? ಆ ಕಡೆಯುವರು, ಆ ಕಡೆಯುವರು ಮಾತನಾಡಿ ಎಂದರೆ? ನಾವು ಮಾತನಾಡಬಾರದಾ? ಯಾವಾಗಲೂ front line ದವರೇ ಮಾತನಾಡುವುದಾ? ಎಲ್ಲದಕ್ಕೂ ನೀವೇ ಮಾತನಾಡಿದರೆ, ನಾವು ಸುಮ್ಮನೆ ಕೇಳಿಕೊಂಡು ಹೊರಟು ಹೋಗುವುದಾ?

(ಗೊಂದಲ)

ಅಧ್ಯಕ್ಷರು :- ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಬಿಲ್ ಮೇಲೆ ಯಾವಾಗಲೂ ಸ್ವಲ್ಪ ವಿರೋಧ ಪಕ್ಷದವರು ಜಾಸ್ತಿ ಮಾತನಾಡುವುದು, ನೀವು ಅಲ್ಲ. Legislature Party ಯಲ್ಲಿ ನೀವು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್ :- ನಾವು ರೈತರ ಪರವಾಗಿಲ್ಲವೆ? ನಾವು ಮಾತನಾಡಬಾರದೇ?

ಶ್ರೀ ಜೆ.ಸಿ. ಮಾಧುಸ್ವಾಮಿ :– ರೈತರ ಪರವಾಗಿ ಇದ್ದರೆ? ನಿಮ್ಮ ಪಾರ್ಟಿ ಮೀಟಿಂಗ್ ಕರೆಯುವುದಕ್ಕೆ ಹೇಳಿ. ಅಲ್ಲಿ ಚರ್ಚೆ ಮಾಡಿ, ಇಲ್ಲಿ ಬಿಲ್ ತರುವುದೇ ಬೇಡ. ಇಲ್ಲಿ ವಿರೋಧ ಮಾಡುವುದಾದರೆ ಏಕೆ ಬಿಲ್ಲನ್ನು ತರುವುದಕ್ಕೆ ಬಿಡುತ್ತೀರಿ.

(ಗೊಂದಲ)

ಅಧ್ಯಕ್ಷರು :– ಅವರನ್ನು ಕರೆದಿದ್ದೇನೆ, ತಾವು ಕುಳಿತಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ :– ಇವರು ಯಾವಾಗಲೂ ಬಿಲ್‌ಗೆ ಸಪೋರ್ಟ್ ಮಾಡಿ..........

(ಗೊಂದಲ)

ಅಧ್ಯಕ್ಷರು :– ರೀ ವೆಂಕಟೇಶ್, ಅವಕಾಶವನ್ನು ನಾನು ಕೊಡತಕ್ಕಂಥಾದ್ದು. ನೀವು ನೀವು ಸುಮ್ಮನೆ ಮಾತನಾಡಿದರೆ....

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ :– ಇಲ್ಲಾ ಅಧ್ಯಕ್ಷರೆ, ನಾನು ನಿಮ್ಮ ಗಮನಕ್ಕೆ ತಂದೆ.

ಅಧ್ಯಕ್ಷರು :– ನಮಗೂ ಒಂದು ಅವಕಾಶವನ್ನು ಕೊಡಿ ಎಂದು ಕೇಳಿ. ಏನು ಇದು ಮಕ್ಕಳ ಆಟ ಆಗಿಹೋಯಿತು. ಎಲ್ಲರೂ ಪದೇ ಪದೇ ಎದ್ದು ನಿಂತುಕೊಳ್ಳುವುದರಿಂದ ಈ ರೀತಿಯಾಗುತ್ತದೆ.

ಶ್ರೀ ಎನ್.ಹೆಚ್. ಶಿವಶಂಕರ್‌ರೆಡ್ಡಿ :– ಮಾನ್ಯ ಅಧ್ಯಕ್ಷರೆ, Land Tribunal constitute ಆದ ಮೇಲೆ Inam Abolition Act ಕೆಳಗಡೆ, ಈ ದೇವಸ್ಥಾನದ ಜಮೀನುಗಳಿಗೆ ಅರ್ಚಕರು ಮತ್ತು ಗೇಣಿದಾರರು ಸಾಕಷ್ಟು ಅರ್ಜಿಗಳನ್ನು ಹಾಕಿಕೊಂಡಿದ್ದು ಅನೇಕ ಕಡೆ ಉದಾಹರಣೆಗಳು ಇವೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 10–15 ಎಕರೆ ಅರ್ಚಕರು ಹೆಸರಿಗೆ ಆಗಿರುವಂತಹದ್ದು, dispute ಈಗಲೂ ಹಾಗೆಯೇ ಇದೆ. ಅರ್ಚಕರಿಗೆ ಹಾಗೂ ಗ್ರಾಮಸ್ಥರಿಗೆ ಕೋರ್ಟುಗಳಲ್ಲಿ ವಿವಾದ ಇದೆ. ಸುಮಾರು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂತಹ ಜಮೀನುಗಳು ಇವು, ಒಂದು ರೀತಿಯಲ್ಲಿ ಕಬಳಿಕೆಯಾಗಿದೆ. ಇಂತಹ ಪ್ರಕರಣಗಳು

ಈ purview ಗೆ ಬರುತ್ತದೆಯೇ ಎಂಬ ಬಗ್ಗೆ ಕ್ಲ್ಯಾರಿಫಿಕೇಷನ್‌ನ್ನು ಕೊಡಬೇಕೆಂದು ನಾನು ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ವೆಂಕಟೇಶ್‌ರವರೆ, ತಾವು ಗಲಾಟೆಯನ್ನು ಮಾಡುತ್ತಿದ್ದೀರಿ, ಈಗ ತಾವು ಮಾತನಾಡುತ್ತೀರಾ?

ಶ್ರೀ ಎಂ.ಪಿ. ವೆಂಕಟೇಶ್ :- ನಾವು ಮಾತನಾಡುವಾಗಲೆಲ್ಲಾ ತಾವು ಅವಕಾಶವನ್ನು ಕೊಡಬೇಕು. ನಿನ್ನೆ ಮಾತನಾಡುವಾಗ ಏತಕ್ಕೆ ತಡೆ ಮಾಡಿದಿರಿ?

ಅಧ್ಯಕ್ಷರು :- ಆಯಿತು, ತಾವು ಮಾತನಾಡಿ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ :- ಈ ಬಿಲ್ ಮಂಡನೆ ಏನು ಆಗಿದೆ. ಇದು ಸ್ವಾಗತಾರ್ಹ, ಆದರೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರವೆಂದು ಆಗಬಾರದು. ಈ ಬಿಲ್ ಮಂಡನೆಯಾಗಿದ್ದು, ಎಲ್ಲೆಲ್ಲಿ ಯಾರು ತಪ್ಪು ಮಾಡಿದ್ದಾರೆ ಅಮತಹವನ್ನು ಹಿಡಿದು ಸೂಕ್ತ ಕ್ರಮವನ್ನು ಜರುಗಿಸಬೇಕು. ಕರ್ನಾಟಕ ರಾಜ್ಯ ಗೃಹನಿರ್ಮಾಣ ಮಂಡಳಿ ಎಂದು ಇದೆ. ಇದಕ್ಕೆ ಒಬ್ಬ Joint Registrar, ಇದ್ದು, ಅವರು ಎಂ.ಡಿ.ಯಾಗಿದ್ದಾರೆ. ಈ ಗೃಹ ನಿರ್ಮಾಣ ಮಂಡಳಿಯಿಂದ ಸೈಟುಗಳನ್ನು ಕೊಡುತ್ತೇವೆಂದು ಹೇಳಿ 100 ಕೋಟಿ ರೂಪಾಯಿಗಳನ್ನು ಅವರು ಸಂಗ್ರಹ ಮಾಡಿದ್ದಾರೆ. ಆದರೆ ಅವರು ಇಲ್ಲಿಯವರೆಗೆ ಪರ್ಚೇಸ್ ಮಾಡಿದ್ದು ಕೇವಲ 30 ಎಕರೆ ಭೂಮಿ ಮಾತ್ರ. ಇದಕ್ಕೆ 12 ಜನರು ಡೈರೆಕ್ಟರ್‌ಗಳು ಇದ್ದಾರೆ. ಅವರೆಲ್ಲರಿಗೂ ಕೂಡ foreign trip ಆಗಿದೆಯೇ ಹೊರತು, ಯಾರು ಫಲಾನುಭವಿಗಳು ಆಗಬೇಕೆಂದು ಸೈಟಿಗಾಗಿ ಅರ್ಜಿಯನ್ನು ಹಾಕಿದ್ದರು, ಇವತ್ತು ಯಾರಿಗೂ ಸೈಟು ಸಿಕ್ಕಿಲ್ಲ. ನನ್ನ ನಿವೇದನೆ ಇಷ್ಟೆ ಇಂತಹ ಗೃಹ ನಿರ್ಮಾಣ ಮಂಡಳಿಗಳು ಕರ್ನಾಟಕ ರಾಜ್ಯದಲ್ಲಿ ಯಾವುದು ಇವೆ, ಯಾವುದೇ ಸಂಸ್ಥೆಗಳು ಸಾರ್ವಜನಿಕರಿಂದ ಹಣವನ್ನು ವಸೂಲಿ ಮಾಡಿ ಸೈಟುಗಳನ್ನು ಕೊಡದೇ ವಂಚನೆ ಮಾಡುವಂತಹ ಯಾವ ಸಂಸ್ಥೆಗಳು ಇವೆ, ಈ ಗೃಹ ನಿರ್ಮಾಣ ಮಂಡಳಿ ಸೇರಿಕೊಂಡು ಇದನ್ನು ಸಿ.ಓ.ಡಿ ತನಿಖೆಗೆ ಒಪ್ಪಿಸಿ. ನಂತರ ಇದನ್ನು ಬಿಲ್‌ನಲ್ಲಿ ಕೂಡ ಇಂತಹ ಸಂಸ್ಥೆಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ತನಿಖೆಯನ್ನು ಕೈಗೊಳ್ಳಬೇಕು. ಅದನ್ನು ಈ ಬಿಲ್‌ನಲ್ಲಿ ಕೂಡ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :- ಸನ್ಮಾನ್ಯ ಅಧ್ಯಕ್ಷರೆ, ಸಾರ್ವತ್ರಿಕವಾಗಿ ಈ ಕಾನೂನಿನ ಅಗತ್ಯತೆಯ ಬಗ್ಗೆ ಔಚಿತ್ಯದ ಬಗ್ಗೆ ಎಲ್ಲಾ ಸದಸ್ಯರು ಕೂಡ ಬೆಂಬಲಿಸಿದ್ದಾರೆ.

ಅವರು ಕೆಲವು ಆತಂಕಗಳನ್ನು ವ್ಯಕ್ತ ಮಾಡುವಂತಹದ್ದು ಸಹಜವಾದುದು. ಯಾವುದೇ ಒಂದು ಕಾನೂನು ತನ್ನ ವಿವೇಚನೆ ಮತ್ತು ವಿವೇಕದ ಮೂಲಕವಾಗಿ ಏನೆಲ್ಲಾ ಸಾಧ್ಯತೆಗಳು ಬರಬಹುದು, ಸಂಭವನೀಯವಾದ ಅಪಾಯಗಳು ಇರಬಹುದು ಎನ್ನುವುದನ್ನು ಯೋಚನೆ ಮಾಡಿ ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. But, man's ingenuity is something which is absolutely phenomenal. ಯಾವ ತರಹದಲ್ಲಿ ಆ ಮನುಷ್ಯ ರಂಗೋಲಿಯ ಕೆಳಗಡೆ ಜಾರಬೇಕೆಂದು ಯೋಚನೆಯನ್ನು ಮಾಡುತ್ತಾನೆ, ಅದು ಗೊತ್ತಾಗುವುದಿಲ್ಲ. ಆ ಕಾರಣಗಳಿಂದ ಆತಂಕಗಳು ಇದ್ದಾವೆಂಬ ಕಾರಣಕ್ಕಾಗಿಯೇ ಕೆಲವು ವಿಷಯಗಳನ್ನು ಇಲ್ಲಿ ಹೇಳಿದ್ದಾರೆ.

ಮೂಲತಃ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿದ ಹಾಗೆ ಇಲ್ಲಿ ಅವರು ಏನು ಅಭಿಪ್ರಾಯವನ್ನು ಪಟ್ಟಿದ್ದಾರೆ ಇದರಲ್ಲಿ ಕಂದಾಯ ಇಲಾಖೆಯವರು ಕೆಲಸ ಮಾಡುವಂತಹದ್ದು, ಅವರನ್ನು ನೀವು ಪರಿಗಣಿಸಬೇಕೆಂದು ನೀವು ಹೇಳಿದ್ದೀರಿ. ನಾವು ಖಂಡಿತವಾಗಿಯೂ ಕೂಡ ಕಂದಾಯ ಇಲಾಖೆಯನ್ನೇ Nodal Department ಆಗಿ ಮಾಡಿ ಅದರ ಮೂಲಕ ಕ್ರಮವನ್ನು ಕೈಗೊಳ್ಳುವ ಬಗ್ಗೆ ಏನೆಲ್ಲಾ ಮಾಡಬೇಕು. ಅದನ್ನು ಖಂಡಿತವಾಗಿಯೂ ಸರ್ಕಾರವು ಕೂಡ ಪರಿಶೀಲನೆ ಮಾಡುತ್ತದೆ. ಅದನ್ನು ಒಪ್ಪುತ್ತದೆಂದು ನಾನು ಭಾವಿಸುತ್ತೇನೆ. ಯಾರಾದರೂ ಒಬ್ಬರು ಆ ಇಲಾಖೆಯ ಮುಖ್ಯಸ್ಥರಾಗಿರಬೇಕಾಗಿರುವುದು ಎಂದು ಇದೆ. ಇದರಲ್ಲಿ ಅದನ್ನು ಖಂಡಿತವಾಗಿಯೂ ಸೇರಿಸುತ್ತೇವೆ. ಜಿಲ್ಲಾ ನ್ಯಾಯಾಧೀಶರಿಗೆ ನಾವು ಕೊಟ್ಟರೆ ಬೇಗ ಬೇಗನೆ ವಿಲೇವಾರಿಯಾಗುವುದಿಲ್ಲ, ಆ ನ್ಯಾಯಾಲಯಗಳನ್ನು Special ನ್ಯಾಯಾಲಯಗಳೆಂದು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪನೆ ಮಾಡುತ್ತೇವೆ. ವಿನಾಕಾರಣ ಹಣ ವೆಚ್ಚಾಗಬಾರದು ಎಂದು ಹೆಚ್ಚು ಪ್ರಕರಣಗಳು ಇಲ್ಲದೇ ಇರುವಂತಹ ಪ್ರದೇಶಗಳಲ್ಲಿ, ಅಲ್ಲಿರುವಂತಹ ನ್ಯಾಯಾಲಯಗಳನ್ನೇ ವಿಶೇಷ ನ್ಯಾಯಾಲಯಗಳೆಂದು ಅಧಿಸೂಚನೆಯನ್ನು ಹೊರಡಿಸಿ, ಏಕೆಂದರೆ ಜಿಲ್ಲಾ ನ್ಯಾಯಾಲಯಗಳು ಇದ್ದಾಗ ಸಿಪಿಸಿ ಬರುವಂತಹದ್ದು ಆಗುವುದಿಲ್ಲ, summary trial ಮಾಡುವುದಕ್ಕಾಗುವುದಿಲ್ಲ.

ಈ ಕಾನೂನಿನ ವ್ಯಾಪ್ತಿಯಲ್ಲಿ Summary trial ಮಾಡಬೇಕಾಗಿರುವುದು ಇರುತ್ತದೆ. 6 ತಿಂಗಳೊಳಗಾಗಿ ಇದರ ವಿಲೇವಾರಿ ಆಗೇ ತೀರಬೇಕೆಂಬ ಮಾತನ್ನು

ಹೇಳಿರುವುದರಿಂದ ನಾವು ಅವರಿಗೆ ಆ ಅಧಿಕಾರವನ್ನು ಕೊಟ್ಟಿರುತ್ತೇವೆ. ತಾವು ಬಹಳ ಮುಖ್ಯವಾಗಿರುವಂತಹದ್ದು. law of adverse possession ಇದೆ. ಇದನ್ನು ತಾವು ಏಕೆ ಯೋಚನೆ ಮಾಡುತ್ತಿರೇನ್ನುವಂತಹ ಮಾತನ್ನು ಕೂಡ ತಾವು ಹೇಳಿದ್ದೀರಿ. ಆಗ ಇದರಲ್ಲಿ law of adverse possession ಕೂಡ ಈ Special court ನವರು ಅದರ ಬಗ್ಗೆ ನಿರ್ಣಯ ಮಾಡತಕ್ಕಂತಹ ಅಧಿಕಾರ ಅದಕ್ಕೆ ಇದೆ. ಆ ಕಾರಣಕ್ಕಾಗಿಯೇ ಆಕಸ್ಮಾತ್ ಯಾರಾದರೂ 30 ವರ್ಷಗಳಿಗಿಂತ ಆಚೆ ಸರ್ಕಾರದ ಗೊತ್ತಾದಂತಹ ಭೂಮಿಯಲ್ಲಿಯೇ ನಾನು ಇದ್ದೇನೆ. ಅಥವಾ ಒಬ್ಬ ಖಾಸಗಿ ವ್ಯಕ್ತಿ 12 ವರ್ಷಗಳ ಕಾಲ ನಿರಂತರವಾಗಿ ಇದ್ದೇನೆ, ಆದ್ದರಿಂದ ಆತನಿಗೆ ವ್ಯತಿರಿಕ್ತವಾಗಿ ನಾನು ಅನುಭವದಾರನಾಗಿದ್ದೇನೆ ಎಂಬುದನ್ನು ತೋರಿಸಿದರೆ ಅದನ್ನು ಕೂಡ law of adverse possession ಮೂಲಕ ನಿರ್ಣಯ ಕೊಡುವಂತಹ ಅಧಿಕಾರ ಈ ವಿಶೇಷ ನ್ಯಾಯಾಲಯಗಳಿಗೆ ಇದೆ. ಆದ್ದರಿಂದ ಆ ವಿಚಾರದ ಬಗ್ಗೆ ನಾವು ಆತಂಕವನ್ನು ಇಟ್ಟುಕೊಳ್ಳುವಂತಹ ಅಗತ್ಯತೆ ಇಲ್ಲ.

ಮಾನ್ಯ ಶ್ರೀರಾಮರೆಡ್ಡಿಯವರು ಮಾನ್ಯ ಮಾಧುಸ್ವಾಮಿಯವರು ಪ್ರಶ್ನೆ ಮಾಡಿರುವಂಥದ್ದು, ಹಳ್ಳಿಗಳ ಪ್ರದೇಶದಲ್ಲಿರತಕ್ಕಂತಹದ್ದರ ಬಗ್ಗೆಯೂ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದರು. ಅಂತಹ ತೊಂದರೆಗಳು ಏನಾದರೂ ಇದ್ದರೆ ನಾವು ಈ ಕಾನೂನಿನಲ್ಲಿ ಎಷ್ಟು ಸರ್ವವ್ಯಾಪ್ತಿಯಾಗಿ ಪರಿಗಣಿಸುವುದಕ್ಕೆ ಸಾಧ್ಯತೆಯಾಗುತ್ತದೆ. ಅವೆಲ್ಲವನ್ನು ಕೂಡ ಇದರೊಳಗಡೆ ತಂದಿದ್ದೇವೆ. ಇಷ್ಟೆಲ್ಲಾ ಆದಾಗ್ಯೂ ಕೂಡ ಕೆಲವು ಪ್ರಕರಣಗಳು ಬರಬಹುದು. ಬರುವುದಿಲ್ಲವೆಂಬ ಮಾತು ಕೂಡ ಇಲ್ಲ. ಆಗ ಅನುಭವ ಹಿನ್ನೆಲೆಯಲ್ಲಿ ಮತ್ತು ನೈಜಕತೆಯ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯತೆ ಆಗುತ್ತದೆ. ಮಧ್ಯಂತರ ಅವಧಿಯಲ್ಲಿ ಕೆಲವರಿಗೆ ತೊಂದರೆಯಾಗಬಹುದು ಇಲ್ಲವೆಂದು ನಾನು ಹೇಳುವುದಿಲ್ಲ. ಆದಷ್ಟು ಮಟ್ಟಿಗೆ ಈಗಿರುವಂತಹ ಕಾನೂನಿನ ವ್ಯಾಪ್ತಿಯನ್ನು ಸಂಪೂರ್ಣವಾಗಿ ನಾವು ಇಟ್ಟುಕೊಂಡಿದ್ದೇವೆ. ಈಗ ಜುಮ್ಮಾ, ಬಾಣೆ ಉಂಬಳಿ ಇತ್ಯಾದಿ ಬೇರೆ ಬೇರೆ ವಿಷಯಗಳನ್ನು ಇಲ್ಲಿ ನಾವು ವಿಶೇಷವಾಗಿ ಪರಿಶೀಲಿಸಬಹುದು ಎಂದು ಹೇಳಿರುವುದರಿಮದ ಆ ಪ್ರಶ್ನೆಯು ಬರುವುದಿಲ್ಲ. ಕುಮ್ಕಿಯ ಬಗ್ಗೆ ತಾವು ಏನು ಹೇಳಿದ್ದೀರಿ, it covers under 94(b) of the Land Revenue Act. ತಾವು ಏನು 94(a) 94(b) 94(c) ಇವೆಲ್ಲವು ಇದೆಯಲ್ಲ, ಅದರಲ್ಲಿ ಕುಮ್ಕಿ ಸೇರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅಪ್ಲಿಕೇಶನ್ ಹಾಕದಿದ್ದರೆ, better cultivation ಮಾತ್ರ ಕುಮ್ಕಿಯನ್ನು ಸೇವ್ ಮಾಡಿಕೊಂಡು ಬಂದಿದ್ದಾರೆ. ಅವರದು ಅದರಲ್ಲಿ ಬರುವುದಿಲ್ಲ. the matters is pending ಅವರು Supreme Court ವರೆಗೂ ಹೋಗಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಕಾನೂನು ವಿಚಾರದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಹೇಳಿದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅದರ ಜೊತೆಯಲ್ಲಿ ಇದೆ. Land Revenue Act ನಲ್ಲಿ ಬಾಣೆ ಮತ್ತು ಕಾಣೆ ಜೊತೆಯಲ್ಲಿ ಅದು ಇದೆ.

ಶ್ರೀ ಎಂ.ಪಿ. ಪ್ರಕಾಶ್ :- ಬೆಳಿಗ್ಗೆ ಅವರು ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿ ತಮ್ಮ ಆತಂಕವನ್ನು ನಿವಾರಿಸಿದ್ದಾರೆ. ತಮ್ಮ ಗಮನಕ್ಕೆ ಮತ್ತೊಂದು ಸಲ ತರುವುದೇನೆಂದರೆ Karnataka Land Revenue Act, 79 proviso (2) ಕೆಳಗೆ

> "Notwithstanding anything contained in sub-section (1) but subject to such general or special orders that, may be issued by the State Government from time to time, the privileges that are being enjoyed bu custom or under any order such as privileges in respect of Kumki lands, Bane lands and Kane lands in South Kanara District, Betta lands and Handi lands in North Kanara District, Kan and Soppina Betta lands in Mysore Area, Jamma and Bane in Coorg District and Motasthal wet lands in Gulbarga Area shall continue."

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಇದನ್ನೆಲ್ಲಾ mention ಮಾಡಿದ್ದೀರಿ, ಅದನ್ನು ಮಾಡಲಿಲ್ಲವೆಂದು ನಾನು ಹೇಳುತ್ತಿರುವುದು. entire portionಅದರಲ್ಲಿ ಏನು ಇದೆ ಅದನ್ನು as it is ತಂದುಬಿಟ್ಟರೆ ನಮಗೆ ಸಮಸ್ಯೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಅಧು ಇದೆ. ಅದೇ ತರಹ 94(ಬಿ) ಯಲ್ಲಿ ಇರುವಂತಹದ್ದು. ಇರುವಂತಹದ್ದು. It is covered.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– 94(ಬಿ) ನಲ್ಲಿ applicants ಗೆ ಮಾತ್ರ ಬರುತ್ತದೆ. Not otherwise. ನೀವು ಅದನ್ನು ಕವರ್ ಮಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ :– ಇದು ಕವರ್ ಆಗುತ್ತಿರುವುದರಿಂದ ಇಲ್ಲಿ ಆ ಪ್ರಶ್ನೆಯನ್ನು ಎತ್ತಬೇಕಾಗಿರುವುದು ಕೂಡ ಇಲ್ಲ. ಕವರ್ ಆಗುತ್ತಿರುವುದರಿಂದ ಇಲ್ಲಿ ನಾವು ಆ ಪ್ರಶ್ನೆಯನ್ನು ಎತ್ತಬೇಕಾಗಿರುವುದು ಕೂಡ ಇಲ್ಲ. ಈಗಾಗಲೇ ತಮ್ಮ ಎದುರುಗಡೆ ಹೇಳಿದಂತಹ ಕಲಂ : 13 ರಲ್ಲಿ ನಾವು ಹೇಳಿದ್ದೇವೆ. ಎಲ್ಲೆಲ್ಲಿ ವಿಶೇಷ ನ್ಯಾಯಾಲಯಗಳು ಇಲ್ಲ, ಅಲ್ಲಿ ಮಾತ್ರ ಜೆ.ಎಂ.ಎಫ್.ಸಿ. ನ್ಯಾಯಾಲಯಗಳಿಗೆ Special court ನ ಅಧಿಕಾರವನ್ನು ನಾವು ಕೊಟ್ಟಿದ್ದೇವೆ. ಮತ್ತು ಮೇಲ್ಮನವಿ ಹೈಕೋರ್ಟ್‌ಗೆ ಮತ್ತ ಸುಪ್ರೀಕೋರ್ಟ್‌ಗೆ ಮಾತ್ರ ಸಲ್ಲಿಸಬಹುದು. ಮಧ್ಯಂತರದಲ್ಲಿ ಯಾವ ಕೋರ್ಟ್‌ಗೂ ಕೂಡ ಇರುವುದಿಲ್ಲ. ಅದೇ ರೀತಿಯಾಗಿ ಈಗ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಏನಿದೆ, temples cannot own more than 20 acres. of land under Section 63 of Karnataka Land Reforms Act. ಒಂದು ಸ್ಟ್ಯಾಂಡರ್ಡ್ ಯೂನಿಟ್‌ಗೆ 54 ಎಕರೆಯನ್ನು ಇಟ್ಟುಕೊಂಡಿದ್ದಾರೆ. ಎರಡು ಯೂನಿಟ್‌ಗಳಷ್ಟು ಇಟ್ಟುಕೊಳ್ಳುವುದಕ್ಕೆ ಅಧಿಕಾರವಿದೆ. ಈಗ ಅದೇ ರೀತಿಯಾಗಿ for few temples permission may be granted to own land to the extent of one unit under Section 109(1).

ಆದ್ದರಿಂದ ಇವೆಲ್ಲವು one unit ಎಂದರೆ ನಿಮಗೆಲ್ಲಾ ಗೊತ್ತಿದೆ. Irrigated, wet land, ಇದ್ದರೆ 10 ಎಕರೆ ಇಲ್ಲಾ ಬೇರೆ ಈ ತರಹದ ಒಂದೆ ಬೆಳೆಯನ್ನು ಬೆಳೆಯುವಂತಹ ಖುಷ್ಕಿ ಜಮೀನು ಇದ್ದರೆ 54 ಎಕರೆ ನಮ್ಮ ಕಡೆ ಇರುತ್ತದೆ. ಆ standardization ಮಾಡಿರುವಂತಹದ್ದು ಪ್ರಾಯಶಃ ಭಾರತ ದೇಶದಲ್ಲಿ ಹಿಂದೆ ದಿವಂಗತ ದೇವರಾಜ್ ಅರಸ್‌ರವರ ಕಾಲದಲ್ಲಿ ಮತ್ತು ಮಲ್ಲಿಕಾರ್ಜುನ ಖರ್ಗೆಯವರ ಸರ್ಕಾರದ ಕಾಲದಲ್ಲಿ ತಂದಂತಹ ಭೂ ಸುಧಾರಣಾ ಕಾಯಿದೆ ಅತ್ಯಂತ ಪ್ರಗತಿಪರವಾದ ಕಾಯಿದೆಯಾಗಿದೆ. ಪ್ರಾಯಶಃ communist ರಾಜ್ಯಗಳಲ್ಲಿಯೂ ಕೂಡ ಅಂತಹ ಪ್ರಗತಿಪರವಾದ ಕಾಯಿದೆಯನ್ನು ತರುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟರಮಟ್ಟಿಗೆ ಅದು ಪ್ರಗತಿಪರವಾದ ಕಾನೂನಾಗಿದೆ.

ಇಲ್ಲಿ ಯಾರು ಛೇರ್ಮನ್‌ರಾಗಿರುತ್ತಾರೆ, ಅವರು ನಿವೃತ್ತರಾದಂತಹವರು ಆಗಿರಬಹುದು, ಅಥವಾ ಅವರು ಈಗಾಗಲೇ.........

ಶ್ರೀ ವಿ. ಸೋಮಣ್ಣ :- ಪಟ್ಟಣ ಪ್ರದೇಶದಲ್ಲಿ ಈ ಮುಜರಾಯಿ ಜಾಗವೇನು ಇದೆ, ಆ ಜಾಗವನ್ನು ದೇವಸ್ಥಾನದ ಅಭಿವೃದ್ಧಿಗೋಸ್ಕರ ಸೇರುತ್ತದೆ. ಅದನ್ನು lease ಕೊಟ್ಟು sub lease ಮಾಡಿ ಅವೆಲ್ಲವೂ ಕಾನೂನು ಬಾಹಿರವಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ :- ಈ ತರಹದ ಪ್ರಕರಣಗಳು ಅನೇಕ ಕಡೆಗೆ ಬಂದಿರುವಂತಹದ್ದು, ನಮ್ಮ ಬನಶಂಕರಿ ದೇವಾಲಯದಲ್ಲಿ ಏನೆಲ್ಲವೂ ಆಗಿದೆ ಎಂದಬು ತಮಗೆ ಗೊತ್ತಿದೆ. ಅದೇ ರೀತಿಯಾಗಿ ಕಾಡುಮಲ್ಲೇಶ್ವರ ದೇವಾಲಯದಲ್ಲಿ ಯಾರ್‍ಯಾರು ಅಕ್ರಮವಾಗಿ ಪ್ರವೇಶ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಿದೆ. ಅವೆಲ್ಲಕ್ಕೂ ಕೂಡ ಸಂಬಂಧಪಟ್ಟಹಾಗೆ,.............

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವೆಲ್ಲಕ್ಕಿಂತಲೂ ಹೆಚ್ಚಾಗಿ ಮಠಗಳ ಜಮೀನು ಇವೆ. ಬೆಂಗಳೂರಿನಲ್ಲಿ 68-70 ಮಠಗಳ ಜಮೀನುಗಳು ಕಾಣದ ಹಾಗೆ ಆಗಿದೆ.

ಶ್ರೀ ನೆ.ಲ. ನರೇಂದ್ರಬಾಬು :- ಉಯ್ಯಾಲೆ ಛತ್ರವೆಂದು ಸಂತೋಷ ಥೀಯೇಟರ್ ಹತ್ತಿರ ಇರುವ ಜಮೀನು ಕಾಣೆಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :- ಪಕ್ಕದಲ್ಲಿರುವಂತಹದ್ದು, ಅಲ್ಲಿದ್ದಂತಹ ಹೋಟೇಲ್‌ಗಳನ್ನು ಕಟ್ಟಿರುವುದು, ಮಠದ ಸ್ವಾಮಿಗಳೇ ಮಾರಿಕೊಂಡಿದ್ದಾರೆ. ಮಠದ ಭಕ್ತರೇ ಮಾರಿಕೊಂಡಿದ್ದಾರೆ. ಜನಗಳ ಮುಗ್ಧತೆಯನ್ನು ಈ ರೀತಿಯಾಗಿ ಶೋಷಣೆ ಮಾಡುವುದಕ್ಕೆ ಸಾಧ್ಯತೆ ಇದೆ. ಇಲ್ಲಿ ಸುಮಾರು 36 ಕ್ಕಿಂತ ಹೆಚ್ಚು ಮಠಗಳು ಇದ್ದವು. ಅಲ್ಲಿ ಎಲ್ಲರೂ ಕೂಡ ಅತಿಕ್ರಮಣ ಮಾಡಿದ್ದಾರೆ. ಬೇರೆಯವರು ತೆಗೆದುಕೊಂಡಿದ್ದಾರೆ.

ಶ್ರೀ ನೆ.ಲ. ನರೇಂದ್ರಬಾಬು :- ಉಯ್ಯಾಲೆ ಛತ್ರದ ಹತ್ತಿರ ಅಲ್ಲಿ ಮುಂದೆ ಬಾರ್ ಮಾಡಿಕೊಮಡಿದ್ದಾರೆ ಧರ್ಮರಾಯ ಸ್ವಾಮಿಯ ಗುಡಿಯ ಹತ್ತಿರ 250 ಎಕರೆ ಹೋಗಿದೆ.

ಶ್ರೀ ಎಂ.ಪಿ. ಪ್ರಕಾಶ್ :- ಆ ಕಾರಣಕ್ಕಾಗಿಯೇ ಇಂತಹ ಒಂದು ವ್ಯಾಪಕವಾಗಿರುವಂತಹ ಕಾನೂನನ್ನು ತರುತ್ತಿದ್ದೇವೆ. ಅದಕ್ಕಾಗಿ ತಾವುಗಳೆಲ್ಲರೂ

ಕೂಡ ಸಹಕಾರವನ್ನು ಕೊಟ್ಟಿದ್ದೀರಿ, ಈ ವಿಚಾರದಲ್ಲಿ ಮಾತನಾಡಿದ್ದೀರಿ, ಇದಕ್ಕೆ ಬಹಳ ಮುಖ್ಯವಾಗಿರುವಂತಹದ್ದು, ಮಾನ್ಯ ಸೋಮಣ್ಣನವರು ಪ್ರಸ್ತಾಪ ಮಾಡಿದರು. ಈ ಅಭಿವೃದ್ಧಿಯ ಸೆಪದ ಮೂಲಕವಾಗಿ land developers ಎಂದು ಅದನ್ನು ಅಭಿವೃದ್ಧಿಪಡಿಸುತ್ತೇವೆಂದು ನಮ್ಮ ಕನ್ನಡಿಗರಿಗಿಂತಲೂ ಹೆಚ್ಚು ಹೊರಗಡೆಯಿಂದ ಬಂದವರು ಕೂಡ ಬಹಳ ಜನರು ಇದ್ದಾರೆ. ಅವರೆಲ್ಲರೂ ಕೂಡ ಸರ್ಕಾರಿ ಭೂಮಿಯನ್ನು ಕಬಳಿಕೆಯನ್ನು ಮಾಡಿಕೊಂಡಿರುವುದು ಏನಿದೆ, ಅದನ್ನು ಪರಿಣಾಮಕಾರಿಯಾಗಿ ಹೆದರಿಸಿ ಅದರ ಮೂಲಕವಾಗಿ ಅದರಲ್ಲಿರತಕ್ಕಂತಹ ಆ ಒಂದು ಭೂಕಬಳಿಕೆಯನ್ನು ತಪ್ಪಿಸಬೇಕೆಂದು ಭೂಕಬಳಿಕೆ ಬಗ್ಗೆ ವಿಶೇಷ ಅರ್ಥವನ್ನು ಕೊಟ್ಟಿದ್ದೇವೆ. ಅದಕ್ಕೆ ನಿರ್ದಿಷ್ಟತೆಯನ್ನು ಸಹ ಕೊಟ್ಟಿದ್ದೇವೆ. ಯಾವುದೇ ತರವಾಗಿರುವಂತಹ ಅನುಮಾನಕ್ಕೆ ಆಸ್ಪದವಿಲ್ಲದಂತಹ ambiguity ಎಂದು ಏನು ಕರೆಯುತ್ತೇವೆ ಆ ತರಹದ ಅಸ್ಪಷ್ಟತೆಯಿಲ್ಲದಂತಹ ರೀತಿಯಲ್ಲಿ ಇದನ್ನು ನಾವು ಕೊಟ್ಟಿದ್ದೇವೆ.

ಇದು ಆಂಧ್ರಪ್ರದೇಶದ ಕಾನೂನಿನಲ್ಲಿಯೂ ಇದೆ. ಮುಜರಾಯಿ ಮತ್ತು ವಕ್ಫ್ ಪ್ರಾಪರ್ಟಿಗಳಲ್ಲಿಯೂ ಇದನ್ನು ಸೇರಿಸುವಂತಹದ್ದು ಇದೆ. ಈಗ ತಾವು ಹೇಳಿರುವಂತಹದ್ದು ಸಾರ್ವಜನಿಕ ಉಪಯೋಗಕ್ಕಾಗಿ ಎಲ್ಲಾ ಕಡೆಗಳಲ್ಲಿ ಸಿ.ಎ.ಸೈಟ್ ಎಂದು ಬಿಟ್ಟಿರುವುದು ಇದೆ. ಸಿ.ಎ.ಸೈಟ್ ಬಿಟ್ಟಿರುವಂತಹದ್ದು ಕೂಡ ಕಾನೂನಿನ ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳಬಹುದು. ಈಗ ತಮ್ಮ ಅನುಭವದ ಮೂಲಕವಾಗಿಯೂ ಕೂಡ ತಾವು ಉದಾಹರಣೆಗಾಗಿ ಹೇಳಿದ್ದೀರಿ. ಎಲ್ಲರ ಅನುಭವದ ಮೂಲಕವಾಗಿಯೂ ಕೂಡ ಹೇಳಿದ್ದೀರಿ, ಬಿಡಿಎ ಕೆಳಗಡೆ 102 ಅನಧಿಕೃತವಾದಂತಹ ಬಡಾವಣೆಗಳು ಇವೆ. ಈಗ ಹಿಂದೆ ನಮ್ಮಂತಹ ಅಪ್ರಯೋಜಕರು ಅಧಿಕಾರವನ್ನು ಇಟ್ಟುಕೊಂಡಂತಹ ಸಂದರ್ಭದಲ್ಲಿ ಅನ್ಯ ಕಾರಣಗಳಿಗಾಗಿ ನಾವು ಅವಕಾಶವನ್ನು ಕಣ್ಮುಚ್ಚಿ ಕಲ್ಪಿಸಿಕೊಟ್ಟಿದ್ದೇವೆ. ಆದರೆ ಅದು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡುಬಿಟ್ಟಿದೆ. ಅದು ಮೂಲ ಸ್ವರೂಪವನ್ನು ಕಳೆದುಕೊಂಡು ಕಬಳಿಕೆದಾರರು ಕೆರೆಯಂಗಳದಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಅವರನ್ನು ನಾವು ಬಿಡಿಸಬೇಕಾದರೆ ಅಲ್ಲಿಯ ಕೆರೆಯ ಸ್ವರೂಪವನ್ನೇ ತೆಗೆದುಹಾಕಿದ್ದೇವೆ. ಎಲ್ಲಿ ನೀರು ಹರಿದು ಬರಬೇಕೋ, ಆ ಕಾಲುವೆಗಳನ್ನು ನಾವು ಮುಚ್ಚಿಹಾಕಿದ್ದೇವೆ. ಅಲ್ಲಿರುವಂತಹ ಯಾರನ್ನಾದರೂ ಒಕ್ಕಲೆಬ್ಬಿಸಬೇಕು, ಕ್ರಮವನ್ನು ಕೈಗೊಳ್ಳಬೇಕೆಂದಾಗ ನಾವೇ ಜನಪ್ರತಿನಿಧಿಗಳಾಗಿ ಅಡ್ಡಬರುತ್ತೇವೆ ಬಡವರು ಮನೆಗಳನ್ನು ಕಟ್ಟಿಸಿದ್ದಾರೆ,

ಅವರು ಅಮಾಯಕರು, ತಪ್ಪಾಗಿ ಆಗಿದೆ. ನೀವು ಅವರನ್ನು ಕೈಬಿಟ್ಟು ಬಿಡಿ ಎಂದು ಒತ್ತಡಗಳು ಬರುತ್ತದೆ. ಈ ಎಲ್ಲಾ ಹಿನ್ನೆಲೆಗಳು ಇರುವಂತಹದ್ದು, ಅನರ್ಹರಾಗಿರುವಂತಹ ಮತ್ತು ಅನ್ಯಕಾರಣಗಳ ಉದ್ದೇಶಕ್ಕಾಗಿ ಅಧಿಕಾರದಲ್ಲಿರುವಂತಹ ರಾಜಕಾರಣಿಗಳು ಆಗಿರಬಹುದು, ಅಧಿಕಾರಿಗಳೇ ಆಗಿರಬಹುದು, ಕೆಳಮಟ್ಟದಲ್ಲಿರುವಂತಹ ಅಧಿಕಾರಿಗಳು ಆಗಿರಬಹುದು. ಇವತ್ತು ನಮ್ಮ ಪೋಲೀಸ್ ಠಾಣೆಗಳ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಈ land dispute settlement ಮಾಡುವಂತಹ ನಮ್ಮ ಪೋಲೀಸ್ ಠಾಣೆಗಳಾಗಿ ಕುಳಿತುಬಿಟ್ಟಿದೆ. ಇವರು ಒಂದು ಕಡೆಯಿಂದ ನಿರ್ಣಯವನ್ನು ತರುವುದು, ಅವರು ಮತ್ತೊಂದು ಕಡೆಯಿಂದ ತರುವುದು. ಇಲ್ಲಿ ಏನಾಗಿದೆ ಎಂದರೆ, ಒಂದು ಗುಂಪು ಯಾವುದೋ ಒಂದು injunction sub-ordinate court ನಿಂದ ತಂದಿದ್ದಾರೆ ಅವರ ಕಡೆಗೆ ಒಬ್ಬರು ಆಗುತ್ತಾರೆ. High Court ನಿಂದ ಇದನ್ನು ತಂದಿದ್ದಾರೆಂದು ಅವರು ಹೇಳುತ್ತಾರೆ. ಅವರೇ interpretation ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ :- ಪಾಪ ಬೇಡ ಕಷ್ಟ ಪೋಲೀಸ್‌ನವರಿಗೆ,

ಶ್ರೀ ಎಂ.ಪಿ. ಪ್ರಕಾಶ್ :- ಹೌದು. ಅದು ಯಾವುದೋ status quo ಎಂದು ಶುರುವಾಗುತ್ತದೆ. ಯಾವುದೋ ಮಿತವಾದ ಉದ್ದೇಶವನ್ನು ನೆರವೇರಿಸಬೇಕೆಂದು ಇರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- Court decision ಇದೆ. Highest ಕೊಟ್ಟು status quo maintain ಮಾಡಬೇಕೆಂದು order ಮಾಡಬಾರದು ಎಂದು ಇದ್ದರೂ with all that lower court ನವರು ಮಾಡುತ್ತಿದ್ದಾರೆ. ಅದನ್ನು ಮಾಡಬಾರದು ಎಂದು ಇದೆ. Caveat ಇದ್ದಾಗ ಅದಕ್ಕೆ ಸ್ಟೇ ಕೊಡಬಾರದು status quo ಕೊಡುತ್ತೇವೆಂದು ಜಡ್ಜ್‌ಗಳು ಇವತ್ತು ಹೇಳುತ್ತಾರೆ ಇದನ್ನು ತಾವು ಸ್ವಲ್ಪ ನೋಡಬೇಕು.

ಶ್ರೀ ಸಿದ್ಧರಾಮಯ್ಯ :- ಈ act ಗಳು ಬಂದ ಮೇಲೆ without hearing the other party temporary injunction ಕೊಡಬಾರದು ಎಂದು ಆಯಿತು. ಅದು ಆದ ಮೇಲೆ ಇದನ್ನು ಬಿಟ್ಟು status quo may be maintained ಎಂದರು. status quo ಯಾವುದು ಎಂದು ಗೊತ್ತಾಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಯಾರಾದರೂ ಹೇಳಿದರೆ, status quo ಎಂದರೆ ಯಾವುದು ಅದು?

ಶ್ರೀ ಜೆ.ಸಿ. ಮಾಧುಸ್ವಾಮಿ :– ಬಸ್ಸು ಹೋಗುತ್ತಿದ್ದ ರೋಡನ್ನು ನಿಲ್ಲಿಸಿದ್ದಾರೆಂದರೆ status quo maintain ಮಾಡಿ ಎಂದು ಹೇಳಿದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲಿ ನಮಗೆ ಅದು ಏನೆಂದು ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– status quo ಅಂದರೆ ಪೊಲೀಸ್ ಸ್ಟೇಷನ್‌ಗೆ ಹೋದರೆ ಜೆಸ್ಸಿ ಲಾಠಿ ಉಸ್ಕಿ ಭೈಂಸ್

ಶ್ರೀ ಎಂ.ಪಿ. ಪ್ರಕಾಶ್ :– ನಿಜವಾಗಿ might is right ಎಂದು ಹೇಳಿ ಇವತ್ತಿನ ಕಾಲಕ್ಕೆ ಅದು ಅಲ್ಲ ಎಲ್ಲಾ ಕಾಲದಲ್ಲಿಯೂ ಕೂಡ ಭೂಜಬಲರಾಗಿರುವಂತಹವರು, ಹಣ ಇರುವವರು ಇವರಿಬ್ಬರಿಗಿಂತಲೂ ಬುದ್ಧಿ ಚಾತುರತೆಯನ್ನು ಇರುವವರು, ಇವರು ಬಹಳ ಅಪಾಯಕಾರಿಯಾದಂತಹ ಜನರಾಗಿದ್ದಾರೆ. ಈ ಮೂರು ಜನರು ಸೇರಿದರೆ ಯಾವುದನ್ನಾದರೂ ಕೂಡ ಬದಲಾವಣೆಯನ್ನು ಮಾಡಬಹುದು. ಅದು ನಾವು ಮತ್ತು ಸಿದ್ಧರಾಮಯ್ಯನವರು.........

ಶ್ರೀ ಕೆ. ಶ್ರೀನಿವಾಸಗೌಡ :– ಈ ಹೌಸ್‌ನಲ್ಲಿ ಗ್ರಹಚಾರ, ನೀವು ಏಕೆ, ಆ ಡಿಗ್ರಿಯನ್ನು ತೆಗೆದುಕೊಳ್ಳುತ್ತೀರಿ. ಬುದ್ಧಿ ಜಾಸ್ತಿ ಇರುವವರು ನೀವೇ 224 ಸದಸ್ಯರಲ್ಲಿ ಆ ಕ್ಯಾಟಗರಿಗೆ ಹೋದರೆ,. ನೀವು ಅಪಾಯಕಾರಿಯಾಗಿದ್ದೀರಲ್ಲಾ?

ಶ್ರೀ ಎಂ.ಪಿ. ಪ್ರಕಾಶ್ :– ನಾನು ಮತ್ತು ಸನ್ಮಾನ್ಯ ಶ್ರೀನಿವಾಸಗೌಡರು ಮತ್ತು ಸಿದ್ಧರಾಮಯ್ಯನವರು ತೆಗೆದುಕೊಂಡ ನಿರ್ಣಯಗಳ ಮೇಲೆ ನಾವೂ ಕೂಡ ಇದೇ ತರಹದ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದಿದ್ದೇವೆ. ನೀವು ನಮಗಿಂತ ಜಾಸ್ತಿ ಬುದ್ಧಿವಂತರಿದ್ದೀರಿ. ಈ ಹುಮ್ಮಸ್ಸು, ಹೊರಪ್ರಪಂಚ ನೋಡಿದವ ನಾನಲ್ಲಾ ಶ್ರೀನಿವಾಸಗೌಡರೆ, ಬರೀ ಇಷ್ಟೇ ನಾವು ನೋಡಿದ್ದೇವೆ. ಅದು ಏನೇ ಇರಲಿ.

ಶ್ರೀ ಸಿದ್ಧರಾಮಯ್ಯ :– ಹೊರ ಪ್ರಪಂಚವನ್ನು ನೋಡಿಬಿಟ್ಟಿದ್ದರೆ ನಮ್ಮ ಗತಿ ಏನು?

ಶ್ರೀ ಎಂ.ಪಿ. ಪ್ರಕಾಶ್ :– ಏನಾದರೂ ಹೊರ ಪ್ರಪಂಚ ನೋಡಿದರೆ ಅದು ನಿಮ್ಮ ಲೀಡರ್‌ಶಿಪ್‌ನಲ್ಲಿ ಹೋಗುವಂತಹ ಕೆಲವು ಪ್ರದೇಶಗಳಿಗೆ ಹೋಗಿ ಬಂದಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ :- ಹೊರ ಪ್ರಪಂಚದ ಅರ್ಥ ಯಾವುದು? ಹೊರಪ್ರಪಂಚದ definition ಯಾವುದು?

ಶ್ರೀ ಬಿ.ಸಿ. ಪಾಟೀಲ್ :- ಹೊರ ಪ್ರಪಂಚಕ್ಕೆ definition ಏನು? ಯಾವ ಅರ್ಥಕ್ಕೆ ಹೊರ ಪ್ರಪಂಚ, ಅದಕ್ಕೆ definition ಬೇಕು?

ಶ್ರೀ ಎಂ.ಪಿ. ಪ್ರಕಾಶ್ :- ಅಲ್ಲೂ ಪರದೇಶಕ್ಕೆ ಹೆಚ್ಚು ಶ್ರೀನಿವಾಸಗೌಡರು ಹೋಗುತ್ತಿರುತ್ತಾರೆ, ಈಗ ಅಧಿವೇಶನ ಇದೆ ಎನ್ನುವ ಕಾರಣಕ್ಕಾಗಿ ಇದ್ದಾರೆ. ಅವರ ಪಾಸ್‌ಪೋರ್ಟ್‌ನ್ನು ತೆಗೆದುಕೊಂಡು ನೋಡಿ. ಅವರು ಎಷ್ಟು ಸಲ ಪಾಸ್‌ಪೋರ್ಟ್‌ಗಳನ್ನು ತೆಗೆದುಕೊಂಡಿದ್ದಾರೆಂದು ಗೊತ್ತಾಗುತ್ತದೆ. ತಾವೆಲ್ಲರೂ ಬಹಳ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದೀರಿ, ಇದು ಒಂದು ಪ್ರಯೋಗ, ಇದು ಒಂದು ಕಾನೂನು. ಹೊಸ ಕಾನೂನುಗಳು ಬಂದಾಗ ಕೆಲವು teething troubles ಎಂದು ಏನು ಕರೆಯುತ್ತಿರುತ್ತೇವೆ ಅವೆಲ್ಲವೂ ಇದ್ದೇ ಇರುತ್ತದೆಯಲ್ಲಾ? ಅಮೂಲ್ಯವಾಗಿರುವಂತಹದ್ದು, ತಾವು ಎತ್ತಿರುವಂತಹ ಅನುಮಾನಗಳನ್ನು ಎಲ್ಲಿ ಅದನ್ನು ಕಾಲಕಾಲಕ್ಕೆ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ, ಅದನ್ನು ನಾವು ಸರಿಪಡಿಸುತ್ತೇವೆ. ಇದನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿಕೊಡುವಂತಹ ಸಂದರ್ಭದಲ್ಲಿ ಅವರು ಕೂಡ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡುವಂತಹ ಸಾಧ್ಯತೆಗಳು ಸಹ ಇರುತ್ತದೆ. ಅದನ್ನು ಬೇಗನೇ ತರುತ್ತೇವೆಂದು ಮಾಡಿ ತಾವು ದಯವಿಟ್ಟು ಮಾನ್ಯ ಕಂದಾಯ ಸಚಿವರು ತಂದಂತಹ ಭೂಕಬಳಿಕೆ ವಿಧೇಯಕಕ್ಕೆ ಹೇಗೆ ಒಪ್ಪಿಗೆಯನ್ನು ಕೊಟ್ಟಿದ್ದೀರಿ, ಅದೇ ರೀತಿಯಾಗಿ ಈ ವಿಧೇಯಕಕ್ಕೂ ಕೂಡ ತಾವುಗಳು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವಿಬ್ಬರೂ ಸೇರಿ ಇದನ್ನು Mini TADA Act ಮಾಡಲಿಕ್ಕೆ ಹೋಗಬೇಡಿ.

ಶ್ರೀ ಎಂ.ಪಿ. ಪ್ರಕಾಶ್ :- Mini TADA ಇಲ್ಲಾ ತಮ್ಮ ಕಾಲದಲ್ಲಿ MOCA ತರಹದಲ್ಲಿ KOCA ಮಾಡಿದಿರಿ, ಆದರೆ KOCA ನೀವು ಜಾರಿಗೊಳಿಸಲಿಲ್ಲ.

ಶ್ರೀ ಸಿದ್ಧರಾಮಯ್ಯ :- ನೀವು ಇದನ್ನು bona fide intention ನಿಂದ ಮಾಡಿದ್ದರೂ ಸಹಿತ ಇದರ ದುರುಪಯೋಗದ ಸಾಧ್ಯತೆ ಹೆಚ್ಚಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಖಂಡಿತಾ ಆಗುವ ಸಾಧ್ಯತೆ ಇರುತ್ತದೆ. ಮನುಷ್ಯ ಎನ್ನುವವನು ಎಷ್ಟು ವಿಚಿತ್ರವಾದ ಪ್ರಾಣಿ. ಎಲ್ಲಾ ಅಧಿಕಾರದಲ್ಲಿಯೂ ಕೂಡ ದುರುಪಯೋಗ ಮಾಡಿಸಿಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ಆದ್ದರಿಂದ ಇದು ಮನುಷ್ಯನ ವ್ಯಕ್ತಿತ್ವ ಮತ್ತು ನೈತಿಕತೆಯ ಮೇಲೆ ಅವಲಂಬಿತವಾದುದು. ಯಾವುದೇ ಕಾನೂನನ್ನು ತಂದರೂ ಕೂಡ ಅದು ಖಂಡಿತವಾಗಿಯೂ ದುರುಪಯೋಗವನ್ನು ಕೆಲವು ಜನ ಮಾಡುತ್ತಾರೆ. ಎಲ್ಲಾ ಜನರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

(6:00 ಗಂಟೆ)

ತಮಗೆಲ್ಲಾ ಅಕ್ಬರ್ ಬೀರ್‌ಬಲ್ ಕಥೆ ಗೊತ್ತಿರಬಹುದು, ಲಂಚ ಇಲ್ಲದಂಥ ಜಾಗಕ್ಕೆ ಈತನನ್ನು ಹಾಕಿ ಎಂದು ಹೇಳಿದ ಮೇಲೆ ಅಂಥ ಜಾಗ ಎಲ್ಲಿಯೂ ಇಲ್ಲವೆಂದು ಬೀರ್‌ಬಲ್ ಹೇಳಿದನಂತೆ. ಅಕ್ಬರ್ ಇವನನ್ನು ನೀನು ಸಮುದ್ರದ ಅಲೆಗಳನ್ನು ಎಣಿಸುತ್ತಾ ಕುಳಿತುಕೋ ಎಂದು ಆತನನ್ನು ಅಲ್ಲಿಗೆ ವರ್ಗ ಮಾಡಿದರೆ, ಅವನು ಅಲೆಗಳನ್ನು ಎಣಿಸುತ್ತಾ ಕುಳಿತಾಗ ಹಡಗುಗಳು ತೀರ ಪ್ರದೇಶಕ್ಕೆ ಬರಬೇಕಾದರೆ ಅವುಗಳನ್ನೆಲ್ಲಾ ಅಲ್ಲಿಯೇ ನಿಲ್ಲಿಸಿಬಿಟ್ಟನಂತೆ. ನೋಡಿ ನಾನು ಸಮುದ್ರದ ಅಲೆಗಳನ್ನು ಎಣಿಸಬೇಕು, ನಿಮ್ಮ ಹಡಗುಗಳು ಬರುವುದರ ಮೂಲಕ ಅಲೆಗಳೆಲ್ಲಾ ವಿಚಲಿತವಾಗುತ್ತವೆ, ಆದ್ದರಿಂದ ನನಗೆ ಅಲೆಗಳ ಸಂಖ್ಯೆಯನ್ನು ಎಣಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ನೀವು ಈ ತೀರಕ್ಕೆ ಬರುವಂತಿಲ್ಲ ಎಂದು ಆ ಹಡಗುಗಳನ್ನು ನಿಲ್ಲಿಸಿದನಂತೆ. ಅವರು ಅವನಿಗೆ ಏನಾದರೂ ವ್ಯವಸ್ಥೆ ಮಾಡಿದಾಗ ಎಲ್ಲಾ ಹಡಗುಗಳನ್ನು ಅಲ್ಲಿ ಬರುವುದಕ್ಕೆ ಬಿಟ್ಟನಂತೆ ಆದ್ದರಿಂದ.....

ಶ್ರೀ ಕೆ. ಶ್ರೀನಿವಾಸಗೌಡ :– ಹಳ್ಳಿಗಳ ಕಡೆ ಒಂದು ಮಾತು ಹೇಳುತ್ತಾರೆ, ಜೇನು ತೆಗೆಯುವಾಗ ಕೈ ನೆಕ್ಕಲಿ ಎಂದು. ಇತ್ತೀಚಿನ ಪರಿಸ್ಥಿತಿ ಏನಾಗಿದೆಯೆಂದರೆ ಈಗ ರಾಣಿಜೇನನ್ನು ತಿನ್ನುತ್ತಿದ್ದಾರೆ, ಅದು ಮಹಾಪಾಪ ಎಂದು ಹೇಳುವುದಷ್ಟೇ.

ಶ್ರೀ ಎಂ.ಪಿ. ಪ್ರಕಾಶ್ :– ಖಂಡಿತ, ಇದನ್ನು ಪಟೇಲರು ಅನೇಕ ಸಾರಿ ಹೇಳಿದ್ದಾರೆ, ನಾವೆಲ್ಲ ಕೆಲವರು ಬಹಳ ಚೆನ್ನಾಗಿರತಕ್ಕಂಥ ಜನ ಎಂದು ಹೇಳಿಕೊಂಡಿದ್ದಂಥವರು ಕೂಡ ಏನೋ ಅಲ್ಲಿ ಎಣ್ಣೆ ಅಳೆಯುವ ಜಾಗದಲ್ಲಿ ಕುಳಿತಿದ್ದೇವೆ. ಆ ಎಣ್ಣೆಯನ್ನು ನಾವೇನು ತಿಂದಿಲ್ಲಪ್ಪಾ. ಆದರೆ ಕೈಗೆ ಹಚ್ಚಿದ ಎಣ್ಣೆಯನ್ನು ನೆಕ್ಕಿಕೊಂಡಿದ್ದೇವೆಂದು ಹೇಳಿದ್ದರಂತೆ. ಇಲ್ಲಿರತಕ್ಕಂಥವರ comparative honesty ಅಷ್ಟೇ. ಇದರಲ್ಲಿ ನಾವು ಬಹಳ ಹರಿಶ್ಚಂದ್ರರಾಗಿದ್ದೇವೆ ಎಂದು ಹೇಳುವುದು

ಪ್ರಾಯಶಃ ಎಲ್ಲೋ ಒಬ್ಬಿಬ್ಬರು ಇರಬಹುದೇನೋ. ಉಳಿದಂಥವರು ನಾವೆಲ್ಲರೂ ಕೂಡ ಅದನ್ನು ಎದೆ ತಟ್ಟಿ ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ವ್ಯವಸ್ಥೆ, ಇವತ್ತಿನ ಚುನಾವಣೆ, ಇವತ್ತಿನ ನಮ್ಮ ಜೀವನದ ಶೈಲಿ ಇವನ್ನೆಲ್ಲಾ ನೋಡಿದರೆ ಪ್ರಾಯಶಃ ಅಲ್ಲ ಸ್ವಲ್ಪ ಮಟ್ಟಿಗೆ ಆ ಮುಂಗೈಗೆ ಹಚ್ಚಿದ ಎಣ್ಣೆಯನ್ನು ನೆಕ್ಕಿಕೊಂಡಿದ್ದೇವೆ ಆದ್ದರಿಂದ ದಯಮಾಡಿ ಸನ್ಮಾನ್ಯ ಅಧ್ಯಕ್ಷರೇ, ಸದನದ ಎಲ್ಲಾ ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ " 2007 ನೇ ಸಾಲಿನ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2, 3 ಮತ್ತು 4 ರಿಂದ 21 ರವರೆಗೆ

ಅಧ್ಯಕ್ಷರು :- "ಖಂಡ 2, 3 ಮತ್ತು 4 ರಿಂದ 21 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2, 3 ಮತ್ತು 3 ರಿಂದ 21 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ. 2007 ರ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಅಂಗೀಕರಿಸಬೇಕಾಗಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, 2007 ರ ಕರ್ನಾಟಕ ಭೂ-ಕಬಳಿಕೆ (ನಿಷೇಧ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪ್ರಸ್ತಾವದ ಅಂಗೀಕಾರ

ಖಂಡ 3

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರೆಲ್ಲರ ಅವಗಾಹನೆಗಾಗಿ ಕಳುಹಿಸಿಕೊಟ್ಟಿದ್ದೇವೆ. ಹಿರಿಯರಾದ ಮಲ್ಲಿಕಾರ್ಜುನ ಖರ್ಗೆಯವರು ಕೂಡ ಆ ತಿದ್ದುಪಡಿಯ ಬಗ್ಗೆ ಮಾತನಾಡಿದರು, " ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007 (2007 ರ ವಿಧಾನಸಭೆಯ ವಿಧೇಯಕ ಸಂಖ್ಯೆ : 27) ಕ್ಕೆ ತಿದ್ದುಪಡಿಯಾಗಿರುವಂತೆ ತಾವು ಅದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ. ಸದರಿ ವಿಧೇಯಕದಲ್ಲಿ, 3 ನೇ ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ :-

"ಪರಂತು, ಕೊಡಗು ಜಿಲ್ಲೆಯ ಜುಮ್ಮಾ, ಬಾಣೆ, ಕಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ, ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳಿಗೆ ಅಥವಾ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 94ಎ, 94ಬಿ ಮತ್ತು 94ಸಿ, ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಅಥವಾ ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಸರ್ಕಾರದ ಭೂಮಿಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ " ಪರಂತು, ಕೊಡಗು ಜಿಲ್ಲೆಯ ಜುಮ್ಮಾ ಬಾಣೆ, ಕಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ, ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳಿಗೆ ಅಥವಾ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಅಥವಾ ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಸರ್ಕಾರದ ಭೂಮಿಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 3 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, " ಖಂಡ 3 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 3 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು :- ಈಗ ಸದನವನ್ನು ನಾಳೆ ಬೆಳಿಗ್ಗೆ 10 : 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 37 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 12-04-2007 ರಂದು ಬೆಳಿಗ್ಗೆ 10 : 30 ಗಂಟೆಗೆ ಸೇರುವಂತೆ ನಿರ್ಣಯಿಸಿತು)

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಐದನೇ ಅಧಿವೇಶನ

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2007

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 29)